**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಕರ್ನಾಟಕ ವಿಧಾನ ಪರಿಷತ್ತು**

24ನೇ ಮಾರ್ಚ್ 2017
ಶುಕ್ರವಾರ

**ವಿಷಯಾನುಕ್ರಮಣಿಕೆ**

1. **ಚುಕ್ಕೆ ಗುರುತಿನ ಹಾಗೂ ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳ ಮಂಡನೆ.**

2. **ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು.**

**ಅ) ಧಾರವಾಡ-ಹುಬ್ಬಳ್ಳಿ ನಗರದಲ್ಲಿ ಮರಳಿನ ಅಭಾವ ಉಂಟಾಗಿರುವ ಬಗ್ಗೆ.**
ಶ್ರೀ ಬಸವರಾಜ ಎಸ್.ಹೊರಟ್ಟಿ
ಶ್ರೀ ವಿನಯ್ ಕುಲಕರ್ಣಿ (ಗಣಿ ಮತ್ತು ಭೂ ವಿಜ್ಞಾನ ಸಚಿವರು)

ಆ) ಮರು**ವಿನ್ಯಾಸಗೊಳಿಸಿದ ಹವಾಮಾನ ಆಧಾರಿತ ಅಡಿಕೆ ಬೆಳೆ ವಿಮೆ ಯೋಜನೆ ಕುರಿತು.**
ಶ್ರೀ ಶ್ರೀಕಾಂತ ಎಲ್.ಘೋಟ್ನೇಕರ್
ಡಾ|| ಜಿ.ಪರಮೇಶ್ವರ್(ಸಭಾನಾಯಕರು)

**ಇ) ವಿಜಯಪುರ ಜಿಲ್ಲೆಯ ಕರ್ನಾಟಕ ಗೃಹ ಮಂಡಳಿಯ ಅವ್ಯವಹಾರ ಕುರಿತು.**
ಶ್ರೀ ಬಸನಗೌಡ ರಾ.ಪಾಟೀಲ್ ಯತ್ನಾಳ್
ಡಾ|| ಜಿ.ಪರಮೇಶ್ವರ್(ಸಭಾನಾಯಕರು)

**ಈ) ಹುಬ್ಬಳ್ಳಿಯ ವಿದ್ಯಾನಗರ ಪೋಲೀಸ್ ಠಾಣೆ ವ್ಯಾಪ್ತಿಯ ಕಾಡುಸಿದ್ದೇಶ್ವರ ಕಾಲೇಜಿಗೆ ಪರೀಕ್ಷೆಗೆ ಬರುತ್ತಿದ್ದ ಚಿನ್ಮಯ ಕಾಲೇಜಿನ ವಿದ್ಯಾರ್ಥಿನಿಯನ್ನು ಚುಡಾಯಿಸಿದರೆಂಬ ಕಾರಣಕ್ಕಾಗಿ ಹಲ್ಲೆ ನಡೆದ ಬಗ್ಗೆ.**
ಶ್ರೀ ಪ್ರದೀಪ್ ಶೆಟ್ಟರ್
ಡಾ|| ಜಿ.ಪರಮೇಶ್ವರ್(ಸಭಾನಾಯಕರು)

**ಉ) ಶಿವಮೊಗ್ಗ, ಮೈಸೂರು ಮತ್ತು ಕಲಬುರ್ಗಿ ಜಿಲ್ಲೆಯ ರಂಗಾಯಣ ನಿರ್ದೇಶಕರ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ.**
ಶ್ರೀ ಕೆ.ಟಿ.ಶ್ರೀಕಂಠೇಗೌಡ
ಶ್ರೀಮತಿ ಉಮಾಶ್ರೀ(ಕನ್ನಡ ಮತ್ತು ಸಂಸ್ಕೃತಿ ಸಚಿವರು)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**3. ಸಚಿವರ ಹೇಳಿಕೆ**

**ಅ) ಅತಿಥಿ ಉಪನ್ಯಾಸಕರ ಗೌರವಧನ ಹೆಚ್ಚಿಸುವ ಬಗ್ಗೆ.**

ಶ್ರೀ ಬಸವರಾಯ ರಾಯರೆಡ್ಡಿ(ಉನ್ನತ ಶಿಕ್ಷಣ ಸಚಿವರು)
ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧ ಪಕ್ಷದ ನಾಯಕರು)

**4. ಸಭೆಯ ಮುಂದಿಡಲಾದ ಕಾಗದ ಪತ್ರಗಳು.**

**5. ವರದಿಯನ್ನೊಪ್ಪಿಸುವುದು.**

**6. ಶಾಸನ ರಚನೆ**

**ವಿಧೇಯಕಗಳ ಪರ್ಯಾಲೋಚನೆ ಮತ್ತು ಅಂಗೀಕಾರ.**

**ಅ) ಕರ್ನಾಟಕ ವೈದ್ಯಕೀಯ ನೋಂದಣಿ(ತಿದ್ದುಪಡಿ) ವಿಧೇಯಕ, 2017**

ಡಾ|| ಶರಣಪ್ರಕಾಶ್ ರುದ್ರಪ್ಪ ಪಾಟೀಲ್(ವೈದ್ಯಕೀಯ ಶಿಕ್ಷಣ ಸಚಿವರು)
ಕ್ಯಾಪ್ಟನ್ ಗಣೇಶ್ ಕಾರ್ಣಿಕ್(ವಿರೋಧ ಪಕ್ಷದ ಮುಖ್ಯ ಸಚೇತಕರು)
ಶ್ರೀ ಎಸ್.ಆರ್.ಪಾಟೀಲ್
ಶ್ರೀ ಐವನ್ ಡಿ'ಸೋಜಾ(ಸರ್ಕಾರದ ಮುಖ್ಯ ಸಚೇತಕರು)
ಶ್ರೀ ಎಸ್.ವ್ಹಿ.ಸಂಕನೂರ
ಶ್ರೀ ಕೆ.ಟಿ.ಶ್ರೀಕಂಠೇಗೌಡ
ಶ್ರೀ ಬಸನಗೌಡ ಆರ್.ಪಾಟೀಲ್ ಯತ್ನಾಳ್
ಶ್ರೀ ಶರಣಪ್ಪ ಮಟ್ಟೂರ
ಶ್ರೀ ರಿಜ್ವಾನ್ ಅರ್ಷದ್
ಶ್ರೀ ಆರ್.ಪ್ರಸನ್ನಕುಮಾರ್
ಶ್ರೀ ವಿ.ಎಸ್.ಉಗ್ರಪ್ಪ
ಶ್ರೀ ಕೆ.ಬಿ.ಶಾಣಪ್ಪ
ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ

(ವಿಧೇಯಕ ಅಂಗೀಕರಿಸಲ್ಪಟ್ಟಿತು)

**ಆ) ಕರ್ನಾಟಕ ವೃತ್ತಿ ಶಿಕ್ಷಣ ಸಂಸ್ಥೆಗಳ(ಪ್ರವೇಶ ನಿಯಂತ್ರಣ ಮತ್ತು ಶುಲ್ಕ ನಿಗದಿ) (ತಿದ್ದುಪಡಿ) ವಿಧೇಯಕ, 2017**

ಶ್ರೀ ಬಸವರಾಜ ರಾಯರೆಡ್ಡಿ(ಉನ್ನತ ಶಿಕ್ಷಣ ಸಚಿವರು)
ಡಾ|| ಶರಣಪ್ರಕಾಶ್ ರುದ್ರಪ್ಪ ಪಾಟೀಲ್(ವೈದ್ಯಕೀಯ ಶಿಕ್ಷಣ ಸಚಿವರು)
ಕ್ಯಾಪ್ಟನ್ ಗಣೇಶ್ ಕಾರ್ಣಿಕ್(ವಿರೋಧ ಪಕ್ಷದ ಮುಖ್ಯ ಸಚೇತಕರು)
ಶ್ರೀ ವಿ.ಎಸ್.ಉಗ್ರಪ್ಪ
ಶ್ರೀ ಐವನ್ ಡಿ'ಸೋಜಾ
ಶ್ರೀ ಕೆ.ಟಿ.ಶ್ರೀಕಂಠೇಗೌಡ

(ವಿಧೇಯಕ ಅಂಗೀಕರಿಸಲ್ಪಟ್ಟಿತು)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಇ) ಕರ್ನಾಟಕ ಭೂ ಕಂದಾಯ(ಎರಡನೇ ತಿದ್ದುಪಡಿ) ವಿಧೇಯಕ, 2017**

ಶ್ರೀ ಕಾಗೋಡು ತಿಮ್ಮಪ್ಪ(ಕಂದಾಯ ಸಚಿವರು)
ಶ್ರೀ ಕೋಟ ಶ್ರೀನಿವಾಸ ಪೂಜಾರಿ
ಶ್ರೀ ವಿ.ಎಸ್.ಉಗ್ರಪ್ಪ

(ವಿಧೇಯಕ ಅಂಗೀಕರಿಸಲ್ಪಟ್ಟಿತು)

**ಈ) ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿ (ತಿದ್ದುಪಡಿ) ವಿಧೇಯಕ, 2017**

ಶ್ರೀ ಸಂತೋಷ್ ಲಾಡ್(ಕಾರ್ಮಿಕ ಸಚಿವರು)
ಕ್ಯಾಪ್ಟನ್ ಗಣೇಶ್ ಕಾರ್ಣಿಕ್(ವಿರೋಧ ಪಕ್ಷದ ಮುಖ್ಯ ಸಚೇತಕರು)

(ವಿಧೇಯಕ ಅಂಗೀಕರಿಸಲ್ಪಟ್ಟಿತು)

**(ಉ) ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ(ತಿದ್ದುಪಡಿ) ವಿಧೇಯಕ, 2017**

ಶ್ರೀ ಬಸವರಾಜ ರಾಯರೆಡ್ಡಿ
ಶ್ರೀ ಅರುಣ್ ಶಹಾಪುರ
ಕ್ಯಾಪ್ಟನ್ ಗಣೇಶ್ ಕಾರ್ಣಿಕ್
ಶ್ರೀ ವಿ.ಎಸ್.ಉಗ್ರಪ್ಪ

(ವಿಧೇಯಕ ಅಂಗೀಕರಿಸಲ್ಪಟ್ಟಿತು)

7. **ಪ್ರಕಟಣೆ.**

<><><>

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

“ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**(424) 24-03-2017 SK-MD 11.20**

**ಕರ್ನಾಟಕ ವಿಧಾನ ಪರಿಷತ್ತು**

***ಶುಕ್ರವಾರ, 24ನೇ ಮಾರ್ಚ್ 2017***

**ಸದನವು ವಿಧಾನ ಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ**

**ಪೂರ್ವಾಹ್ನ 11 ಗಂಟೆ 20 ನಿಮಿಷಕ್ಕೆ ಸಮಾವೇಶಗೊಂಡಿತು.**

**ಸಭಾಪತಿ (ಶ್ರೀ ಡಿ.ಎಚ್.ಶಂಕರಮೂರ್ತಿ) ಅವರು ಪೀಠದಲ್ಲಿ ಉಪಸ್ಥಿತರಿದ್ದರು.**

~~~~~~~

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”
~~~~~~~

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:-** ಸಭೆಯ ಗಮನಕ್ಕೆ ಒಂದು ಸಣ್ಣ ವಿಷಯವನ್ನು ತರುವುದಕ್ಕೆ ಪ್ರಯತ್ನ ಮಾಡುತ್ತೇನೆ. ನಿನ್ನೆ ದಿವಸ ಸಾಯಂಕಾಲ ಸಭೆ ಮುಗಿಯುವ ವೇಳೆಯಲ್ಲಿ 4-5 ವಿಧೇಯಕಗಳು ಬರುತ್ತಿವೆ ಎಂದು ವಿಧಾನ ಸಭಾಧ್ಯಕ್ಷರು ಕಳುಹಿಸಿಕೊಟ್ಟಿರುವಂತಹ 5 ವಿಧೇಯಕಗಳನ್ನು ನಾನು ಪ್ರಕಟಣೆ ಮಾಡಿದೆ. ನಾವು ಮುಂದೆ ಏನು ಮಾಡುತ್ತೇವೆ ಸಮಯದ ಅಭಾವ ಕಡಿಮೆಯಿರುವುದಕ್ಕಾಗಿ ನಮ್ಮ ವೈದ್ಯಕೀಯ ಶಿಕ್ಷಣ ಸಚಿವರು ನನ್ನ ಹತ್ತಿರ ಮಾತನಾಡಿರುವ ವಿಷಯವನ್ನು ನಾನು ಪ್ರಸ್ತಾಪ ಮಾಡಿದೆ. ಆ ಹಿನ್ನೆಲೆಯಲ್ಲಿ ಸದನದ ಪ್ರಮುಖರಾದ ಸಭಾನಾಯಕರು, ವಿರೋಧ ಪಕ್ಷದ ನಾಯಕರು ಮತ್ತು ಇಬ್ಬರು ಮುಖ್ಯ ಸಚೇತಕರ ಹತ್ತಿರ ನಾನು ಮಾತನಾಡಿದ್ದೇನೆ. ಆ ಹಿನ್ನೆಲೆಯಲ್ಲಿ ನಮ್ಮ ಸಮಯದ ಅಭಾವದ ಕಾರಣಕ್ಕಾಗಿ, ಎಲ್ಲಾ ಪ್ರಶ್ನೆಗಳನ್ನು ಇವತ್ತು ಸಭಾನಾಯಕರು ಸದನದ ಮುಂದೆ ಮಂಡಿಸುತ್ತಾರೆ. ಅಂದರೆ ಅದು as good as we have discussed it ಎಂದು. ಅದಾದ ನಂತರ ನಾನು ಯಾವಾಗಲೂ ಶೂನ್ಯ ವೇಳೆಯಲ್ಲಿ ಐದು ಜನರಿಗೆ ಮಾತನಾಡುವುದಕ್ಕೆ ಅವಕಾಶ ಕೊಡುತ್ತಿರುತ್ತೇನೆ, ಅವರು ಓದುತ್ತಾರೆ. ಚರ್ಚೆಗಳು ಯಾವುದು ಇಲ್ಲ. ತದನಂತರ ಮೊದಲನೇ ವೈದ್ಯಕೀಯ ಶಿಕ್ಷಣ ಸಚಿವರ ಒಂದು ವಿಧೇಯಕವಿದೆ ಮತ್ತು ಆದಾದ ಮೇಲೆ ಬೇರೆ ವಿಧೇಯಕಗಳನ್ನು ತೆಗೆದುಕೊಂಡು ಮಧ್ಯಾಹ್ನದವರೆಗೆ ಸದನ ನಡೆಸುವುದು ಎಂದು ಹೇಳಿ ಒಂದು ಸಣ್ಣ ಅಭಿಪ್ರಾಯ ನನ್ನ ಕಛೇರಿಯಲ್ಲಿ ಬಂದಿದೆ. ಇದಕ್ಕೆ ಸದನ ಒಪ್ಪಿದೆ ಎಂದುಕೊಳ್ಳುತ್ತೇನೆ. ಆ ರೀತಿಯೇ ನಾನು ಮುಂದುವರೆಸುತ್ತೇನೆ. ಈಗ ಮಾನ್ಯ ಸಭಾ ನಾಯಕರಿಗೆ ಎಲ್ಲಾ ಪ್ರಶ್ನೆಗಳನ್ನು ಇವತ್ತಿನ ಮತ್ತು ಹಳೆಯ ಲಿಖಿತ ಮೂಲಕ ಎಲ್ಲಾ ಪ್ರಶ್ನೆಗಳಿಗೆ ಅದಕ್ಕೆ ಉತ್ತರವನ್ನು ಮಂಡಿಸಬೇಕೆಂದು ಹೇಳುತ್ತಿದ್ದೇನೆ.

## 1. ಚುಕ್ಕೆ ಗುರುತಿನ ಹಾಗೂ ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತವಾಗಿ ನೀಡಲಾದ ಉತ್ತರಗಳ ಮಂಡನೆ

**ಡಾ. ಜಿ. ಪರಮೇಶ್ವರ್ (ಸಭಾ ನಾಯಕರು):-** ಸನ್ಮಾನ್ಯ ಸಭಾಪತಿಯವರೇ, ದಿನಾಂಕ: 24 ನೇ ಮಾರ್ಚ್ 2017, ಸಮೂಹ-V ರ ಸದನದಲ್ಲಿ ಉತ್ತರಿಸುವ ಒಟ್ಟು 15 ಪ್ರಶ್ನೆಗಳ ಪೈಕಿ 14 ಪ್ರಶ್ನೆಗಳಿಗೆ ಚುಕ್ಕೆ ಗುರುತಿಲ್ಲದ 177 ಪ್ರಶ್ನೆಗಳ ಪೈಕಿ 86 ಪ್ರಶ್ನೆಗಳಿಗೆ ಲಿಖಿತ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

## 2. ಸಭಾಪತಿಯವರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು

ಅ) ವಿಷಯ: ಧಾರವಾಡ–ಹುಬ್ಬಳ್ಳಿ ನಗರದಲ್ಲಿ ಮರಳಿನ ಅಭಾವ ಉಂಟಾಗಿರುವ ಬಗ್ಗೆ.

-----

**ಶ್ರೀ ಬಸವರಾಜ ಎಸ್ ಹೊರಟ್ಟಿ:–** ಸನ್ಮಾನ್ಯ ಸಭಾಪತಿಯವರೇ, ಶೂನ್ಯವೇಳೆಯಲ್ಲಿ ಸಾರ್ವಜನಿಕ ಮಹತ್ವದ ವಿಷಯವನ್ನು ಪ್ರಸ್ತಾಪಿಸಲು ಅನುಮತಿ ನೀಡಿದ್ದಕ್ಕಾಗಿ ತಮ್ಮಗೆ ಧನ್ಯವಾಗಳನ್ನರ್ಪಿಸುತ್ತೇನೆ.

ರಾಜ್ಯದ ಹುಬ್ಬಳ್ಳಿ–ಧಾರವಾಡದ ಜಿಲ್ಲಾ ಪ್ರದೇಶದಲ್ಲಿ ಯಾವುದೇ ನದಿ ಮೂಲ ಇರದ ಕಾರಣ ಈ ಭಾಗದ ಸಾರ್ವಜನಿಕರಿಗೆ ಮರಳಿನ ಅಭಾವ ತೀವ್ರವಾಗಿದೆ. ಈ ಅವಳಿ ನಗರಗಳ ಸುತ್ತಮುತ್ತಲಿನ ಜಿಲ್ಲೆಗಳಾದ ಗದಗ, ಹಾವೇರಿ, ಕೊಪ್ಪಳ, ಬೆಳಗಾವಿ ಹಾಗೂ ಕಾರವಾರ ಜಿಲ್ಲೆಗಳಲ್ಲಿ ಹೇರಳವಾದ ಮರಳು ದೊರೆಯುತ್ತಿರುವುದರಿಂದ ಇಲ್ಲಿನ ಜನರು ಈ ಜಿಲ್ಲೆಗಳ ಮೇಲೆ ಅವಲಂಬಿತವಾರಾಗಿ ಮರಳು ಕೊರತೆಯನ್ನು ಸ್ವಲ್ಪಮಟ್ಟಿಗೆ ನಿವಾರಿಸಿಕೊಳ್ಳಲಾಗುತ್ತಿತ್ತು.

ಆದರೆ ಈಗ ಗಣಿ ಮತ್ತು ಭೂ ವಿಜ್ಞಾನ ಹಾಗೂ ಲೋಕೋಪಯೋಗಿ ಇಲಾಖೆಗಳು ಆಯಾ ಜಿಲ್ಲೆಗಳಿಗೆ ಸೀಮಿತಗೊಳಿಸಿ ಮರಳು ಸಾಗಣಿಕೆಯನ್ನು ನಿರ್ಬಂಧಿಸಿರುತ್ತಾರೆ. ಸಂಪೂರ್ಣ ನಿರ್ಬಂಧಿಸಿರುವುದರಿಂದ ಧಾರವಾಡ–ಹುಬ್ಬಳ್ಳಿ ನಗರದಲ್ಲಿ ಮೊದಲು ಒಂದು ಲೋಡು ಮರಳಿಗೆ ರೂ.10000=00 ಇದ್ದು, ಈ ನಿರ್ಬಂಧದಿಂದ ಈಗ ರೂ.40,000=00 ಗಳಾಗಿದೆ.

ಇದರಿಂದ ಸಾರ್ವಜನಿಕರಿಗೆ ತುಂಬಾ ತೊಂದರೆಯಾಗಿರುತ್ತದೆ. ಆದ್ದರಿಂದ ದಿನಾಂಕ 20–01–2014 ರಂದು ಕರ್ನಾಟಕ ಸರ್ಕಾರದ ಮಾನ್ಯ ಸಾರಿಗೆ ಸಚಿವರ ಅಧ್ಯಕ್ಷತೆಯಲ್ಲಿ ಮರಳು ಲಾರಿ ಮಾಲಿಕರ ಸಂಘದ ಅಧ್ಯಕ್ಷರು ಮತ್ತು ಪದಾಧಿಕಾರಿಗಳೊಂದಿಗೆ ಜರುಗಿದ ಸಭೆಯ ನಡವಳಿಗಳ ಖಂಡಿಕೆ 12 ಸಂಖ್ಯೆ: ಗಭೂಇ/ಮರಳು/ಉಪ:(R.C)20/2013–14 ನ್ನು ಕೂಡಲೇ ಅನುಷ್ಠಾನಕ್ಕೆ ತಂದು ಧಾರವಾಡ–ಹುಬ್ಬಳ್ಳಿ ನಗರದ ಮರಳಿನ ಕೊರತೆಯನ್ನು ನೀಗಿಸುವುದರ ಮೂಲಕ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಲು ಸರ್ಕಾರವನ್ನು ಈ ಮೂಲಕ ಒತ್ತಾಯಿಸುತ್ತೇನೆ.

**ಶ್ರೀ ವಿನಯ್ ಕುಲಕರ್ಣಿ (ಗಣಿ ಮತ್ತು ಭೂವಿಜ್ಞಾನ ಸಚಿವರು):–** ಮಾನ್ಯ ಸಭಾಪತಿಯವರೆ, ನಂತರ ಉತ್ತರವನ್ನು ಒದಗಿಸಲಾಗುವುದು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆ) ಮರುವಿನ್ಯಾಸಗೊಳಿಸಿದ ಹವಾಮಾನ ಆಧಾರಿತ ಅಡಕೆ ಬೆಳೆ ವಿಮೆ ಯೋಜನೆ ಕುರಿತು.

-----

**ಶ್ರೀ ಶ್ರೀಕಾಂತ ಎಲ್. ಘೋಟ್ನೇಕರ:-** ಸನ್ಮಾನ್ಯ ಸಭಾಪತಿಯವರೇ, ಉತ್ತರ ಕನ್ನಡ ಜಿಲ್ಲೆಯ ರೈತರಿಗೆ ಮುರುವಿನ್ಯಾಸಗೊಳಿಸಿದ ಹವಾಮಾನ ಆಧಾರಿತ ಅಡಕೆ ಬೆಳೆ ವಿಮೆ ಯೋಜನೆಯಲ್ಲಿನ ಸಮಸ್ಯೆಗಳನ್ನು ಪರಿಹರಿಸಿಕೊಡಲು ರೈತರ ಪರವಾಗಿ ನಾನು ಮನವಿ ಮಾಡುತ್ತಿದ್ದು, ಅದೇನೆಂದರೆ ಮರು ವಿನ್ಯಾಸಗೊಳಿಸಿದ ಹವಾಮಾನ ಆಧಾರಿತ ಅಡಕೆ ಬೆಳೆ ವಿಮೆ ಯೋಜನೆಗೆ ಬೆಳೆ ಸಾಲ (ಕೆ.ಸಿ.ಸಿ. ಸಾಲ) ಪಡೆಯುವ ಪ್ರತಿಯೊಬ್ಬ ರೈತರು ಒಳಪಡುವುದು ಕಡ್ಡಾಯವೆಂದು ನಿಯಮ ಮಾಡಲಾಗಿದ್ದು, ಈ ನಿಯಮವನ್ನು ಕೈಬಿಟ್ಟು, ಯೋಜನೆಗೆ ಒಳಪಡುವುದು ಐಚ್ಛಿಕವಾಗಿರುವಂತೆ ಮಾಡಿ ಕೊಡಬೇಕು.

ಮರುವಿನ್ಯಾಸಗೊಳಿಸಿ ಹವಾಮಾನ ಆಧಾರಿತ ಅಡಕೆ ಬೆಳೆ ವಿಮಾ ಯೋಜನೆಯಲ್ಲಿ ವಿಮಾ ಪ್ರೀಮಿಯಮ್ ರಖಂನ್ನು ಲೆಕ್ಕ ಹಾಕಲು ಶೇ. 5.00 ಎಂದು ನಿಗದಿಪಡಿಸಲಾಗಿದ್ದು, ಇದು ತೀರಾ ಹೆಚ್ಚಾಗಿರುತ್ತದೆ. ಕಾರಣ ಅದನ್ನು ಶೇ.2.00 ಕ್ಕೆ ಮೀರದಂತೆ ನಿಗದಿಪಡಿಸಬೇಕು.

ಶೇ. 5. ರಂತೆ ಬ್ಯಾಂಕಿನಿಂದ 1 ಎಕರೆಗೆ ರೂ. 80 ಸಾವಿರ ಸಾಲ ಕೊಟ್ಟರೆ 4000.00 ರೂಪಾಯ ಬೆಳೆ ವಿಮೆ ಎಕರೆಗೆ ತುಂಬ ಬೇಕಾಗುವುದು. 3 ಎಕರೆಗೆ ಬೆಳೆ ಸಾಲ ಕೊಟ್ಟರೆ ರೂ. 12 ಸಾವಿರ ತುಂಬಬೇಕಾಗುತ್ತದೆ. ಈವರೆಗೆ ಅಡಿಕೆ ಬೆಳೆಗಾರರಿಗೆ ಇಲ್ಲಿಯವರೆಗೆ ಯಾವತ್ತೂ ಬೆಳೆ ವಿಮೆ ಸಿಕ್ಕಿದ್ದೇ ಇರುವುದಿಲ್ಲ. ಅಲ್ಲದೆ ಅಡಕೆಗೆ ಇತ್ತೀಚಿಗೆ ಕಳೆರೋಗ, ಹಳದಿರೋಗ ಬಂದರೂ ಸಹ ಬೆಳೆ ವಿಮೆ ಅಡಕೆಗೆ ಅನ್ವಯವಾಗುವುದಿಲ್ಲ. ವಿಮಾ ಪರಿಹಾರಕ್ಕೆ ನಿಗದಿಪಡಿಸಲಾಗಿರುವ ಮಾನದಂಡವು ಅವೈಜ್ಞಾನಿಕ ಹಾಗೂ ಅವಾಸ್ತವಿಕ ಅಂಶಗಳಿಂದ ಕೂಡಿದ್ದು ಅವುಗಳನ್ನು ಪುನರ್ ಪರಿಶೀಲಿಸಿ ವಾಸ್ತವಿಕ ನೆಲೆಯಲ್ಲಿ ಪರಿಷ್ಕರಿಸಿ ಪುನರ್ ನಿರ್ಧರಿಸಿಕೊಡಬೇಕು.

ಆದ್ದರಿಂದ ರೈತರು ಹೇಳಿಕೊಂಡು ಈ ಮೇಲಿನ ಸಮಸ್ಯೆಗಳನ್ನು ಆ ಸಂಸ್ಥೆಯ ಪರವಾಗಿ ನಾನು ಸರ್ಕಾರದ ಗಮನಕ್ಕೆ ತರುತ್ತಿದ್ದು, ಆದಷ್ಟು ಬೇಗನೆ ಈ ಸಮಸ್ಯೆಗಳಿಗೆ ಸರ್ಕಾರ ಪರಿಹಾರ ಒದಗಿಸಿ ರೈತರ ಹಿತ ಕಾಪಾಡುವ ಕಾರ್ಯವಾಗಲು ಈ ವಿಷಯವನ್ನು ಶೂನ್ಯ ವೇಳೆಯಲ್ಲಿ ಮಾನ್ಯ ಸಹಕಾರ ಮಂತ್ರಿಗಳ ಮುಖಾಂತರ ಸರ್ಕಾರಕ್ಕೆ ವಿನಂತಿಸುತ್ತೇನೆ.

**ಡಾ. ಜಿ. ಪರಮೇಶ್ವರ್ (ಸಭಾ ನಾಯಕರು):-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ತೋಟಗಾರಿಕಾ ಮತ್ತು ಕೃಷಿ ಮಾರುಕಟ್ಟೆಯ ಸಚಿವರಿಂದ ಉತ್ತರಗಳನ್ನು ಒದಗಿಸಿಕೊಡಲಾಗುವುದು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇ) ವಿಜಯಪುರ ಜಿಲ್ಲೆಯ ಕರ್ನಾಟಕ ಗೃಹ ಮಂಡಳಿಯ ಅವ್ಯವಹಾರ ಕುರಿತು.

------

**ಶ್ರೀ ಬಸನಗೌಡ ರಾ. ಪಾಟೀಲ ಯತ್ನಾಳ್:-** ಸನ್ಮಾನ್ಯ ಸಭಾಪತಿಯವರೇ, ಶೂನ್ಯವೇಳೆಯಲ್ಲಿ ನನಗೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳು.

ಕರ್ನಾಟಕ ಗೃಹ ಮಂಡಳಿ ವಿಜಯಪುರ ಉಪ ವಿಭಾಗದಲ್ಲಿ ನಡೆದ ಅನೇಕ ಹಗರಣಗಳಲ್ಲಿ ಬೆಚ್ಚಿ ಬೀಳಿಸುವ ಹಗರಣವೊಂದು ನಡೆದಿದೆ. ವಿಜಯಪುರ ನಗರದ ಶ್ರೀ ಬಿ.ಎಂ ಪಾಟೀಲ ಎನ್ನುವವರು ತಮ್ಮ ನಿವೃತ್ತಿಯ ನಂತರ ಬಂದ ಹಣದಲ್ಲಿ ಮನೆ ಖರೀದಿಸಲು ಗೃಹ ಮಂಡಳಿಗೆ ಅರ್ಜಿ ಸಲ್ಲಿಸಿ, ಆಯ್ಕೆಯಾಗಿ ಪ್ರಾರಂಭಿಕ ಠೇವಣಿ ತುಂಬಿ ಮನೆ ಹಂಚಿಕೆಯ ಆದೇಶವನ್ನು ಪಡೆದಿರುತ್ತಾರೆ. ಆದರೆ ಗೃಹ ಮಂಡಳಿಯ ಅಧಿಕಾರಿಗಳು ಏಕಾಏಕೀ ಪ್ರಾರಂಭಿಕ ಠೇವಣಿ ತುಂಬಿಲ್ಲವೆಂದು ತಿಳಿಸಿದ್ದು, ಇದರಿಂದ ಆಘಾತಗೊಂಡ ಶ್ರೀ ಬಿ.ಎಂ ಪಾಟೀಲರು ಇಡೀ ಮಂಡಳಿಯ ದಾಖಲೆಗಳನ್ನು ಪರಿಶೀಲಿಸಿದಾಗ ಮಂಡಳಿಗೆ ಜಮಾ ಮಾಡಿದ ಹಣದ ಡಿಡಿ ಶ್ರೀ ಬಿ.ಎಂ ಪಾಟೀಲರ ಹೆಸರಿನದು ಆದರೆ ಅದು ಬೇರೆಯವರ ಹೆಸರಿಗೆ ಜಮಾಗೊಂಡಿರುತ್ತದೆ.

2013 ರಲ್ಲಿ ವಿಜಯಪುರ ಶ್ರೀ ಸಿದ್ದೇಶ್ವರ ಬಡಾವಣೆಯಲ್ಲಿ ಸರ್ವೇ ನಂಬರ್ 170ಎ- 38ಜಿ- ಎಂಐಜಿ 449 ಮನೆ ಹಂಚಿಕೆಯಾಗಿದ್ದು, ತುಂಬಿದ ಹಣ ಮಾತ್ರ ಜಮೆ ಇರುವುದಿಲ್ಲವೆಂದು ಗೊತ್ತಾಗಿ ಇದರ ಹಿಂದಿನ ಜಾಲ ಹಿಡಿದು ಹೋದಾಗ ಆರಂಭಿಕ ಠೇವಣಿ ಜಮೆ ಇಲ್ಲದೆ ಮನೆ ಹೇಗೆ ಮಂಜೂರಾಯಿತು? ಹಣ ಕಟ್ಟಿದ ಡಿಡಿ ನಂಬರ್ ಇವರ ಹೆಸರಿನಲ್ಲಿದ್ದು, ಬೇರೆ "ಅಬ್ಬಾಸ್ ಅಲಿ ಮಖ್ತೇದಾರ" ಇವರ ಹೆಸರಿಗೆ ಹೇಗೆ ಜಮೆ ಆಯಿತು? ಇದಕ್ಕೆಲ್ಲಾ ಪೂರಕ ದಾಖಲೆಗಳೊಂದಿಗೆ ವಿಜಯ ಕರ್ನಾಟಕ ಪತ್ರಿಕೆಯಲ್ಲಿ ಪ್ರಕಟವಾಗಿತ್ತು. ಈ ಅವಾಂತರವಾಗಲೂ ಗೃಹ ಮಂಡಳಿಯ ಕೆಲವು ನೌಕರರ ಕೈವಾಡವಿರುವುದು ಸ್ಪಷ್ಟವಾಗಿರುತ್ತದೆ. ವಿಜಯಪುರ ಮತ್ತು ಬೆಂಗಳೂರು ಕೇಂದ್ರ ಕಛೇರಿಯ ಸಿಬ್ಬಂದಿಯ ಶಾಮೀಲಾಗಿ ಅಕ್ರಮವೆಸಗಿರುತ್ತಾರೆ. ಸುಮಾರು 300 ಕ್ಕೂ ಹೆಚ್ಚು ಆಸ್ತಿಗಳ ಹಂಚಿಕೆಗೆ ಸಂಬಂಧಿಸಿದಂತೆ ಮಂಡಳಿಗೆ ಆರಂಭಿಕ ಠೇವಣಿ ಪಾವತಿಯಾಗಿಲ್ಲ. ಕೆಲ ಅಧಿಕಾರಿಗಳು ಸದರಿ ಆಸ್ತಿಗಳನ್ನು ತಮ್ಮದೇ ಜಾತಿಯವರಿಗೆ ಹಂಚಿಕೆ ಮಾಡಿದ್ದು, ನಕಲಿ ಹಂಚಿಕೆ ಪತ್ರ ನೀಡಿರುವುದು ತಮಗೆ ಬೇಕಾದವರ ಹೆಸರಿನಿಂದ ಹಣ ಜಮೆ ಮಾಡಿರುವುದು ಇಂತಹ ಇನ್ನೂ ಹಲವಾರು ಅಕ್ರಮಗಳನ್ನು ಎಸಗಿರುವುದು ತಿಳಿದು ಬಂದಿರುತ್ತದೆ. ಇದರ ಜಾಲ ಭೇದಿಸುತ್ತಾ ಹೋದರೆ ಎರವಲು ಸೇವೆಯ ಮೇಲೆ ನಿಯೋಜನೆಗೊಂಡ ಶ್ರೀ ಅಕ್ಬರ್ ಬಾಷಾ ಅತ್ತಾರ್ ಈತನು ತನ್ನ ಮೇಲಾಧಿಕಾರಿಗಳ ರುಜುಗಳನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ದುರುಪಯೋಗಪಡಿಸಿಕೊಂಡಿರುತ್ತಾನೆ ಎನ್ನಲಾಗಿದೆ. ತನ್ನ ಅಕ್ರಮಗಳನ್ನು ಮುಚ್ಚಿ ಹಾಕಲು ವಿಜಯಪುರ ನಗರದ ಹಾಲಿ ಶಾಸಕರು ಮತ್ತು ಅವರ ಸಂಬಂಧಿಗಳ ಹೆಸರಿನಿಂದ ಮನೆ ನಿವೇಶನ ಮಂಜೂರು ಮಾಡಲಾಗಿದೆ ಒಂದು ಕುಟುಂಬಕ್ಕೆ ಒಂದು ಮನೆ ಎಂಬ ಹಾಗೂ ಹಂಚಿಕೆಯಾದ ಇಂತಿಷ್ಟು ದಿನಗಳಲ್ಲಿ ಬಾಕಿ ಮೊತ್ತವನ್ನು ಭರಿಸಬೇಕು ಮತ್ತು ಹಂಚಿಕೆಯಾದ ಕೂಡಲೇ ಭರಿಸಬೇಕಾದ ಮೊತ್ತದ ಕಾಲಾವಧಿ ಮುಗಿದರೂ ನಂತರದ ದಿನಗಳಲ್ಲಿ ಶಾಸಕರ ಪ್ರಭಾವಕ್ಕೆ ಒಳಗಾಗಿ ಮಾರ್ಗಸೂಚಿಗಳನ್ನು ಗಾಳಿಗೆ ತೂರಲಾಗಿದೆ ಎಂಬ ಅಂಶ ಗಮನಾರ್ಹವಾಗಿದೆ. ಇಡೀ ವಿಜಯಪುರ ಗೃಹ ಮಂಡಳಿಯ ಅವಾಂತರದ ಜೊತೆಗೆ ಅವ್ಯವಹಾರ, ಮಂಡಳಿಯ ಬೇಕಾಬಿಟ್ಟಿ ಮನೆ ಹಂಚಿಕೆ, ಸ್ವಜನ ಪಕ್ಷಪಾತ, ಮಾರ್ಗಸೂಚಿ ಮೀರಿ ಶಾಸಕರ ಕುಟುಂಬ ಅಥವಾ ಅವರ ಕುಟುಂಬ ಸಂಬಂಧಿಗಳಿಗೆ ಮನೆ ಹಂಚಿಕೆ, ಠೇವಣಿ ದುರುಪಯೋಗಗಳಂತಹ ಅನೇಕ ಅಕ್ರಮಗಳನ್ನು ನಡೆಸುತ್ತಿರುವುದು ತಿಳಿದು ಬಂದಿರುತ್ತದೆ. ಸರ್ಕಾರವು ಈ ಬಗ್ಗೆ ಗಮನಹರಿಸಿ ಕೂಡಲೇ ತನಿಖೆಗೆ ಒಳಪಡಿಸಿ, ತಪ್ಪಿತಸ್ಥರ ವಿರುದ್ಧ ಕಾನೂನು ರೀತಿ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಶೂನ್ಯ ವೇಳೆಯಲ್ಲಿ ಸರ್ಕಾರವನ್ನು ಒತ್ತಾಯಿಸುತ್ತೇನೆ.

**ಡಾ. ಜಿ. ಪರಮೇಶ್ವರ್ (ಸಭಾ ನಾಯಕರು):-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ವಸತಿ ಸಚಿವರಿಂದ ಉತ್ತರವನ್ನು ಒದಗಿಸಿಕೊಡಲಾಗುವುದು.

(ಮುಂದು..)

425/24.03.2017/11.30/hv.md

**(ಸಭಾಪತಿಯವರ ಉಪಸ್ಥಿತಿ)**

**ಈ) ಹುಬ್ಬಳ್ಳಿಯ ವಿದ್ಯಾನಗರ ಪೊಲೀಸ್ ಠಾಣೆ ವ್ಯಾಪ್ತಿಯ ಕಾಡಸಿದ್ದೇಶ್ವರ ಕಾಲೇಜಿಗೆ ಪರೀಕ್ಷೆಗೆ ಬರುತ್ತಿದ್ದ ಚಿನ್ಮಯ ಕಾಲೇಜಿನ ವಿದ್ಯಾರ್ಥಿನಿಯನ್ನು ಚುಡಾಯಿಸಿದರೆಂಬ ಕಾರಣಕ್ಕಾಗಿ ಹಲ್ಲೆ ನಡೆದ ಬಗ್ಗೆ.**

**- - -**

**ಶ್ರೀ ಪ್ರದೀಪ್ ಶೆಟ್ಟರ್( ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೇ, ಹುಬ್ಬಳ್ಳಿಯ ವಿದ್ಯಾನಗರ ಪೊಲೀಸ್ ಠಾಣೆ ವ್ಯಾಪ್ತಿಯ ಕಾಡುಸಿದ್ದೇಶ್ವರ ಕಾಲೇಜಿನಲ್ಲಿ ಪಿ.ಯು.ಸಿ. ಪರೀಕ್ಷೆ ಬರೆಯಲು ಹುಬ್ಬಳ್ಳಿಯ ಕಾಶ್ವಾಪುರ ನಿವಾಸಿ ಚಿನ್ಮಯ ಕಾಲೇಜು ವಿದ್ಯಾರ್ಥಿನಿಯನ್ನು ಕೆಲವರು ಚುಡಾಯಿಸಿದರೆಂದು ಇದನ್ನು ವಿದ್ಯಾರ್ಥಿನಿಯ ಸಹೋದರ ಹಾಗೂ ಸಂಬಂಧಿಕರು ವಿಚಾರಿಸಲು ತೆರಳಿದಾಗ ಕೆಲವರು ಹಲ್ಲೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಡೆಸಿ, ಬಿಗುವಿನ ವಾತಾವರಣ ನಿರ್ಮಾಣ ಮಾಡಿಸ ಹಿನ್ನಲೆ ಪರೀಕ್ಷಾರ್ಥಿಗಳಲ್ಲಿ ಆತಂಕ ಉಂಟಾಗಿರುತ್ತದೆ.

ಈ ರೀತಿಯ ಘಟನೆಗಳು ಪರೀಕ್ಷಾ ಸಮಯದಲ್ಲಿ ವಿದ್ಯಾರ್ಥಿಗಳ ಮನಸ್ಥಿತಿಯನ್ನು ಕದಡುವ ಹಿನ್ನಲೆಯಲ್ಲಿ ಇನ್ನು ಮುಂದೆ ಇಂತಹ ಘಟನೆಗಳು ನಡೆಯದಂತೆ ಹುಬ್ಬಳ್ಳಿಯಲ್ಲಿ ಪೊಲೀಸ್ ಬಂದೋಬಸ್ತ್ ಅನ್ನು ಕೂಡಲೇ ಹೆಚ್ಚಿಸಿ ವಿದ್ಯಾರ್ಥಿಗಳ ಸುರಕ್ಷತೆಗೆ ಹಾಗೂ ಅವರುಗಳ ರಕ್ಷಣೆಗೆ ಪೊಲೀಸ್ ಇಲಾಖೆಯು ತುರ್ತಾಗಿ ಸೂಕ್ತ ಕ್ರಮ ಕೈಗೊಳ್ಳುವಂತೆ ಶೂನ್ಯ ವೇಳೆಯಲ್ಲಿ ಸರ್ಕಾರವನ್ನು ಒತ್ತಾಯಿಸುತ್ತಿದ್ದೇನೆ.

**ಡಾ: ಜಿ.ಪರಮೇಶ್ವರ್(ಗೃಹ ಸಚಿವರು):-** ಸನ್ಮಾನ್ಯ ಸಭಾಪತಿಯವರೇ, ಸದರಿ ವಿಷಯಕ್ಕೆ ಸಂಬಂಧಪಟ್ಟಂತೆ ಸೋಮವಾರ ಉತ್ತರವನ್ನು ನೀಡುತ್ತೇನೆ.

**ಶ್ರೀ ಪ್ರದೀಪ್ ಶೆಟ್ಟರ್:-** ಸನ್ಮಾನ್ಯ ಸಭಾಪತಿಯವರೇ, ಪಿ.ಯು.ಸಿ. ಪರೀಕ್ಷೆ ನಡೆಯುತ್ತಿರುವ ಸಂದರ್ಭದಲ್ಲಿ ತನ್ನ ತಂಗಿಯನ್ನು ಪರೀಕ್ಷೆಗೆ ಬಿಡಲು ಹೋಗಿದ್ದ ಹುಡುಗನನ್ನು ಸುಮಾರು 40 ಜನರು ಸೇರಿ ಹೊಡೆದಿದ್ದಾರೆ. ಈ ಘಟನೆಗೆ ಸಂಬಂಧಪಟ್ಟ ವಿಡಿಯೋ ನನ್ನ ಬಳಿ ಇದೆ, ಅದನ್ನು ಮಾನ್ಯ ಗೃಹ ಸಚಿವರಿಗೆ ಕಳುಹಿಸಿಕೊಡುತ್ತೇವೆ. ಅವರು ಈ ವಿಚಾರವನ್ನು ಬಹಳ ಗಂಭೀರವಾಗಿ ಪರಿಗಣಿಸಬೇಕೆಂದು ತಮ್ಮ ಮೂಲಕ ಒತ್ತಾಯಿಸುತ್ತೇನೆ.

**ಸಭಾಪತಿಯವರು:-** ತಮ್ಮ ಬಳಿ ಇರುವ ವಿಡಿಯೋ ಕ್ಲಿಪಿಂಗ್ ಅನ್ನು ಮಾನ್ಯ ಗೃಹ ಸಚಿವರಿಗೆ ಕಳುಹಿಸಿಕೊಡಿ.

**ಡಾ: ಜಿ.ಪರಮೇಶ್ವರ-** ಸನ್ಮಾನ್ಯ ಸಭಾಪತಿಯವರೇ, ಅವರು ಆ ವಿಡಿಯೋ ಕ್ಲಿಪಿಂಗ್ ಕಳುಹಿಸಿಕೊಟ್ಟರೆ, ನಾನು ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೇನೆ. ಸದರಿ ಘಟನೆಯನ್ನು ಗಂಭೀರವಾಗಿ ಪರಿಗಣಿಸಲಾಗುತ್ತದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಉ) ಶಿವಮೊಗ್ಗ ಮೈಸೂರು ಮತ್ತು ಕಲಬುರ್ಗಿ ಜಿಲ್ಲೆಯ ರಂಗಾಯಣ ನಿರ್ದೇಶಕರ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ.**

– – –

**ಶ್ರೀ ಕೆ.ಟಿ.ಶ್ರೀಕಂಠೇಗೌಡ(ಶಿಕ್ಷಕರ ಕ್ಷೇತ್ರ):–** ಸನ್ಮಾನ್ಯ ಸಭಾಪತಿಯವರೇ, ದಕ್ಷಿಣ ಭಾರತದ ಏಕೈಕ ರೆಪರ್ಟರಿ ರಂಗಾಯಣಕ್ಕೆ ಹಿಡಿದ ಗ್ರಹಣ ಬಿಡುವ ಲಕ್ಷಣ ಸಧ್ಯಕ್ಕೆ ಕಾಣುತ್ತಿಲ್ಲ. ನಿರ್ದೇಶಕರಿಲ್ಲದೆ ಅರ್ಧ ವರ್ಷ ಕಳೆದಿದ್ದರೂ ಹೊಸ ನಿರ್ದೇಶಕರ ನೇಮಕಕ್ಕೆ ಸರ್ಕಾರ ಆಸಕ್ತಿ ತೋರುತ್ತಿಲ್ಲ. ಅಲ್ಲದೆ ಕಳೆದ ಆಗಸ್ಟ್ ತಿಂಗಳಿನಲ್ಲಿ ಕಲಬುರ್ಗಿ ಮತ್ತು ಶಿವಮೊಗ್ಗ ರಂಗಾಯಣ ನಿರ್ದೇಶಕರ ಸ್ಥಾನಗಳು ತೆರವಾಗಿದ್ದು ಅಕ್ಟೋಬರ್‌ನಲ್ಲಿ ಮೈಸೂರು ರಂಗಾಯಣದ ನಿರ್ದೇಶಕರ ಅವಧಿಯೂ ಮುಗಿದಿದೆ. ಎಲ್ಲಿಯೂ ಹೊಸ ನಿರ್ದೇಶಕರ ನೇಮಕವಾಗಿಲ್ಲ. ಈ ಕುರಿತು ನಾಡಿನ ಹಿರಿಯ ರಂಗಕರ್ಮಿಗಳಿಂದ ಬರುತ್ತಿರುವ ಒತ್ತಾಯ ಕೂಡ ಸರ್ಕಾರದ ಕಿವಿಗೆ ಕೇಳಿಸುತ್ತಿಲ್ಲ.

ರಂಗಭೂಮಿ ಹಿನ್ನಲೆಯಲ್ಲಿರುವ ಸಚಿವೆ ಶ್ರೀಮತಿ ಉಮಾಶ್ರೀಯವರ ಕಾಲದಲ್ಲಿ ಹೀಗಾಯಿತಲ್ಲ ಎಂಬುದು ಎಲ್ಲರ ಬೇಸರಕ್ಕೆ ಕಾರಣವಾಗಿದೆ. ರಂಗ ಚಟುವಟಿಕೆಗಳ ತೀವ್ರ ಹಿನ್ನಡೆಯಾಗಿರುವುದರಿಂದ ಸರ್ಕಾರ ಕೂಡಲೇ ಮೂರು ಕೇಂದ್ರಗಳ ನಿರ್ದೇಶಕರನ್ನು ನೇಮಕ ಮಾಡಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತಿದ್ದೇನೆ.

**ಶ್ರೀಮತಿ ಉಮಾಶ್ರೀ(ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರು):–** ಸನ್ಮಾನ್ಯ ಸಭಾಪತಿಯವರೇ, ರಂಗಾಯಣಕ್ಕೆ ಸಂಬಂಧಪಟ್ಟಂತೆ ನಿರ್ದೇಶಕರನ್ನು ನೇಮಕ ಮಾಡಬೇಕಾದರೆ, ರಂಗ ಸಮಾಜದ ಮೀಟಿಂಗ್ ನಡೆಸಿ, ಅಲ್ಲಿ ಬರುವಂತಹ ಸಲಹೆಗಳನ್ನು ಮತ್ತು ಸರ್ಕಾರದ ಸಲಹೆಗಳನ್ನು ಕ್ರೋಢೀಕರಿಸಿ ಚರ್ಚೆ ಮಾಡಿ, ಚರ್ಚೆಯ ಸಾರಾಂಶವನ್ನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತಂದು, ನಂತರ ಈ ನೇಮಕಾತಿ ಪ್ರಕ್ರಿಯೆಯನ್ನು ಮಾಡಬೇಕಾಗಿದೆ. ಆದಷ್ಟು ಬೇಗ ರಂಗ ಸಮಾಜದ ಮೀಟಿಂಗ್ ಕರೆದು ಅಲ್ಲಿಂದ ಸಲಹೆಗಳನ್ನು ಪಡೆದುಕೊಂಡು ನಿರ್ದೇಶಕರ ನೇಮಕಾತಿ ಪ್ರಕ್ರಿಯೆಯನ್ನು ಪ್ರಾರಂಭ ಮಾಡಿ ಮುಗಿಸುತ್ತೇವೆ ಎನ್ನುವ ಮಾತನ್ನು ಹೇಳುವುದಕ್ಕೆ ಬಯಸುತ್ತಿದ್ದೇನೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಸನ್ಮಾನ್ಯ ಸಭಾಪತಿಯವರೇ, ರಂಗಾಯಣದಲ್ಲಿ ಕಳೆದ 6 ತಿಂಗಳುಗಳಿಂದ ಯಾವುದೇ ಚಟುವಟಿಕೆಗಳು ನಡೆಯುತ್ತಿಲ್ಲ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀಮತಿ ಉಮಾಶ್ರೀ:-** ಸನ್ಮಾನ್ಯ ಸಭಾಪತಿಯವರೇ, ರಂಗ ಸಮಾಜದ ಸಭೆಯನ್ನು ಕರೆದು ಮುಂದಿನ ಪ್ರಕ್ರಿಯೆಯನ್ನು ಆದಷ್ಟು ಬೇಗ ಮಾಡಿ ಮುಗಿಸುತ್ತೇವೆ.

**ಸಭಾಪತಿಯವರು:-** ಮಾನ್ಯ ಉನ್ನತ ಶಿಕ್ಷಣ ಸಚಿವರು ಸರ್ಕಾರ ತೆಗೆದುಕೊಂಡಿರುವ ತೀರ್ಮಾನದ ಬಗ್ಗೆ ಈ ಸದನದಲ್ಲಿ ಒಂದು ಹೇಳಿಕೆಯನ್ನು ಮಾಡಲು ಬಯಸುತ್ತಿದ್ದಾರೆ.

**3. ಸಚಿವರ ಹೇಳಿಕೆ**

**ವಿಷಯ: ಅತಿಥಿ ಉಪನ್ಯಾಸಕರ ಗೌರವಧನ ಹೆಚ್ಚಿಸುವ ಬಗ್ಗೆ.**

– – –

**ಶ್ರೀ ಬಸವರಾಜ ರಾಯರೆಡ್ಡಿ(ಉನ್ನತ ಶಿಕ್ಷಣ ಸಚಿವರು):-** ಸನ್ಮಾನ್ಯ ಸಭಾಪತಿಯವರೇ, ಕಳೆದ ಅಧಿವೇಶನದಲ್ಲಿ ಮತ್ತು ಈ ಅಧಿವೇಶನದಲ್ಲಿ ಕೆಳಮನೆಯ ಸದಸ್ಯರು ಮತ್ತು ಈ ಮನೆಯ ಸದಸ್ಯರು ಮಾತ್ರವಲ್ಲದೆ ಅತಿಥಿ ಉಪನ್ಯಾಸಕರು, 'ತಮ್ಮ ಸಂಭಾವನೆಯನ್ನು ಹೆಚ್ಚು ಮಾಡಬೇಕು' ಎಂದು ಹಲವಾರು ಮನವಿಗಳನ್ನು ಸರ್ಕಾರಕ್ಕೆ ನೀಡಿದ್ದರು. ಆ ಹಿನ್ನಲೆಯಲ್ಲಿ ಸರ್ಕಾರ ಈ ಬಗ್ಗೆ ಒಂದು ತೀರ್ಮಾನವನ್ನು ತೆಗೆದುಕೊಂಡಿದೆ. ಅದರ ಬಗ್ಗೆ ಸದನದಲ್ಲಿ ಒಂದು ಹೇಳಿಕೆ ಮಾಡುವುದಕ್ಕೆ ತಮ್ಮ ಅನುಮತಿಯನ್ನು ಕೇಳಿದ್ದೆ, ತಾವು ಅನುಮತಿಯನ್ನು ಕೊಟ್ಟಿದ್ದೀರಿ ಅದಕ್ಕಾಗಿ ಧನ್ಯವಾದಗಳನ್ನು ಅರ್ಪಿಸುತ್ತಿದ್ದೇನೆ.

(ಸಚಿವರ ಹೇಳಿಕೆಯನ್ನು ಲಗತ್ತಿಸಲಾಗಿದೆ)

ಸನ್ಮಾನ್ಯ ಸಭಾಪತಿಯವರೇ, ಈಗಾಗಲೇ ಈ ಬಗ್ಗೆ ಸೂಕ್ತ ಆದೇಶವನ್ನು ಹೊರಡಿಸಲಾಗಿದ್ದು, ಅದು ಈ ಕೂಡಲೇ ಜಾರಿಗೆ ಬರುತ್ತದೆ. ಅದಲ್ಲದೇ, ತಾಂತ್ರಿಕ ಶಿಕ್ಷಣ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರಿಗೆ 7,500 ರೂಪಾಯಿಗಳ ಮಾಸಿಕ ಗೌರವಧನವನ್ನು ನೀಡಲಾಗುತ್ತಿತ್ತು. ಈಗ ಅದರ ಪ್ರಮಾಣವನ್ನು 9,500 ರೂಪಾಯಿಗಳಿಗೆ ಹೆಚ್ಚಿಸಲಾಗಿದೆ. ಈಗಾಗಲೇ 9,500 ರೂಪಾಯಿಗಳನ್ನು ಪಡೆಯುತ್ತಿದ್ದವರ ಗೌರವಧನವನ್ನು 11,500 ರೂಪಾಯಿಗಳಿಗೆ ಹೆಚ್ಚಿಸಲಾಗಿದೆ. 11,500 ರೂಪಾಯಿಗಳಷ್ಟು ಇದ್ದ ಗೌರವಧನವನ್ನು 13,000 ರೂಪಾಯಿಗಳಿಗೆ ಹೆಚ್ಚಿಸಿ ಸರ್ಕಾರಿ ಆದೇಶವನ್ನು ಹೊರಡಿಸಲಾಗಿದೆ. ಮಾನ್ಯ ಸದಸ್ಯರಿಗೆ ಆದೇಶದ ಪ್ರತಿಗಳನ್ನು ಕಳುಹಿಸಿಕೊಡಲಾಗುತ್ತದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧ ಪಕ್ಷದ ನಾಯಕರು):–** ಸನ್ಮಾನ್ಯ ಸಭಾಪತಿಯವರೇ, ಅತಿಥಿ ಉಪನ್ಯಾಸಕರು ವಾರಗಟ್ಟಲೆ ಧರಣಿ ಕುಳಿತುಕೊಂಡಿದ್ದಾರೆ. ಮಾನ್ಯ ಉನ್ನತ ಶಿಕ್ಷಣ ಸಚಿವರು ಹೋಗಿ ಅವರನ್ನು ಭೇಟಿ ಮಾಡುವಂತಹ ಸೌಜನ್ಯವನ್ನು ಸಹ ತೋರಿಸಿಲ್ಲ. ಈ ಬಗ್ಗೆ ನಾನು ಮಾನ್ಯ ಸಚಿವರನ್ನು ಕೇಳಿದರೆ, 'ಭೇಟಿ ಮಾಡಿ ಬಂದಿದ್ದೇನೆ' ಎಂದು ಹೇಳಿದರು. ನಾನು, 'ಅವರು ನಿನ್ನೆ ಮೊನ್ನೆ ಹೋಗಿ ಭೇಟಿ ಮಾಡಿ ಬಂದಿರಬಹುದು' ಎಂದು ತಿಳಿದುಕೊಂಡಿದ್ದೆ. ಆದರೆ, ಅವರು ಹಿಂದಿನ ತಿಂಗಳು ಹೋಗಿ ಧರಣಿ ಕುಳಿತಿರುವ ಅತಿಥಿ ಉಪನ್ಯಾಸಕರನ್ನು ಭೇಟಿ ಮಾಡಿ ಬಂದಿದ್ದಾರೆ. ಇದನ್ನು ಕೇಳಿ ನನಗೆ ಬಹಳ ಆಶ್ಚರ್ಯವಾಯಿತು. ನನ್ನ ವಿನಂತಿ ಏನೆಂದರೆ, ಅವರುಗಳು ಧರಣಿ ಕುಳಿತಿರುವ ಸಂದರ್ಭದಲ್ಲಿ ಅವರ ಮುಖಂಡರನ್ನು ಕರೆದು ಮಾತುಕತೆ ನಡೆಸುವಂತಹ ಪ್ರಯತ್ನವನ್ನು ಮಾಡಬೇಕಾಗುತ್ತದೆ. ಅತಿಥಿ ಉಪನ್ಯಾಸಕರ ಸಂಘದವರೊಂದಿಗೆ ಸೋಮವಾರ ಸಭೆ ಕರೆಯಬೇಕೆನ್ನುವುದು ನನ್ನ ಒತ್ತಾಯವಾಗಿದೆ. ಸುಪ್ರೀಂ ಕೋರ್ಟಿನ ಆದೇಶದ ಪ್ರಕಾರ ಅವರನ್ನು ಖಾಯಂಗೊಳಿಸುವುದಕ್ಕೆ ಸಾಧ್ಯವಾಗುವುದಿಲ್ಲ ಎನ್ನುವುದು ನಮ್ಮೆಲ್ಲರಿಗೂ ತಿಳಿದಿರುವ ವಿಚಾರವಾಗಿದೆ. ಸರ್ಕಾರದ ಸ್ಥಿತಿ ನಮಗೆ ಅರ್ಥವಾಗುತ್ತದೆ. ಸೇವಾಭದ್ರತೆಯನ್ನು ಒದಗಿಸಬೇಕೆನ್ನುವುದು ಅವರ ಒತ್ತಾಯವಾಗಿದೆ. ಈ ನಿಟ್ಟಿನಲ್ಲಿ ಯಾವ ಕ್ರಮ ತೆಗೆದುಕೊಳ್ಳಬಹುದು ಎನ್ನುವುದ ಬಗ್ಗೆ ಸರ್ಕಾರ ಚಿಂತಿಸಬೇಕಾಗುತ್ತದೆ. ಸರ್ಕಾರ ಅತಿಥಿ ಉಪನ್ಯಾಸಕರೊಂದಿಗೆ ಒಂದು ಸಭೆ ಕರೆದು, ಆ ಸಭೆಗೆ ನಮಗೂ ಕರೆ ಕಳುಹಿಸಿದರೆ, ನಾವು ಅವರನ್ನು ಒಪ್ಪಿಸುವಂತಹ ಪ್ರಯತ್ನ ಮಾಡುತ್ತೇವೆ. ಅವರ ಗೌರವಧನವನ್ನು ಹೆಚ್ಚು ಮಾಡಿರುವ ಸರ್ಕಾರದ ಕ್ರಮವನ್ನು ನಾನು ಸ್ವಾಗತಿಸುತ್ತಿದ್ದೇನೆ. ಬೆಳಗ್ಗೆಯಿಂದ ಸಂಜೆಯವರೆಗೆ ಅತಿಥಿ ಉಪನ್ಯಾಸಕರು ಅಲ್ಲಿ ಧರಣಿ ಕುಳಿತಿದ್ದಾರೆ. ಒಮ್ಮೆ ಅಲ್ಲಿಗೆ ಬಂದು ಹೋಗಿ ಎಂದು ನಮಗೆ 100 ಬಾರಿ ಫೋನ್ ಮಾಡುತ್ತಾರೆ. ಆದರೆ, ಮಾನ್ಯ ಉನ್ನತ ಶಿಕ್ಷಣ ಸಚಿವರು ಮಾತ್ರ ಹೋಗುತ್ತಿಲ್ಲ.

**ಶ್ರೀ ಬಸವರಾಜ ರಾಯರೆಡ್ಡಿ:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಈ ರೀತಿ ಮಾತನಾಡಬಾರದು. 'ಅತಿಥಿ ಉಪನ್ಯಾಸಕರು ಉಪವಾಸ ಸತ್ಯಾಗ್ರಹ ಕುಳಿತಿದ್ದಾರೆ ಹೋಗಿ ಅವರನ್ನು ಭೇಟಿ ಮಾಡಿದ್ದೀರಾ?' ಎಂದು ಮಾನ್ಯ ವಿರೋಧ ಪಕ್ಷದ ನಾಯಕರು ಕೇಳಿದಾಗ, ' ಹೌದು ಕಳೆದ ತಿಂಗಳು ಎಂದರೆ ಸುಮಾರು 20–25 ದಿನಗಳ ಹಿಂದೆ ಹೋಗಿ, ಅವರಿಗೆ ವಿವರಣೆ ಕೊಟ್ಟು ಬಂದಿದ್ದೇನೆ. ಇತ್ತೀಚಿನ ದಿನಗಳಲ್ಲಿ ನಾನು ಹೋಗಿಲ್ಲ. ಹಿಂದಿನ ಬಾರಿ ಬಂದು ನನ್ನನ್ನು ಕರೆದಿದ್ದರು,

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೋಗಿದ್ದೆ. ಈ ಬಾರಿ ಯಾರೂ 'ಬನ್ನಿ' ಎಂದು ಕರೆದಿಲ್ಲ. ನಾನು ಹೋಗಿಲ್ಲ' ಎಂದು ಸತ್ಯ ಹೇಳಿದರೆ ಅವರು ಸಿಟ್ಟು ಮಾಡಿಕೊಳ್ಳುತ್ತಿದ್ದಾರೆ.

(ಮುಂದುವರಿದಿದೆ)

(426) 24.03.2017 ಟಿ.ಸಿ.ಹೆಚ್/ಎ.ಕೆ, 11.40 **(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ನಾನು ಸಿಟ್ಟು ಮಾಡಿಕೊಂಡಿಲ್ಲ. ಅದು ಅವರ ಕರ್ತವ್ಯವೆಂದು ನಾನು ನೆನಪು ಮಾಡುತ್ತಿದ್ದೇನೆ. ಆ ಬಗ್ಗೆ ಈಗ ಸುಮ್ಮನೆ ಚರ್ಚೆ ಮಾಡಿಕೊಂಡು ಕುಳಿತುಕೊಳ್ಳುವುದು ಬೇಡ. ಇದು ನಿಮ್ಮ ಬೇಜವಾಬ್ದಾರಿತನವನ್ನು ತೋರಿಸುತ್ತದೆ.

**ಶ್ರೀ ಬಸವರಾಜ ರಾಯರೆಡ್ಡಿ:-** ಮಾನ್ಯ ಸಭಾಪತಿಯವರೇ, ಅವರು ಬೇಜವಾಬ್ಧಾರಿ ಎಂದಿದ್ದಕ್ಕೆ ಹೇಳುತ್ತಿದ್ದೇನೆ. I am not an irresponsible minister. I am a very responsible minister. Our government is a very responsible government.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಅವರ ಸರ್ಕಾರಕ್ಕೂ, ಅವರಿಗೂ ಜವಾಬ್ದಾರಿ ಇದೆ, ನಾನು ಇಲ್ಲವೆಂದು ಹೇಳಲಿಲ್ಲ. ಮಾನ್ಯ ಸಚಿವರು ನನ್ನ ಮನವಿ ಕೇಳಬೇಕು, ಈಗ ಅತಿಥಿ ಉಪನ್ಯಾಸಕರು ಧರಣಿ ಕುಳಿತಿದ್ದಾರೆ, ಒಮ್ಮೆ ಹೋಗಿ ಅವರನ್ನು ಬೇಟಿ ಮಾಡಿ ಬರೋಣ.

**ಶ್ರೀ ಬಸವರಾಜ ರಾಯರೆಡ್ಡಿ:-** ಮಾನ್ಯ ಸಭಾಪತಿಯವರೇ, ಹೋಗಿ ಬರೋಣ, ಅದರಲ್ಲಿ ನನಗೆ ಯಾವ ಸಮಸ್ಯೆಯೂ ಇಲ್ಲ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ದಯವಿಟ್ಟು ಸೋಮವಾರ ಅಥವಾ ಮಂಗಳವಾರದಂದು ಅತಿಥಿ ಉಪನ್ಯಾಸಕರ ಸಂಘದ ಮುಖಂಡರೊಂದಿಗೆ ಒಂದು ಮೀಟಿಂಗ್ ಕರೆದು, ನಮ್ಮನ್ನೂ ಆ ಸಭೆಗೆ ಕರೆದರೆ, ನಾವು ಅವರನ್ನು ಒಪ್ಪಿಸುವಂತಹ ಕೆಲಸವನ್ನು ಮಾಡುತ್ತೇವೆ.

**ಶ್ರೀ ಬಸವರಾಜ ರಾಯರೆಡ್ಡಿ:-** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಸಭೆ ಕರೆಯಿರಿ ಎಂದು ಹೇಳಿರುವುದರ ಬಗ್ಗೆ ನನ್ನ ಆಕ್ಷೇಪಣೆ ಇಲ್ಲ. ಆದರೆ, ಅವರು ನನ್ನನ್ನು 'ನೀವು ಬೇಜವಾಬ್ದಾರಿ ತನದಿಂದ ವರ್ತಿಸುತ್ತಿದ್ದೀರಿ' ಎಂದು ಹೇಳಿರುವುದಕ್ಕೆ ಬೇಸರವಾಯಿತು.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ನಾನು ಮತ್ತೇ ಹೇಳುತ್ತೇನೆ. ನೂರಕ್ಕೆ ನೂರರಷ್ಟು ಇದು ಅವರ ಬೇಜವಾಬ್ದಾರಿತನವೇ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:-** ಆಯಿತು ಬಿಡಿ. ಈಗ ಆ ಬಗ್ಗೆ ಚರ್ಚೆ ಬೇಡ. ಮಾನ್ಯ ಸಚಿವರು ಸಭೆಯನ್ನು ಕರೆಯುತ್ತೇವೆಂದು ಹೇಳುತ್ತಿದ್ದಾರೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಸೋಮವಾರದಂದು ಆ ಬಗ್ಗೆ ಸಭೆಯನ್ನು ಕರೆಯುತ್ತೀರಾ?

**ಶ್ರೀ ಬಸವರಾಜ ರಾಯರೆಡ್ಡಿ:-** ಮಾನ್ಯ ಸಭಾಪತಿಯವರೇ, ಆಯಿತು.

**ಶ್ರೀ ಕೆ.ಎಸ್.ಈಶ್ವರಪ್ಪ:-** ಸಭೆಯನ್ನು ಕರೆಯುತ್ತೇವೆಂದು ಹೇಳಿದ್ದಾರೆ ಅದಕ್ಕಾಗಿ ಧನ್ಯವಾದಗಳು.

**ಶ್ರೀ ಅರುಣ ಶಹಾಪುರ:-** ಸನ್ಮಾನ್ಯ ಸಭಾಪತಿಯವರೇ, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಯಲ್ಲಿಯೂ ಅತಿಥಿ ಉಪನ್ಯಾಸಕರ ಸಂಖ್ಯೆಯನ್ನು ಹೆಚ್ಚು ಮಾಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮೊನ್ನೆ ದಿವಸ ಸದನದಲ್ಲಿ ಕೊಟ್ಟ ಉತ್ತರಕ್ಕೂ, ಈಗ ಅವರು ಕೊಟ್ಟಿರುವ ಉತ್ತರಕ್ಕೂ ತುಂಬಾ ವ್ಯತ್ಯಾಸವಿದೆ. ಮೂರು ದಿವಸಗಳ ಹಿಂದೆ ಸದನದಲ್ಲಿ ಮಾನ್ಯ ಮಂತ್ರಿಗಳು ಯು.ಜಿ.ಸಿ ಗೈಡ್‌ಲೈನ್ಸ್ ಪ್ರಕಾರ, ಒಂದು ಸಾವಿರ ರೂಪಾಯಿಗಳನ್ನು ಪ್ರತಿ ಗಂಟೆಗೆ ಕೊಡುತ್ತೇವೆಂದು ಹೇಳಿದ್ದಾರೆ. ವಾರಕ್ಕೆ ಎಂಟು ಗಂಟೆ ಎಂದು ಲೆಕ್ಕ ಹಾಕಿದರೆ, ತಿಂಗಳಿಗೆ 32 ಗಂಟೆಗಳು ಆಗುತ್ತದೆ.

**ಸಭಾಪತಿಯವರು:-** ಅವರು ಆ ರೀತಿ ಹೇಳಲಿಲ್ಲ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** ಮಾನ್ಯ ಸಭಾಪತಿಯವರೇ, ಅವರು ಆ ರೀತಿ ಹೇಳಿದ್ದಾರೆ. ಬೇಕಾದರೆ ತಾವು ರೆಕಾರ್ಡ್ ತೆಗೆಸಿ ನೋಡಬಹುದು. ಯು.ಜಿ.ಸಿ ಗೈಡ್‌ಲೈನ್ಸ್ ಪ್ರಕಾರ ಗಂಟೆಗೆ ಒಂದು ಸಾವಿರ ರೂಪಾಯಿಗಳನ್ನು ಕೊಡುತ್ತೇವೆಂದು ಹೇಳಿದ್ದಾರೆ. ಅದು ಸದನದ ನಡವಳಿಕೆಯಲ್ಲಿ ದಾಖಲಾಗಿದೆ. ಯು.ಜಿ.ಸಿ. ಗೈಡ್‌ಲೈನ್ಸ್ ಏನು ಎಂದು ನಾನು ಕೇಳಿರುವುದಕ್ಕೆ, ಯು.ಜಿ.ಸಿ. ಮಾನದಂಡದ ಪ್ರಕಾರ ಒಂದು ಗಂಟೆ ಒಂದು ಸಾವಿರ ರೂಪಾಯಿಗಳು ಎನ್ನುವ ಉತ್ತರವನ್ನು ಕೊಟ್ಟಿದ್ದಾರೆ.

**ಸಭಾಪತಿಯವರು:-** ಈಗ ಅದರ ಬಗ್ಗೆ ಚರ್ಚೆ ಮಾಡುವುದು ಬೇಡ. ಮಾನ್ಯ ಸಚಿವರು ಈ ಬಗ್ಗೆ ಸಭೆ ಕರೆಯುತ್ತಾರೆ. ಆ ಸಭೆಯಲ್ಲಿ ಚರ್ಚೆ ಮಾಡಿ. ಈಗ ಸಭೆಯ ಮುಂದಿಡಲಾಗುವ ಕಾಗದಪತ್ರಗಳು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

## 4. ಸಭೆಯ ಮುಂದಿಡಲಾದ ಕಾಗದ ಪತ್ರಗಳು

**ಅ) ಡಾ॥ಜಿ.ಪರಮೇಶ್ವರ್ (ಸಭಾನಾಯಕರು):–** ಮುಖ್ಯಮಂತ್ರಿಗಳು ಹಾಗೂ ಹಣಕಾಸು ಸಚಿವರ ಪರವಾಗಿ, ಭಾರತ ಸಂವಿಧಾನದ 151(2)ನೇ ಅನುಚ್ಛೇದದ ಮೇರೆಗೆ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು 31ನೇ ಮಾರ್ಚ್, 2016ಕ್ಕೆ ಕೊನೆಗೊಂಡ ವರ್ಷಕ್ಕೆ ನೀಡಿರುವ ರಾಜ್ಯ ಸರ್ಕಾರದ ಹಣಕಾಸಿನ ವ್ಯವಹಾಗಳ ಮೇಲಿನ ವರದಿಯನ್ನು (ಸಂಖ್ಯೆ–1) ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

**ಆ) ಕಾರ್ಯದರ್ಶಿಗಳು, ಕ.ವಿ.ಪ:–** ಮಾನ್ಯ ಸಭಾಪತಿಯವರ ಅನುಮತಿಯೊಂದಿಗೆ ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ:

1) ಕರ್ನಾಟಕ ವೈದ್ಯಕೀಯ ನೋಂದಣಿ (ತಿದ್ದುಪಡಿ) ವಿಧೇಯಕ, 2017
2) ಕರ್ನಾಟಕ ವೃತ್ತಿ ಶಿಕ್ಷಣ ಸಂಸ್ಥೆಗಳ (ಪ್ರವೇಶ ನಿಯಂತ್ರಣ ಮತ್ತು ಶುಲ್ಕ ನಿಗದಿ) (ತಿದ್ದುಪಡಿ) ವಿಧೇಯಕ, 2017
3) ಕರ್ನಾಟಕ ಭೂ ಕಂದಾಯ (ಎರಡನೇ ತಿದ್ದುಪಡಿ) ವಿಧೇಯಕ, 2017
4) ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿ (ತಿದ್ದುಪಡಿ) ವಿಧೇಯಕ, 2017 ಹಾಗೂ
5) ತಿದ್ದುಪಡಿಗಳೊಂದಿಗೆ ಅಂಗೀಕೃತ ರೂಪದಲ್ಲಿರುವ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕ, 2017ಗಳನ್ನು ಸಭೆಯ ಮಂದೆ ಮಂಡಿಸುತ್ತಿದ್ದೇನೆ.

**ಸಭಾಪತಿಯವರು**: ಮಂಡಿಸಲಾಯಿತು.

## 5. ವರದಿಯನ್ನೊಪ್ಪಿಸುವುದು

**ಶ್ರೀ ಆರ್.ಬಿ.ತಿಮ್ಮಾಪೂರ (ವಿಧಾನಸಭೆಯಿಂದ ಚುನಾಯಿತರಾದವರು):–** ಮಾನ್ಯ ಸಭಾಪತಿಯವರೇ, ಕರ್ನಾಟಕ ವಿಧಾನ ಮಂಡಲದ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿಯ ಸದಸ್ಯನಾದ ನಾನು, 14ನೇ ವಿಧಾನಸಭೆಯ 2016–17ನೇ ಸಾಲಿನ ಸಮಿತಿಯ 7ನೇ ವರದಿಯನ್ನು ಸದನಕ್ಕೆ ಒಪ್ಪಿಸುತ್ತಿದ್ದೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**6. ಶಾಸನ ರಚನೆ**

**ವಿಧೇಯಕಗಳ ಪರ್ಯಾಲೋಚನೆ ಮತ್ತು ಅಂಗೀಕಾರ**

**ಅ) ಕರ್ನಾಟಕ ವೈದ್ಯಕೀಯ ನೋಂದಣಿ (ತಿದ್ದುಪಡಿ) ವಿಧೇಯಕ, 2017**

**ಪರ್ಯಾಲೋಚನಾ ಪ್ರಸ್ತಾವ**

**ಡಾ|| ಶರಣಪ್ರಕಾಶ್ ರುದ್ರಪ್ಪ ಪಾಟೀಲ್ (ವೈದ್ಯಕೀಯ ಶಿಕ್ಷಣ ಸಚಿವರು):–** ಮಾನ್ಯ ಸಭಾಪತಿಯವರೇ, ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2017ನೇ ಸಾಲಿನ ಕರ್ನಾಟಕ ವೈದ್ಯಕೀಯ ನೋಂದಣಿ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

**ಡಾ|| ಶರಣಪ್ರಕಾಶ್ ರುದ್ರಪ್ಪ ಪಾಟೀಲ್ (ವೈದ್ಯಕೀಯ ಶಿಕ್ಷಣ ಸಚಿವರು):–** ಮಾನ್ಯ ಸಭಾಪತಿಯವರೇ, Karnataka Medical Council Act ನಲ್ಲಿ ಕೆಲವೊಂದು ತಿದ್ದುಪಡಿಯನ್ನು ತರುತ್ತಿದ್ದೇನೆ. ಇದೊಂದು ಬಹಳ ಸಣ್ಣದಾದ ತಿದ್ದುಪಡಿಯಾಗಿದೆ. ಈಗ Karnataka Medical Council ಅನ್ನು constitute ಮಾಡುವಾಗ, ಒಂದೇ ಕಡೆಯಿಂದ ಎಲ್ಲಾ elect ಆಗತಕ್ಕಂಥದ್ದು, ಬೆಂಗಳೂರಿನಿಂದ ಜಾಸ್ತಿ ವೈದ್ಯರು ಇರುತ್ತಾರೆ. ಇಲ್ಲೇ ಎಲ್ಲ elect ಆಗುತ್ತಾರೆ. ಈ ರೀತಿ ಎಲ್ಲಾ ಆಗುತ್ತಿತ್ತು. ಅದಕ್ಕೋಸ್ಕರ ನಮ್ಮ ರಾಜ್ಯದಲ್ಲಿರುವ ನಾಲ್ಕು ರೆವೆನ್ಯೂ ವಿಭಾಗಗಳಿವೆ. ಆ ನಾಲ್ಕೂ ರೆವಿನ್ಯೂ ವಿಭಾಗಗಳಿಂದ representation ಎನ್ನತಕ್ಕಂಥ ಅಂಶಗಳನ್ನು ಇದರಲ್ಲಿ ನಾವು incorporate ಮಾಡಿದ್ದೇವೆ. ಎರಡನೆಯದಾಗಿ, ಈ ನಮ್ಮ ವೈದ್ಯರು ಪದವಿ ಪಡೆದ ನಂತರ, ಪ್ರಾಕ್ಟೀಸ್ ಮಾಡುತ್ತಾರೆ. ಅವರು ಪ್ರಾಕ್ಟೀಸ್ ಮಾಡತಕ್ಕಂಥ ಸಂದರ್ಭದಲ್ಲಿ, ಅವರು ತಮ್ಮ knowledge update ಮಾಡಿಕೊಳ್ಳುವಂಥದ್ದು ಬಹಳ ಅವಶ್ಯಕತೆ ಇದೆ. ಏಕೆಂದರೆ, ನಮ್ಮ ಇಡೀ ಜಗತ್ತಿನಲ್ಲಿ ಬಹಳ ವೇಗದಲ್ಲಿ ಇವತ್ತಿನ ದಿವಸ ಹೊಸ ಹೊಸ procedures, ಹೊಸ ಹೊಸ equipments ಮತ್ತು treatment procedures ಇರುತ್ತದೆ ಮತ್ತು ಏನೇನು ಹೊಸ ಸಂಶೋಧನೆಗಳು ಆಗುತ್ತಿವೆ ಇವುಗಳನ್ನು ವೈದ್ಯರು ತಮ್ಮ knowledge ಅನ್ನು update

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಿಕೊಳ್ಳಬೇಕು. ವೈದ್ಯರು ಐದು ವರ್ಷಗಳಿಗೊಮ್ಮೆ ಕಡ್ಡಾಯವಾಗಿ ನೋಂದಣಿ ಮಾಡಿಕೊಳ್ಳಬೇಕು. ನಂತರ ಅದಕ್ಕೆ ಅವರು ಶುಲ್ಕವನ್ನು ಕಟ್ಟಬೇಕು. ಅದಾದ ನಂತರ, ಅವರು ಈ credit points ಕ್ರೆಡಿಟ್ ಪಾಯಿಂಟ್ಸ್ ಅನ್ನು ಅಲಾಟ್ ಮಾಡುತ್ತಾರೆ. ಅಂದರೆ ಅವರು C.M.E. (Continued Medical Education) attend ಮಾಡಬೇಕು. Scientific sessions attend ಮಾಡಬೇಕು. ಅದಕ್ಕೆ credit points ಅನ್ನು allot ಮಾಡುತ್ತಾರೆ. ಅದನ್ನು ಮಾಡಿದರೆ ಮಾತ್ರ ಅವರಿಗೆ ಇವತ್ತಿನ ದಿವಸ renewal ಆಗತಕ್ಕಂಥದ್ದು provision ಇದೆ. ಹಾಗಾಗಿ, ನಮ್ಮ ವೈದ್ಯರ knowledge update ಮಾಡಬೇಕು. ಇವತ್ತಿನ ದಿವಸ ಜಗತ್ತಿನಲ್ಲಿ ಹೊಸದಾಗಿ ಏನು treatment procedures ನಡೆಯುತ್ತಿದೆ ಅದನ್ನು ಅವರು knowledge update ಮಾಡಿಕೊಳ್ಳಬೇಕು. ಅವರು ನೋಂದಣಿ ಮಾಡಿಕೊಳ್ಳಬೇಕು ಮತ್ತು ಇವತ್ತಿನ ದಿವಸ ಬಹಳಷ್ಟು ಕಡೆಗಳಲ್ಲಿ ನಕಲಿ ವೈದ್ಯರು ಇದ್ದಾರೆ ಅವರನ್ನೆಲ್ಲಾ ತೆಗೆದು ಹಾಕಿ, online procedure maintain ಮಾಡಿ, ಇವತ್ತಿನ ದಿವಸ ಎಲ್ಲಾ ವೈದ್ಯರಿಗೂ ಇದನ್ನು ಮಾಡಬೇಕೆನ್ನುವ ಉದ್ದೇಶದಿಂದ ಇದನ್ನು ಮಾಡಿದ್ದೇವೆ. ಇದಕ್ಕೆ ಸದನವು ಒಪ್ಪಿಗೆ ಕೊಡಬೇಕೆಂದು ನನ್ನ ಮನವಿ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್(ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು, ಕರ್ನಾಟಕ ವೈದ್ಯಕೀಯ ನೋಂದಣಿ (ತಿದ್ದುಪಡಿ) ವಿಧೇಯಕ 2017 ನ್ನು ತಂದಿದ್ದಾರೆ, ಆ ಉದ್ದೇಶಗಳಿಗಾಗಿ ನಾನು ವಿಧೇಯಕವನ್ನು ಸ್ವಾಗತ ಮಾಡುತ್ತೇನೆ. ಆದರೆ ನಾನು ತಿಳಿದುಕೊಂಡ ಹಾಗೆ, ಕರ್ನಾಟಕ ರಾಜ್ಯದಲ್ಲಿ ವೈದ್ಯರುಗಳಿಗೆ ಶಾಶ್ವತ ನೋಂದಣಿ ಎಂದು ಇತ್ತು. ಅವರು lifetimeಗೆ ನೋಂದಣಿಯನ್ನು ಮಾಡುತ್ತಿದ್ದರು. ನನ್ನ ಪ್ರಶ್ನೆ ಇರುವಂಥದ್ದು, ಆ ವೈದ್ಯರುಗಳಿಗೆ ಏನಾಗುತ್ತದೆಂದರೆ, ನೀವು ಆ ಶಾಶ್ವತವಾದ ನೋಂದಣಿಯನ್ನು ಎತ್ತಿಹಾಕಿದ್ದೀರಿ. ಅದು ಇರಬೇಕಾದರೆ, ತಾವು ಈಗ ಅವರಿಗೆ ಮತ್ತೆ 5 ವರ್ಷಗಳಿಗೆ ನೋಂದಣಿ ಮಾಡಿಸಬೇಕೆಂದು ಹೇಳಿದರೆ, ಅವರು ಮತ್ತೆ ಕೋರ್ಟಿಗೆ ಹೋಗುತ್ತಾರೆ. ಹಾಗಾಗಿ ಇದನ್ನು prospective ಆಗಿ, ಇನ್ನು ಮುಂದೆ ಬರುವಂತಹ ವೈದ್ಯರುಗಳಿಗೆ ಅನ್ವಯ ಮಾಡಿದರೆ ಕೋರ್ಟ್ ತಕರಾರು ಮತ್ತು ಕೋರ್ಟ್‌ನ ಸಮಸ್ಯೆಗಳು ಇರುವುದಕ್ಕೆ ಸಾಧ್ಯವಿಲ್ಲ. ಮಾನ್ಯ ಸಚಿವರು ಡಾಕ್ಟರ್ ಇದ್ದೀರಿ. ಅದು ತಮಗೂ ಗೊತ್ತಿದೆ. ತಾವು ಶಾಶ್ವತವಾಗಿ ನೋಂದಣಿಯನ್ನು ಮಾಡಿಕೊಂಡಿದ್ದೀರಿ. ಈಗ ಅವರು ಶಾಶ್ವತವಾಗಿ ನೋಂದಣಿಯನ್ನು ಮಾಡಿಸಿಕೊಂಡಿರುವವರಿಗೆ, 'ನೀವು ಮತ್ತೆ 5 ವರ್ಷಗಳಿಗೊಮ್ಮೆ ನೋಂದಣಿ ಮಾಡಿಸಿಕೊಳ್ಳುವುದಕ್ಕೆ ಬನ್ನಿ' ಎಂದರೆ, ಹೇಗೆ ಸರಿ ಹೋಗುತ್ತದೆ. ಹಾಗಾಗಿ, ಇದನ್ನು ತಾವು ಕ್ಲಾರಿಫೈ ಮಾಡಬೇಕು. ಯಾವ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಾರಣಕ್ಕಾಗಿ ಈ ಬಿಲ್ಲನ್ನು ತಂದಿದ್ದಾರೆ ಎನ್ನುವುದು ಚೆನ್ನಾಗಿದೆ. ಅದನ್ನು ಸ್ವಾಗತ ಮಾಡುತ್ತೇನೆ. ಆದರೆ ಈಗಾಗಲೇ ಕರ್ನಾಟಕ ರಾಜ್ಯದ ವೈದ್ಯರುಗಳು ಶಾಶ್ವತವಾಗಿ ನೋಂದಣಿ ಮಾಡಿಸಿಕೊಂಡಿರುವುದರಿಂದ, ಅವರಿಗೆ ಇದನ್ನು ಅನ್ವಯ ಮಾಡಲು ಹೊರಟರೆ ಸಮಸ್ಯೆಗಳು ಆಗಬಹುದು. ಆ ದೃಷ್ಟಿಯಲ್ಲಿ ಇದನ್ನು ಕ್ಲಾರಿಫೈ ಮಾಡಬೇಕು. ಈ ಬಿಲ್ಲನ್ನು ತಾವು prospective ಆಗಿ ಅನ್ವಯ ಮಾಡಿದರೆ, ಯಾವುದೇ ಸಮಸ್ಯೆಗಳು ಆಗುವುದಿಲ್ಲವೆಂದು ಹೇಳುವ ಸಂಗತಿಯನ್ನು ಕ್ಲಾರಿಫೈ ಮಾಡಬೇಕೆಂದು ವಿನಂತಿ ಮಾಡುತ್ತೇನೆ.

**ಶ್ರೀ ಪ್ರಾಣೇಶ್ ಎಂ.ಕೆ:–** ಮಾನ್ಯ ಸಭಾಪತಿಯವರೇ, ವೈದ್ಯಕೀಯ ಶಿಕ್ಷಣದ ಒಂದು ಮಸೂದೆಯಲ್ಲಿ ಪದವಿ ಪ್ರವೇಶಕ್ಕೆ ಸ್ಥಳೀಯ...

**ಸಭಾಪತಿಯವರು:–** ಮಾನ್ಯ ಸಚಿವರೇ, ಅವರಿಗೆ ಉತ್ತರ ಕೊಡುವುದಾದರೆ ಕೊಡಿ ಅಥವಾ ಎಲ್ಲಾ ಸದಸ್ಯರ ಪಾಯಿಂಟ್ಸ್ ನೋಟ್‌ಡೌನ್ ಮಾಡಿಕೊಂಡು ಹೇಳಿ. ಈಗ ಐದಾರು ಜನ ಮಾತನಾಡಲು ಕೈ ಎತ್ತಿದ್ದಾರೆ. ಶ್ರೀ ಎಸ್.ವ್ಹಿ.ಸಂಕನೂರ್‌ರವರು ಸದನದಲ್ಲಿ ಮಾತನಾಡಲು ಕೈ ಎತ್ತಿದ್ದಾರೆ. ತಾವು ಹೇಳಿ.

**ಶ್ರೀ ಎಸ್.ವ್ಹಿ.ಸಂಕನೂರ(ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ವೈದ್ಯಕೀಯ ನೋಂದಣಿ ಅಧಿನಿಯಮಕ್ಕೆ ಏನು ತಿದ್ದುಪಡಿ ತರುವುದಕ್ಕೆ ಹೊರಟಿದ್ದಾರೆ. ಮೊದನೆಯದು, ವೈದ್ಯಕೀಯ ಪರಿಷತ್ ಚುನಾವಣೆಗೆ ನಾಲ್ಕು ವಿಭಾಗದಿಂದ ಆಯ್ಕೆಯಾಗುವುದನ್ನು ನಾನು ಸ್ವಾಗತ ಮಾಡುತ್ತೇನೆ. ಎರಡನೆಯದು, ನೋಂದಣಿ ನವೀಕರಣ ಕುರಿತು ಇವರು ತರಬೇತಿ, ಒಂದು ರೀತಿಯ ಪರೀಕ್ಷೆ ನಡೆಸಿ, ಗ್ರೇಡ್ಸ್, ಅಂಕಗಳನ್ನು ತೆಗೆದುಕೊಳ್ಳುವ ಬಗ್ಗೆ ಹೇಳಿದ್ದಾರೆ. ಅವರು ಶುಲ್ಕವನ್ನು ಕಟ್ಟಬೇಕೆಂದು ಹೇಳಿದ್ದಾರೆ. ಆದರೆ ಅವರಿಗೆ ತರಬೇತಿ ಕೊಡುವವರು ಯಾರು? ತರಬೇತಿ ಕೊಡುವುದನ್ನು ನೀವೇ ಮಾಡುತ್ತೀರೋ ಅಥವಾ ಪರೀಕ್ಷೆಯನ್ನು ನಡೆಸುತ್ತೀರೋ, ಅದರಲ್ಲಿ ಅವರು required grade ತೆಗೆದುಕೊಳ್ಳಲಿಲ್ಲವೆಂದರೆ ಕೊಟ್ಟಿದ್ದನ್ನು ವಾಪಸ್ಸು ಪಡೆದುಕೊಳ್ಳುತ್ತೀರೋ. ಅದರ ಬಗ್ಗೆ ವಿವರಣೆ ಬೇಕಲ್ಲವೇ? Required grade ಏನನ್ನೂ ತೆಗೆದುಕೊಳ್ಳಲಿಲ್ಲವೆಂದರೆ, ಅವರ recognition ಅನ್ನು withdraw ಮಾಡುತ್ತೀರಾ.

**ಡಾ|| ಶರಣಪ್ರಕಾಶ್ ರುದ್ರಪ್ಪ ಪಾಟೀಲ್:–** ಮಾನ್ಯ ಸಭಾಪತಿಯವರೇ, ಅದರ ಬಗ್ಗೆ ವಿವರಿಸುತ್ತೇನೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ವ್ಹಿ.ಸಂಕನೂರ:-** ಮಾನ್ಯ ಸಭಾಪತಿಯವರೇ, ಅದು ಬೇಕು. ನಿಮ್ಮ requirement ಏನು. ಅದರ ಬಗ್ಗೆ ಮಾನ್ಯ ಸಚಿವರು ವಿವರಣೆ ಕೊಡಬೇಕು. ಇವತ್ತಿನ ದಿವಸ ನಾಲ್ಕೈದು ಬಿಲ್ಲುಗಳನ್ನು ಒಂದೇ ದಿನದಲ್ಲಿ ತಂದಿರುತ್ತಾರೆ. ಅವುಗಳನ್ನು ನೋಡುವುದಕ್ಕೂ ಕೂಡ ಅವಕಾಶವಿಲ್ಲ. ಅವನ್ನೆಲ್ಲಾ ಇವತ್ತಿಗೆ ಚರ್ಚೆಗೆ ತೆಗೆದುಕೊಂಡರೆ, ನಾವು ಅಭಿಪ್ರಾಯವನ್ನು ಹೇಗೆ ಮಾಡಬೇಕು. ಸುಮ್ಮನೆ ಪಾಸಾಗಿದೆ ಎಂದು ತಿಳಿದುಕೊಂಡು ಪಾಸು ಮಾಡಿಕೊಂಡುಬಿಡಲಿ. ಈ ರೀತಿ ಮಾಡುವುದು ಒಳ್ಳೆಯದಲ್ಲ. ನಾವು ಓದುವುದಕ್ಕೂ ಸಹ ಅವಕಾಶವಿಲ್ಲ. ನಮ್ಮ ಅಭಿಪ್ರಾಯವನ್ನು ಕೇಳಿದರೆ ಹೇಗೆ ಸಾಧ್ಯವಾಗುತ್ತದೆ. ದಯವಿಟ್ಟು ಈ ನಾಲ್ಕು ವಿಧೇಯಕಗಳನ್ನು ನಾಳೆ ತೆಗೆದುಕೊಳ್ಳಿ. ಇವತ್ತೇ ಅವನ್ನು ಓದಿ, ಚರ್ಚೆ ಮಾಡಿ, ಸರ್ಕಾರ ಉತ್ತರ ಕೊಡುವುದಕ್ಕೆ ಬಹಳ ಕಷ್ಟವಾಗುತ್ತದೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಸದಸ್ಯರ ಅಭಿಪ್ರಾಯವನ್ನು ಕೇಳುವುದಕ್ಕೋಸ್ಕರವಾದರು ವಿಧೇಯಕಗಳ ಪ್ರತಿಯನ್ನು ಹಾಕಿಲ್ಲ.

**ಶ್ರೀ ಎಸ್.ವ್ಹಿ.ಸಂಕನೂರ:-** ಮಾನ್ಯ ಸಭಾಪತಿಯವರೇ, ನಮ್ಮ ಅಭಿಪ್ರಾಯ ಕೇಳುತ್ತಿರುವುದು ನಾವು ಅದನ್ನು ಓದಬೇಕು. ಸರಿ ಇರುವುದನ್ನು ಸ್ವಾಗತ ಮಾಡಬೇಕು. ಯಾವುದು ಸರಿ ಇರುವುದಿಲ್ಲ ಅದಕ್ಕೆ ನಾವು objection ಮಾಡಬೇಕು. ಅದಕ್ಕೆ ನಮಗೆ ಅವಕಾಶವೇ ಇಲ್ಲ. ಇದು ಸರಿಯಾದಂಥ ಕ್ರಮವಲ್ಲ. ಇದನ್ನು ನಾಳೆ ಸದನದಲ್ಲಿ ಚರ್ಚೆಗೆ ತೆಗೆದುಕೊಳ್ಳಿ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಕನಿಷ್ಠ ಮೂರು ದಿನಗಳ ಮುಂಚಿತವಾಗಿ ಸದಸ್ಯರಿಗೆ ವಿಧೇಯಕಗಳ ಪ್ರತಿಯನ್ನು ಕೊಡಬೇಕೆಂದು B.A.C. (Business Advisory Committee)ಯಲ್ಲಿ ನಿರ್ಣಯವಾಗಿತ್ತು.

**ಶ್ರೀ ಕೆ.ಬಿ.ಶಾಣಪ್ಪ(ನಾಮ ನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ಈಗ ವಿಧೇಯಕಗಳನ್ನು ನೀಡಿ, ಈಗಲೇ ಚರ್ಚೆ ಮಾಡಿ ಅಂಗೀಕಾರ ನೀಡಿ ಎಂದರೆ, ಈ ರೀತಿ ತಿದ್ದುಪಡಿ ಮಾಡಿ ಎಂದು ಸಲಹೆ ಕೊಡುವುದಕ್ಕೆ ನಮಗೆ ಈಗ ಸಮಯ ಎಲ್ಲಿದೆ?

**ಶ್ರೀ ಎಸ್.ವ್ಹಿ.ಸಂಕನೂರ:-** ಮಾನ್ಯ ಸಭಾಪತಿಯವರೇ, ಜನರು, 'ನಿಮ್ಮನ್ನು ಏತಕ್ಕೆ ಆರಿಸಿ ಕಳುಸಿರುವುದು?' ಎಂದು ನಮ್ಮನ್ನು ಕೇಳುತ್ತಾರೆ. ನಾವು ಅವರಿಗೆ ಏನು ಉತ್ತರ ಕೊಡಬೇಕು?

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**Sri K.B. SHANAPPA:** Is this the way the bill is introduced in this House? ಒಂದುವೇಳೆ, ಅವರು ತಂದಿರುವ ವಿಧೇಯಕದ ಬಗ್ಗೆ ನಮ್ಮ ಅಭ್ಯಂತರವೇನಿಲ್ಲ. ಆದರೆ, ಅದನ್ನು ಓದಿ ಚರ್ಚೆ ಮಾಡುವುದಕ್ಕೆ ನಮಗೆ ಸಮಯ ಕೊಡಬೇಕಲ್ಲವೇ? We are the party to talk about it. You have to give ample time for us to make some amendments. All of a sudden, if you want to say, 'whatever I have produced before the House, you accept it,' I am sorry, it's not a good thing.

**ಶ್ರೀ ಬಸವರಾಜ ರಾಯರೆಡ್ಡಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಶಾಣಪ್ಪನವರು, 'ಚರ್ಚೆಗೆ ಸ್ವಲ್ಪ ಟೈಮ್ ಕೊಡಬೇಕು' ಎಂದು ಹೇಳಿರುವುದನ್ನು ನಾವು ಒಪ್ಪಿಕೊಳ್ಳುತ್ತೇವೆ. ಆ ವಿಧೇಯಕಗಳಲ್ಲಿನ ಅಂಶಗಳು ಉತ್ತಮವಾಗಿದ್ದರೆ ಸ್ವಾಗತ ಮಾಡುತ್ತಾರೆ ಮತ್ತು ಕೆಲವು ಸಲಹೆಗಳನ್ನು ನೀಡುತ್ತಾರೆ ಎನ್ನುವುದು ನನಗೂ ಗೊತ್ತಿದೆ.

(ಮುಂದು..)

(427) 24.3.2017 11.50 ಪಿಕೆ:ಎಕೆ

**ಶ್ರೀ ಕೆ.ಬಿ.ಶಾಣಪ್ಪ:-** ಸರ್ಕಾರ ಎಲ್ಲೂ ಹೋಗುವುದಿಲ್ಲ, ಇನ್ನೂ ಒಂದು ವರ್ಷದ ತನಕ ಇರುತ್ತದೆ. . . .

**ಶ್ರೀ ಬಸವರಾಜ ರಾಯರೆಡ್ಡಿ:-** ದಯವಿಟ್ಟು ಸಹಕಾರ ಮಾಡಿ.

**ಶ್ರೀ ಕೆ.ಬಿ.ಶಾಣಪ್ಪ:-** ಒಂದು ವರ್ಷ ಕಾಲ ಸರ್ಕಾರ ಇರುತ್ತದೆ. ಏಕೆ ಗಡ್‌ಬಡ್ ಮಾಡುತ್ತೀರಿ?

**ಡಾ:ಶರಣಪ್ರಕಾಶ್ ಆರ್.ಪಾಟೀಲ್:-**ಇದರಲ್ಲಿ ಗಡ್‌ಬಡ್ ಏನೂ ಇಲ್ಲ. ನಮಗೆ ಒಂದು ವಿಧೇಯಕ ತುರ್ತಾಗಿ ಪಾಸ್ ಆಗಬೇಕಿದೆ . . .

**ಶ್ರೀ ಕೆ.ಬಿ.ಶಾಣಪ್ಪ:-** ನಮ್ಮ ಕೊಠಡಿಗೆ ಅಜೆಂಡಾ ಕಳುಹಿಸುವಾಗ ವಿಧೇಯಕದ ಕಾಪಿಯನ್ನೂ ಕಳುಹಿಸಿಕೊಟ್ಟರೆ ಒಳ್ಳೆಯದಾಗುತ್ತದೆ. I am very sorry…

**ಡಾ: ಶರಣಪ್ರಕಾಶ್ ಆರ್.ಪಾಟೀಲ್:-** ಇದರಲ್ಲಿ ನಮಗೆ ಒಂದು ವಿಧೇಯಕ ತುರ್ತಾಗಿ ಪಾಸ್ ಆಗಬೇಕಾಗಿದ್ದು, ಅದಕ್ಕೆ ಕಾರಣವೇನೆಂದರೆ, ಪಿ.ಜಿ.ಕೌನ್ಸೆಲಿಂಗ್ ಆಗಬೇಕು, ಅದು 25ನೇ ತಾರೀಖಿಗೆ ಇದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೇಂದ್ರ ಸರ್ಕಾರದಿಂದ ಬಂದಮೇಲೆ ನಾವು ಕೆಲವು ತಿದ್ದುಪಡಿ ತಂದು ಮಾಡಿದ್ದೇವೆ. ಆ ವಿಧೇಯಕ ಮುಂದೆ ಬರುವುದಿದೆ, ತುರ್ತಾಗಿ ಪಾಸ್ ಆಗಬೇಕಿದೆ. ಪ್ರಸ್ತುತ ವಿಧೇಯಕದ ಬಗ್ಗೆ ಚರ್ಚೆ ಆಗಲಿ. ಮಾನ್ಯ ಸದಸ್ಯರುಗಳ apprehension ಏನಿದೆಯೋ ಆ ಕುರಿತು ನಾನು ಕನ್‌ವಿನ್ಸ್ ಮಾಡುತ್ತೇನೆ. If they are convinced, you allow me. If you are not convinced, O.K., I am ready to this thing. I will try to convince you people. ಈಗೇನು ಎರಡನೆ ವಿಧೇಯಕ ಸದನದ ಮುಂದೆ ಬರುವುದಿದೆಯೋ ಅದು ತುರ್ತಾಗಿ ಇವತ್ತೇ ಪಾಸ್ ಆಗಬೇಕಿದೆ, ಅದು ನನ್ನ ಇಲಾಖೆಗೆ ಸಂಬಂಧಪಟ್ಟಿದ್ದಾಗಿದೆ. ದಿನಾಂಕ 25ರಿಂದ ಕೌನ್ಸೆಲಿಂಗ್ ಪ್ರಾರಂಭ ಮಾಡಬೇಕಿದೆ. ಆದರೆ ಪ್ರಸ್ತುತ ಈ ವಿಧೇಯಕದಲ್ಲಿ ಏನೇನು apprehension ಇದೆಯೋ ಅದರ ಬಗ್ಗೆ ಕ್ಲ್ಯಾರಿಫೈ ಮಾಡುತ್ತೇನೆ. ಈ ವಿಧೇಯಕಕ್ಕೆ ಅರ್ಜೆನ್ಸಿ ಇಲ್ಲ. If you want time, I can give time. ಮಾನ್ಯ ಕಾರ್ಣಿಕ್‌ರವರು, ಪರ್ಮನೆಂಟ್ ರಿಜಿಸ್ಟ್ರೇಷನ್ ಆದವರಿಗೂ ಏಕೆ ಅನ್ವಯ ಮಾಡುತ್ತೀರಿ ಎನ್ನುವ ಮಾತನ್ನು ಕೇಳಿದರು. ನಮ್ಮ ವೈದ್ಯರು ಒಂದು ಸಲ ಪರ್ಮನೆಂಟ್ ರಿಜಿಸ್ಟ್ರೇಷನ್ ಆದಮೇಲೆ knowledge updation is very must for them. ನಾನೂ ಒಬ್ಬ ವೈದ್ಯನಾಗಿದ್ದೇನೆ. ಆ ಹಿನ್ನೆಲೆಯಿಂದ ಹೇಳುತ್ತಿದ್ದೇನೆ. ಈಗೇನಾಗುತ್ತದೆ ಎಂದರೆ if we don't update our knowledge, who is the end beneficiary? ಬಡವರು, ಅನುಕೂಲ ಇಲ್ಲದೇ ಇರುವಂತಹ ಜನ ಬಂದಾಗ we have to give them quality treatment.

**Sri KAVATAGIMATH MAHANTESH MALLIKARJUN:** In what way renewal of registration helps? ಅದರ ಬಗ್ಗೆ ವಿವರಣೆ ಕೊಡಿ.

**ಡಾ.ಶರಣಪ್ರಕಾಶ್ ಆರ್.ಪಾಟೀಲ್:–** ಆ ವಿವರಣೆಯನ್ನೇ ಕೊಡುತ್ತಿದ್ದೇನೆ. ಇದರಲ್ಲಿ ನಾವು ಏನು incorporate ಮಾಡಿದ್ದೇವೆ ಎಂದರೆ, 5 ವರ್ಷಕ್ಕೊಮ್ಮೆ ಅವರು ನವೀಕರಣ ಮಾಡಿಸುವುದಕ್ಕೆ ಬಂದಾಗ certain 30 credit points ಅನ್ನು ಪಡೆದಿರಬೇಕು. ಮಾನ್ಯ ಸಂಕನೂರರವರು, ಈ 30 credit points ಗೆ ಪರೀಕ್ಷೆ ಬರೆಯಬೇಕಾಗುತ್ತದೆಯೇ ಎಂದು ಕೇಳಿದರು. ಆ ರೀತಿ ಇಲ್ಲ. ಮಾನ್ಯ ಸಭಾಪತಿಗಳೆ, State Level, Zonal Level, National Level, International level medical conference ಗಳು ಆಗುತ್ತವೆ. ಇವು ನಮ್ಮ ದೇಶದಲ್ಲೂ ಆಗುತ್ತವೆ, ರಾಜ್ಯದಲ್ಲೂ ಆಗುತ್ತವೆ. ಇವರು ಆ ಕಾನ್‌ಫರೆನ್ಸ್‌ಗಳನ್ನು ಅಟೆಂಡ್ ಮಾಡಬೇಕು ಅಷ್ಟೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

They have to attend the conference. ಆ ಕಾನ್‌ಫರೆನ್ಸ್‌ಗಳನ್ನು ಅಟೆಂಡ್ ಮಾಡುವುದರಿಂದ ಏನಾಗುತ್ತದೆ ಎಂದು ನೀವು ಕೇಳಬಹುದು. Scientific sessions, workshops, latest procedures in the country, latest procedures in the State, latest procedures in the whole world are being displayed in those conferences. ಬೇರೆ ಬೇರೆ ರೀತಿಯ case studies ಬರುತ್ತವೆ. ಹಾಗಾಗಿ scientific sessions ಅಟೆಂಡ್ ಮಾಡಬೇಕು. ಸೆಮಿನಾರ್ಸ್ ಅಟೆಂಡ್ ಮಾಡಬೇಕು. Workshops will be conducted across the State as well as the country. ಅವುಗಳನ್ನು ಅಟೆಂಡ್ ಮಾಡಬೇಕು. Approved C.M.E. (Continued Medical Education) Programmes ಮಾಡುತ್ತಾರೆ. ಇದನ್ನು ಕೆಎಂಸಿ ಕಡೆಯಿಂದ, ಮೆಡಿಕಲ್ ಕಾಲೇಜುಗಳು ಮತ್ತು ಬೇರೆ ಬೇರೆ ಆಸ್ಪತ್ರೆಗಳು ಮಾಡುತ್ತವೆ. ಇವುಗಳನ್ನು ಅಟೆಂಡ್ ಮಾಡಬೇಕಾಗುತ್ತದೆ. ಅಟೆಂಡ್ ಮಾಡಿ 30 credit points ಮಾಡಿದರೆ ಅವರ knowledge updation ಆಗುತ್ತದೆ. 5 ವರ್ಷಕ್ಕೊಮ್ಮೆ ರಿನ್ಯೂಯಲ್ ಮಾಡುವುದಕ್ಕೆ ಬಂದಾಗ ಇಷ್ಟು ಕಾನ್‌ಫರೆನ್ಸ್‌ಗಳು, ಸೆಮಿನಾರ್ಸ್ ಅಟೆಂಡ್ ಮಾಡಬೇಕಾಗುತ್ತದೆ. ಇದಕ್ಕೆ specific exams ಇರುವುದಿಲ್ಲ, ಯಾರನ್ನೂ deny ಮಾಡುವುದಿಲ್ಲ. The only thing is to make doctors to attend these conferences and update their knowledge. Once in five years, there will be re-registration. ರೀ-ರಿಜಿಸ್ಟ್ರೇಷನ್ ಮಾಡುವುದರಿಂದ . . . ಈಗೇನಾಗುತ್ತಿದೆ ಎಂದರೆ some doctors register. ಅದಾದ ಮೇಲೆ the doctor expires. After that there is no record. ಒಂದು ಸಲ permanent registration ಆದಮೇಲೆ that is not required. There are so many instances wherein ತೀರಿಕೊಂಡಿರುವ ವೈದ್ಯರ ಹೆಸರಿನಲ್ಲಿ ಬೇರೆ ಯಾರೋ ಪ್ರಾಕ್ಟೀಸ್ ಮಾಡುತ್ತಿರುತ್ತಾರೆ. Few instances like this have happened. So to eliminate these things, Alive Register ಇರಬೇಕು, online ಇರಬೇಕು, biometric oriented ಇರಬೇಕು, ಅದಕ್ಕೆ ಆಧಾರ್ ಲಿಂಕ್ ಇರಬೇಕು. ನಮ್ಮ ರಿಜಿಸ್ಟರ್‌ನಲ್ಲಿ only genuine doctors who have been practicing, who have been

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

updating their knowledge will be allowed to practice in the State. It is in public interest. As a doctor I am not trying to protect the interest of my doctor friends. I am trying to protect the interest of my people here. Because I want my patients to get quality treatment to be treated by qualified doctors. So there is nothing wrong. ಈಗ almost ಎಲ್ಲರೂ ಮಾಡುತ್ತಿದ್ದಾರೆ. ಮಾನ್ಯ ಕಾರ್ಣಿಕ್‌ರವರು ಹೇಳಿದ ಹಾಗೆ ಪ್ರಾರಂಭದಲ್ಲಿ ಸ್ವಲ್ಪ ಆತಂಕ ಇತ್ತು. Now all of them have realized that it is mandatory and it has to be done in the interest of our profession in the long run because many people are misusing this profession. This has to be curbed. So this amendment is brought in the public interest.

**ಶ್ರೀ ಅಮರನಾಥ್ ಪಾಟೀಲ್**:-ಮಾನ್ಯ ಸಭಾಪತಿಗಳೆ, ವಿಧೇಯಕದ "19.ನೋಂದಣಿಯ ನವೀಕರಣ" ದ ಅಡಿಯಲ್ಲಿ, "(2) (1)ನೇ ಉಪಪ್ರಕರಣದ ಅಡಿಯಲ್ಲಿ ತನ್ನ ನೋಂದಣಿಯನ್ನು ನವೀಕರಿಸಲು ವಿಫಲನಾದ ವೈದ್ಯಕೀಯ ವೃತ್ತಿನಿರತನು 13ನೇ ಪ್ರಕರಣದ (1)ನೇ ಉಪಪ್ರಕರಣದ ಅಡಿಯಲ್ಲಿ ಆತನು ನೋಂದಾಯಿತ ವೃತ್ತಿನಿರತನಾಗಿರುವುದು ನಿಂತು ಹೋಗತಕ್ಕದ್ದು, ರಿಜಿಸ್ಟ್ರಾರ್‌ನು 12ನೇ ಪ್ರಕರಣದ ಅಡಿಯಲ್ಲಿ ನಿರ್ವಹಿಸುತ್ತಿರುವ ರಿಜಿಸ್ಟರ್‌ನಿಂದ ಅಂಥ ವೃತ್ತಿನಿರತನ ಹೆಸರನ್ನು ತೆಗೆದುಹಾಕತಕ್ಕದ್ದು" ಎಂದು ಹೇಳಲಾಗಿದೆ. ಮಾನ್ಯ ಸಭಾಪತಿಗಳೆ, ಈಗಾಗಲೇ ಸಾಕಷ್ಟು ವರ್ಷಗಳಿಂದ qualified ಆಗಿ well established clinic ಅಥವಾ nursing home ಹಾಕಿಕೊಂಡಿರುತ್ತಾರೆ. ಆದರೆ sudden ಆಗಿ, ನಿಮ್ಮ ಹೆಸರನ್ನೇ ತೆಗೆದು ಹಾಕುತ್ತೇವೆ ಎಂದು ಹೇಳಿದರೆ ಹೇಗಾಗುತ್ತದೆ? ಅವರೂ ಕೂಡ update ಆಗುತ್ತಿರುತ್ತಾರೆ. ನಿಮ್ಮ ಪ್ರಕಾರ ಈಗ ಅಂಥವರು ಅಂತರರಾಷ್ಟ್ರೀಯ ಮಟ್ಟದಲ್ಲಿ ಎಲ್ಲಿ ಸೆಮಿನಾರ್‌ಗಳು ನಡೆಯುತ್ತವೆಯೋ ಅಲ್ಲಿ ಹುಡುಕಿಕೊಂಡು ಹೋಗಬೇಕಾಗುತ್ತದೆ. ಅವರ ಹೆಸರನ್ನೇ ತೆಗೆದು ಹಾಕುವಂಥ ಪ್ರಾವಿಷನ್ ಮಾಡಿರುವುದು ಸರಿಯಲ್ಲ.

**ಡಾ: ಶರಣಪ್ರಕಾಶ್ ಆರ್.ಪಾಟೀಲ್**:- ಈ ವಿಧೇಯಕದಲ್ಲಿ ಏನು ತಿದ್ದುಪಡಿಯನ್ನು ತಂದಿದ್ದೇವೋ ಅದು ಹಿಂದೆಯೂ ಇತ್ತು. ಇಲ್ಲಿ ಕೇವಲ ತೆಗೆದುಹಾಕುವುದು ಮಾತ್ರ ಅಲ್ಲ, ಮತ್ತೆ ಸೇರಿಸುವುದೂ ಕೂಡ ಇರುತ್ತದೆ. Seminars, scientific sessions, workshops

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

and CME Programmes are being conducted throughout the year invariably. ಅದಕ್ಕೇನೂ ಕಡಿಮೆಯಿಲ್ಲ.

**ಶ್ರೀ ಅಮರನಾಥ ಪಾಟೀಲ್:-**ಅವರು ಹೆಸರು ತೆಗೆದು ಹಾಕುವುದು, ನಿಂತು ಹೋಗುವುದು ಎಂದರೆ ಅದು ಅವರ ಪ್ರೊಫೆಷನ್‌ಗೆಯೇ ಇನ್‌ಸಲ್ಟ್ ಮಾಡಿದ ಹಾಗಾಗುತ್ತದೆ. . .

**ಡಾ: ಶರಣಪ್ರಕಾಶ್ ಆರ್.ಪಾಟೀಲ್:-** ಹಾಗಾದರೆ knowledge update ಆಗಬಾರದು ಎಂದು ಹೇಳುತ್ತೀರಾ? Is it not required? ತೆಗೆದು ಹಾಕುವುದಿಲ್ಲ ಎಂದು ಹೇಳಿಬಿಟ್ಟರೆ ಯಾರೂ ಮಾಡುವುದಿಲ್ಲ. ಹಿಂದೆಯೂ ಇದಕ್ಕೆ ಪ್ರಾವಿಷನ್ ಮಾಡಿದ್ದಾರೆ. ತೆಗೆದು ಹಾಕಿದಮೇಲೆ ಅದನ್ನು ಮತ್ತೆ re-registration ಮಾಡುವುದಕ್ಕೆ ಅವಕಾಶ ಇದೆ. They have to just show that they have attended so many seminars, workshops, etc., and they will be re-registered. ಹಾಗೆ ಯಾರೂ ಬಿಡುವುದಿಲ್ಲ. Many of them do.

**ಶ್ರೀ ಅಮರನಾಥ ಪಾಟೀಲ್:-** ಮಾನ್ಯ ಸಭಾಪತಿಗಳೆ, ಈ ವಿಧೇಯಕವನ್ನು ಸೋಮವಾರ ಚರ್ಚೆಗೆ ತೆಗೆದುಕೊಂಡರೆ ಒಳ್ಳೆಯದು.

**ಶ್ರೀ ಎಸ್.ವ್ಹಿ.ಸಂಕನೂರ:-** ಮಾನ್ಯ ಸಭಾಪತಿಗಳೆ, ಈ ವಿಧೇಯಕವನ್ನು ಸೋಮವಾರ ತೆಗೆದುಕೊಳ್ಳೋಣ.

**ಡಾ:ಶರಣಪ್ರಕಾಶ್ ಆರ್.ಪಾಟೀಲ್:-** ಆಯಿತು, ಸೋಮವಾರವೇ ತೆಗೆದುಕೊಳ್ಳೋಣ. ಈ ವಿಧೇಯಕಕ್ಕೆ ಸಂಬಂಧಪಟ್ಟಂತೆ ಸೋಮವಾರ ತೆಗೆದುಕೊಂಡರೆ ನನ್ನದೇನೂ ಅಭ್ಯಂತರ ಇಲ್ಲ. ಆದರೆ ಇನ್ನೊಂದು ವಿಧೇಯಕ ತುರ್ತಾಗಿ ಪಾಸ್ ಆಗಬೇಕಿದೆ. ಅದು ಚರ್ಚೆಗೆ ತೆಗೆದುಕೊಳ್ಳಬಹುದು.

**ಶ್ರೀ ಎಸ್.ವ್ಹಿ.ಸಂಕನೂರ:-** ಎಮರ್ಜೆನ್ಸಿ ಇರುವುದನ್ನು ಬಿಟ್ಟು ಮಿಕ್ಕ ವಿಧೇಯಕಗಳನ್ನು ಸೋಮವಾರ ತೆಗೆದುಕೊಳ್ಳೋಣ. ಈಗ ಯಾವುದು ಎಮರ್ಜೆನ್ಸಿ ಇದೆಯೋ ಅದರ ಬಗ್ಗೆ ಚರ್ಚೆ ಮಾಡೋಣ.

**ಸಭಾಪತಿಯವರು:-** ಒಬ್ಬೊಬ್ಬರು ಒಂದೊಂದು ರೀತಿಯಲ್ಲಿ ಮಾತನಾಡಿದರೆ ಆಗುವುದಿಲ್ಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಐವನ್ ಡಿ'ಸೋಜಾ:–** ಈ ವಿಧೇಯಕದಲ್ಲಿ ಏನಿದೆ? ವೈದ್ಯರುಗಳ knowledge update ಆಗಬೇಕು ಎನ್ನುವುದಕ್ಕೆ ಸಂಬಂಧಪಟ್ಟಂತೆ ಒಂದು ತಿದ್ದುಪಡಿ ತಂದಿದ್ದಾರೆ. . . .

**ಶ್ರೀ ಅಮರನಾಥ ಪಾಟೀಲ್:–** "ವೃತ್ತಿನಿರತನಾಗಿರುವುದು ನಿಂತುಹೋಗತಕ್ಕದ್ದು" ಎಂದು ಹೇಳಿದರೆ ಹೇಗೇ? . . . (ಗೊಂದಲ)

**Sri IVAN D'SOUZA:** He can't answer my question. I will submit.

**ಸಭಾಪತಿಯವರು:–** ನೀವೇಕೆ ಮಧ್ಯದಲ್ಲಿ ಮಾತನಾಡುತ್ತೀರಿ. ಅವರು ಮಾತನಾಡಲಿ ಬಿಡಿ. ಈ ರೀತಿ ಚರ್ಚೆ ಆಗುವಾಗ ಪ್ರತಿಯೊಬ್ಬರಿಗೂ ತಮ್ಮ ತಮ್ಮ ಅಭಿಪ್ರಾಯ ಹೇಳಲು ಸ್ವಾತಂತ್ರ್ಯ ಇಲ್ಲದೇ ಹೋದರೆ ನನಗೆ ಸಭೆ ನಡೆಸುವುದಕ್ಕೆ ಆಗುವುದಿಲ್ಲ. ನಿಮ್ಮ ಅಭಿಪ್ರಾಯ ನಿಮ್ಮದು, ಅವರ ಅಭಿಪ್ರಾಯ ಅವರದು. ಕಡೆಗೆ ಸಭೆಯ ಅಭಿಪ್ರಾಯ. ಸರ್ಕಾರ ಉತ್ತರ ಕೊಡುತ್ತದೆ. ಸಭೆ ಎಂದಮೇಲೆ ಅಭಿಪ್ರಾಯ ಭೇದ ಇದ್ದೇ ಇರುತ್ತದೆ. ಒಬ್ಬರು ಹೇಳುವುದನ್ನು ಬೇರೆಯವರು ಇನ್ನೊಂದು ರೀತಿಯಲ್ಲಿ ಹೇಳುತ್ತಿದ್ದರೆ ಅದನ್ನು ಕೇಳುವ ಸಹನೆ ನಮಗಿರಬೇಕು. ಇಲ್ಲದೇ ಇದ್ದರೆ ಸಭೆ ನಡೆಸುವುದಕ್ಕೆ ಆಗುವುದಿಲ್ಲ. ನಿಮಗೂ ಮಾತನಾಡುವುದಕ್ಕೆ ಅವಕಾಶ ಕೊಡುತ್ತೇನೆ. ಯಾರು ಮಾತನಾಡಲು ಕೈ ಎತ್ತುತ್ತಿದ್ದೀರೋ ಅಂಥವರ ಹೆಸರನ್ನು ಬರೆದುಕೊಂಡಿದ್ದೇನೆ, ಮಾತನಾಡುವುದಕ್ಕೆ ಅವಕಾಶ ಕೊಡುತ್ತೇನೆ. ಗೌರವಾನ್ವಿತ ಸದಸ್ಯರು ಮತ್ತು ಸರ್ಕಾರ ಗಮನಿಸಬೇಕು. ಪ್ರತಿ ಬಾರಿ, ಪ್ರತಿ ವಿಧೇಯಕ ಬಂದಾಗಲೂ ಈ ಕುರಿತು ಚರ್ಚೆ ಆಗುತ್ತಲೇ ಇದೆ. ಇದು ಹಲವಾರು ವರ್ಷಗಳಿಂದ ನಡೆದುಕೊಂಡು ಬರುತ್ತಿದೆ. ವಿಧೇಯಕಗಳನ್ನು ಕೊನೆಯ ದಿವಸ ಅಥವಾ ಅಧಿವೇಶನ ಒಂದು ದಿವಸ ಬಾಕಿ ಇರುವಾಗ ತರುತ್ತಾರೆ. ಸಭಾಪತಿ ಅಥವಾ ಸಭಾಧ್ಯಕ್ಷರನ್ನು, ಇದೊಂದು ಸಣ್ಣ ವಿಧೇಯಕ, ಇದನ್ನು ಪಾಸ್ ಮಾಡಿ ಎಂದು ಬಂದು ಕೇಳುತ್ತಾರೆ. ಪ್ರತಿ ಬಾರಿ, ಈ ಸಲ ಏನೋ ಆಯಿತು ಎಂದು ಹೇಳುವುದು ಸರಿಕಾಣುವುದಿಲ್ಲ. ಮುಂದಿನ ಸಲ ಹೀಗೆ ಮಾಡಬೇಡಿ. ಕನಿಷ್ಠ 3 ದಿವಸದ ಮುಂಚೆ ಮಾನ್ಯ ಸದಸ್ಯರುಗಳಿಗೆ ವಿಧೇಯಕಗಳ ಪ್ರತಿ ಕಳುಹಿಸಬೇಕಾದುದು ನಮ್ಮ ಧರ್ಮ. ಚರ್ಚೆಯೇ ಇಲ್ಲದೇ ವಿಧೇಯಕಗಳನ್ನು ಪಾಸ್ ಮಾಡಿದರೆ ಅದು ನಮ್ಮ ಮನಸ್ಸಿಗೂ ಒಪ್ಪಿಗೆ ಆಗುವುದಿಲ್ಲ, ಯಾರ ಮನಸ್ಸಿಗೂ ಒಪ್ಪಿಗೆ ಆಗುವುದಿಲ್ಲ. ಹೀಗಾಗುವುದು ಸರಿಯಲ್ಲ. Business Advisory Committee (B.A.C.) ಯಲ್ಲಿ ಪ್ರತಿ ಬಾರಿ ಇದನ್ನು ಹೇಳಿದ್ದೇವೆ. ಮುಖ್ಯಮಂತ್ರಿಗಳು B.A.C. ಯಲ್ಲಿ ಮಾತು ಕೊಟ್ಟಿದ್ದರು. ಕನಿಷ್ಠ 2 ದಿವಸದ ಮುಂಚೆ ವಿಧೇಯಕಗಳನ್ನು ಮಂಡಿಸಿ ಅದರ ಪ್ರತಿಗಳನ್ನು ಸದಸ್ಯರಿಗೆ ಹಂಚಿಕೆ ಮಾಡುತ್ತೇವೆ ಎಂದು ಹೇಳಿದ್ದರು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆದರೆ ಪದೇ ಪದೇ ಅದೇ ತಪ್ಪು ಆಗುತ್ತಿದೆ. ಇಂದಿನ ಸರ್ಕಾರ ಮಾತ್ರ ಈ ತಪ್ಪು ಮಾಡುತ್ತಿದೆ ಎಂದು ಹೇಳುವುದಿಲ್ಲ. ನಾನು ಹಲವಾರು ಸರ್ಕಾರಗಳನ್ನು ನೋಡಿದ್ದೇನೆ. ಪ್ರತಿ ಸರ್ಕಾರ ಇದೇ ತಪ್ಪು ಮಾಡುತ್ತಿದೆ.

(ಮುಂದು. . . )

(428)24.03.2017 MM-RN 12.00

(ಸಭಾಪತಿಯವರ ಉಪಸ್ಥಿತಿ)

**ಸಭಾಪತಿಯವರು(ಮುಂದು):** ಈ ಸರ್ಕಾರವಾದರೂ ಆ ತಪ್ಪುಗಳನ್ನು ಇನ್ನು ಮುಂದೆ ಮಾಡದಿರುವ ಹಾಗೆ ಗಮನ ಹರಿಸಬೇಕೆಂದು ಹೇಳುತ್ತಾ ಈಗ ನಾವು ಚರ್ಚೆಮಾಡುತ್ತಿರುವ ಬಿಲ್ ಬಗ್ಗೆ ಮಾನ್ಯ ಸಚಿವರು ಇದು ಅಷ್ಟೇನೂ ಅರ್ಜೆಂಟಿಲ್ಲ ಮತ್ತೊಂದು ಬಿಲ್ ಅರ್ಜೆಂಟಿದೆ ಎಂದು ಹೇಳಿದ ಹಿನ್ನೆಲೆಯಲ್ಲಿ;

**ಡಾ.ಶರಣಪ್ರಕಾಶ್ ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೆ, ಇದನ್ನು ಸೋಮವಾರ ತೆಗೆದುಕೊಳ್ಳೋಣ.

**ಸಭಾಪತಿಯವರು:-** ಸರ್ಕಾರ ಒಪ್ಪಿದರೆ ಈ ಬಿಲ್ ಅನ್ನು ಸೋಮವಾರ ತೆಗೆದುಕೊಳ್ಳಬಹುದು.

**ಡಾ.ಶರಣಪ್ರಕಾಶ್ ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೆ, I agreed. ಏಕೆಂದರೆ ಈ ಬಿಲ್ಲು ವಿಧಾನಸಭೆಯಲ್ಲಿ ಚರ್ಚೆಯಾಗಿದೆ. ವಿರೋಧಪಕ್ಷದಲ್ಲಿರುವ ಡಾಕ್ಟರ್ ಆಗಿರುವ ಶಾಸಕರು ಕೂಡ ಇದು ಒಳ್ಳೆಯ ಬಿಲ್ ಎಂದು ಸಹಮತ ನೀಡಿ ಸ್ವಾಗತಿಸಿದ್ದಾರೆ. If they want to discuss, I have no objection for that.

**ಶ್ರೀ ಎಸ್.ಆರ್. ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಇದೇನೂ ಅಂತಹ ಮಹತ್ವದ ಬಿಲ್ ಅಲ್ಲ. ವೈದ್ಯರುಗಳು knowledge update ಮಾಡಿಕೊಳ್ಳಬೇಕು. ರೋಗಿಗಳಿಗೆ ಉತ್ತಮ ಗುಣಮಟ್ಟದ ಚಿಕಿತ್ಸೆ ದೊರೆಯಬೇಕು. ನಮ್ಮ ಹಳ್ಳಿಯ ಕಡೆಗಳಲ್ಲಿ ವಾಡಿಕೆಯಾಗಿ "ಸತ್ತರೆ ದೊಡ್ಡ ಡಾಕ್ಟರ್ ಕೈನಲ್ಲಿ ಸಾಯಬೇಕು" ಎಂದು ಹೇಳುತ್ತಾರೆ. ಅಂದರೆ well qualified and experienced doctors ಬಳಿ ಹೋಗಬೇಕೆಂದು ಹೇಳುತ್ತಾರೆ. ಇಲ್ಲಿ ಪ್ರತಿಯೊಂದು ಕ್ಷೇತ್ರದಲ್ಲಿ ಇವತ್ತು knowledge update ಮಾಡಿಕೊಳ್ಳುವುದು ಬಹಳ ಅವಶ್ಯಕವಾಗಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

Medical Science is a rapid change in science. every minute so many researches will take place. ಅದಕ್ಕೆ ಈಗ ನಾವು ಎಂಬಿಬಿಎಸ್ ಅನ್ನು ಈ ವರ್ಷ ಮಾಡಿ 20 ವರ್ಷ ಕಳೆದ ನಂತರ ಅದನ್ನು ಅಪ್ಲೈ ಮಾಡುವುದಕ್ಕಾಗುವುದಿಲ್ಲ. ಆಪರೇಷನ್ ಮಾಡುವುದರಲ್ಲಿ ಇವತ್ತು ಬಹಳಷ್ಟು ಬದಲಾವಣೆಗಳಾಗಿವೆ. ಚಿಕಿತ್ಸೆಗಳಲ್ಲಿಯೂ ಬಹಳ ಬದಲಾವಣೆಗಳಾಗಿವೆ. Knowledge update ಮಾಡಿಕೊಂಡಂತಹವರು renewal ಮಾಡುವುದಕ್ಕೆ ಯೋಗ್ಯರೇ ಎನ್ನುವಂತಹ ಬಿಲ್ ಇದಾಗಿದೆ. ಇದರಲ್ಲಿ ಕ್ಲಿಷ್ಟವಾದಂತಹ ವಿಚಾರವೇನೂ ಇಲ್ಲ. ತಾವು ಹೇಳಿದ್ದನ್ನು ನಾನು ಒಪ್ಪುತ್ತೇನೆ. ನಾನು ಕೂಡ Business Advisory Committee ಯ ಖಾಯಂ ಸದಸ್ಯನಾಗಿದ್ದೇನೆ. ಯಾವುದೇ ಬಿಲ್ ಅನ್ನು ಮೂರು ದಿವಸಗಳ ಮೊದಲೇ ಕಳುಹಿಸಿಕೊಡಬೇಕೆಂದಿದೆ. ಕೊನೆಯ ಪಕ್ಷ ಎರಡು ದಿವಸಗಳ ಮೊದಲೇ ಬಿಲ್ ಅನ್ನು ಕಳುಹಿಸಿಕೊಡಬೇಕೆಂದು ಬಹಳಷ್ಟು ಮಂತ್ರಿಗಳಿಗೂ ಹೇಳಿದ್ದೇನೆ. ಆದಾಗ್ಯೂ ಕೂಡ ಇವತ್ತು ಈ ಬಿಲ್ ತಕ್ಷಣವೇ ಬಂದಿದೆ. ಈ ಬಿಲ್‌ನಲ್ಲಿ ಅಂತಹ ಕ್ಲಿಷ್ಟವಾದ ವಿಚಾರವಿಲ್ಲ. ಇದು ಕೂಡ ಸಾರ್ವಜನಿಕ ಹಿತಾಸಕ್ತಿ ಬಿಲ್ ಆಗಿದ್ದು ಇದರಲ್ಲಿ ಯಾವುದೇ controversy ವಿಚಾರವಲ್ಲ, ಕ್ಲಿಷ್ಟವಾಗಿಲ್ಲ. Knowledge update ಮಾಡಿಕೊಳ್ಳಬೇಕು ಮತ್ತು renewal ಮಾಡಬೇಕು. ದಯಮಾಡಿ ಈ ಬಿಲ್ ಅನ್ನು ತೆಗೆದುಕೊಳ್ಳುವುದು ಯೋಗ್ಯವೆಂದು ನನ್ನ ಅಭಿಪ್ರಾಯವಾಗಿದೆ.

**ಶ್ರೀ ಐವನ್ ಡಿ'ಸೋಜಾ (ಸರ್ಕಾರದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೆ, ಈ ಬಿಲ್ ನಲ್ಲಿ ಕೇವಲ knowledge update ಮಾಡಬೇಕೆಂದು ಇದೆ. ನನ್ನ ಮನೆಯಲ್ಲಿ ಈ ಬಿಲ್ ಅನ್ನು ತೆಗೆದುಕೊಳ್ಳುವ ಮುಂಚೆಯೇ ನೋಡಿದೆ. ನನ್ನ ಪತ್ನಿಯು ವೈದ್ಯರಾಗಿದ್ದು, ಅವರು Gynaecology HOD, AG Medical College, ಅವರು ನನಗೆ "renewal ಆಗಬೇಕಾದರೆ ಕಾನೂನು ಬರುತ್ತದಂತೆ, ನಾವು CME (Continued Medical Education) ಗಳಿಗೆ ಹೋಗಬೇಕು, ನಾವು ಬೇರೆ ಬೇರೆ conference attend ಮಾಡಬೇಕು ಇಷ್ಟು ಅಂಕಗಳನ್ನು ಕೊಡುತ್ತಾರೆ ಕೊಡದಿದ್ದರೆ ನಮ್ಮ ನೋಂದಣಿಯೂ ರದ್ದಾಗುವುದಂತೆ" ಅಂದರೆ ಅಪ್‌ಡೇಟ್ ಮಾಡುವ ಅವಶ್ಯಕತೆ ಇದೆ ಎಂದು ಹೇಳಿದರು. ಅದಕ್ಕೆ ನಾನು ಹೇಳಿದ್ದೇನೆಂದರೆ, ಒಳ್ಳೆಯದೇ ಆಯಿತು. ಈ ಕಾನೂನನ್ನು ತಂದಿರುವುದರಿಂದ you will be updated to give better treatment ಎಂದು ಹೇಳಿದೆನು. ಈ ಚಿಂತನೆಯೊಳಗಿರುವ ಒಂದೇ ಒಂದು ಅಂಶವೆಂದರೆ,

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೇವಲ ವೈದ್ಯರುಗಳ knowledge update ಮಾಡುವುದಾಗಿದೆ. Business Advisory Committee ಗೆ ನಾನು ಕೂಡ ಹೋಗಿದ್ದೆನು. ಅಲ್ಲಿ ಮೂರು ದಿವಸಗಳ ಒಳಗೆ ಬಿಲ್ಲನ್ನು ಕೊಡಬೇಕು ಎಂದು ಇದೆ. ಇದಕ್ಕೆಲ್ಲಾ ನನ್ನ ವಿರೋಧವಿಲ್ಲ. ಕೊಡಬೇಕೆಂದು ಹೇಳುತ್ತೇನೆ. ಆದರೆ ಇವತ್ತು ಒಟ್ಟಿಗೆ ಐದು ಬಿಲ್ಲುಗಳು ಬಂದಿರುವ ಕಾರಣದಿಂದ ಎಲ್ಲಾ proceedings ಮುಂದಕ್ಕೆ ಹಾಕಿ ಈ ಬಿಲ್ಲನ್ನು ತೆಗೆದುಕೊಂಡಿರುವುದು ...

**ಶ್ರೀ ಬಸವರಾಜ ರಾಯರೆಡ್ಡಿ (ಉನ್ನತ ಶಿಕ್ಷಣ ಸಚಿವರು):–** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು ಒಪ್ಪುವುದಾದರೆ ಸೋಮವಾರ ಈ ಬಿಲ್ಲನ್ನು ಚರ್ಚೆಗೆ ತೆಗೆದುಕೊಳ್ಳಿ. ಮತ್ತೊಂದು ಬಿಲ್ಲು ಬಹಳ ಅರ್ಜೆಂಟಿದೆ.

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೆ, ಸೋಮವಾರ ತೆಗೆದುಕೊಳ್ಳುವುದು ಪ್ರಶ್ನೆಯಲ್ಲ. ಈ ಬಿಲ್ಲಿನಲ್ಲಿ ಯಾವ ಶಾಸಕರು ಓದಿದರೂ ಕೂಡ ನಮಗೆ ಸಿಗುವುದೇನೆಂದರೆ ಬೋರ್ಡ್‌ನಲ್ಲಿ ಇದಕ್ಕೊಂದು representation ಕೊಡಬೇಕು. ಅದು ಈಗಾಗಲೇ adequate representation, division-wise ಕೊಡಿ. ಇನ್ನುಳಿದಿರುವುದೇನೆಂದರೆ, ವೈದ್ಯರುಗಳಿಗೆ knowledge update ಮಾಡುವುದು ಬೇಡ ಎಂದು ಹೇಳಿದರೆ, ಬಹುಶಃ ನಮಗೆ ನಾವೇ ಗುಂಡಿ ತೋಡಿಕೊಂಡ ಹಾಗೆ ಆಗುತ್ತದೆ. ಮಾನ್ಯ ಹಿರಿಯ ಸದಸ್ಯರೊಬ್ಬರು ಹೇಳಿದರು rapid changes ಆಗುತ್ತಿದೆ. every day there is changes in Medical Science. ಬದಲಾವಣೆಗಳಾಗುತ್ತಿವೆ. ಹೊಸ ಹೊಸ ಸಂಶೋಧನೆಗಳು ಬರುತ್ತಿವೆ. ಆ ಸಂಶೋಧನೆಗಳಿಗೆ ಒಬ್ಬ ಸೂಕ್ತ ವೈದ್ಯರನ್ನು ನೇಮಿಸುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ ಎಂದು ಹೇಳಿದರು. ಹಾಗಾಗಿ ತಮ್ಮ ಮುಂದೆ ಅರಿಕೆ ಮಾಡಿಕೊಳ್ಳುವುದೇನೆಂದರೆ, ನಾನು ಈ ಬಿಲ್ಲನ್ನು ಸ್ವಾಗತಿಸುತ್ತೇನೆ. ಈ ಬಿಲ್ಲಿನಲ್ಲಿ ಏನು ಅಪ್‌ಡೇಟ್ ಮಾಡಬೇಕು ಎಂದು ಹೇಳಿದ್ದೀರಿ ಅದನ್ನು ವೈದ್ಯರು ತರಬೇಕು, ಈ ಬಿಲ್ಲನ್ನು ತರುವುದು ಒಳ್ಳೆಯದೇ ಆಗಿದೆ. ಸಮಾಜದ ಹಿತದೃಷ್ಟಿಯಿಂದ ಎಷ್ಟೋ ಜನ ವೈದ್ಯರುಗಳು ತೀರಿ ಹೋದರು. ಅವರ ಮಗ ಬಂದು ಕ್ಲಿನಿಕ್‌ನಲ್ಲಿ ಅಭ್ಯಾಸ ಮಾಡುತ್ತಾನೆ. ಅವನ ಬಳಿ ನೋಂದಣಾ ಪತ್ರ ಇರುವುದಿಲ್ಲ. ಇದು ನನಗೆ ಗೊತ್ತಿದೆ ಹಾಗೂ ಇದನ್ನು ನಾನು ಅನುಭವಿಸಿದ್ದೇನೆ. ನಕಲಿ ವೈದ್ಯರುಗಳ ಬಗ್ಗೆ ಅಥವಾ ಬೇರೆ ಬೇರೆ ವೈದ್ಯರುಗಳ ಬಗ್ಗೆ ಈ ಹಿಂದೆ ಕಾನೂನನ್ನು ತರುವುದಕ್ಕೆ ಹೋದಾಗ ಈ ಸದನದಲ್ಲಿ ಸುಮಾರು ಗಂಟೆಗಳ ಕಾಲ ಚರ್ಚೆಯಾಗಿತ್ತು. ನಕಲಿ ವೈದ್ಯರುಗಳು ಬರುತ್ತಾರೆ, ಅವರಿಗೆ ಅಷ್ಟು ಪಾಂಡಿತ್ಯ ಇರುವುದಿಲ್ಲ, ಅವರ ನೋಂದಣಿಯ ಬಗ್ಗೆ ಜಾಗ್ರತೆ ವಹಿಸುವುದಿಲ್ಲ ಎಂದೆಲ್ಲಾ ಚರ್ಚೆಯಾಗಿತ್ತು. ಈ ದೃಷ್ಟಿಯಲ್ಲಿ ಕೂಡ

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವೈದ್ಯಕೀಯ ಶಿಕ್ಷಣ ಸಚಿವರು ತಂದಿರುವ ಈ ಬಿಲ್ಲು ಸಮಯೋಚಿತವಾದುದಾಗಿದ್ದು ಆದಷ್ಟು ಬೇಗ ಈ ಬಿಲ್ ಅನ್ನು ಜಾರಿಗೆ ತರಬೇಕೆಂದು ಒತ್ತಾಯಿಸುತ್ತಾ ಈ ಬಿಲ್ ಅನ್ನು ಸ್ವಾಗತಿಸುತ್ತೇನೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ನಾನು ಪ್ರಾರಂಭದಲ್ಲಿಯೇ ಉಲ್ಲೇಖಿಸಿದಂತೆ knowledge update ಬಗ್ಗೆ ಗೊಂದಲವಿಲ್ಲ. ಅದನ್ನು ಖಂಡಿತವಾಗಿಯು ಸ್ವಾಗತಿಸುತ್ತೇನೆ. ಆದರೆ ಪ್ರಶ್ನೆಯೇನೆಂದರೆ technically and legally whether it is sustainable or not? ಮೊದಲನೆಯದಾಗಿ, ವಿಶ್ವವಿದ್ಯಾಲಯ ಕೊಟ್ಟಿರುವ ಪದವಿ ಇದಾಗಿದೆ. ಅಂದರೆ ರಾಜೀವ್‌ಗಾಂಧಿ ವಿಶ್ವವಿದ್ಯಾನಿಲಯ ಆಗಿರಬಹುದು ಮತ್ಯಾವುದೋ ಆಗಿರಬಹುದು. ಆ ಪದವಿಯ ಪ್ರಕಾರ ಅವರು ಅರ್ಹ ವೈದ್ಯರಾಗಿರುತ್ತಾರೆ. ಯಾರೋ ಒಬ್ಬ ವೈದ್ಯರು ಗ್ರಾಮಾಂತರಗಳಿಗೆ ಹೋಗುವುದಿಲ್ಲ ಎಂದು ಹೇಳುತ್ತಾರೆ. ಆದರೆ ಎಂಬಿಬಿಎಸ್ ಮಾಡಿದ ಒಬ್ಬರು ಗ್ರಾಮಾಂತರಗಳಲ್ಲಿ 15–20 ವರ್ಷಗಳಿಂದ ಪ್ರಾಕ್ಟೀಸ್ ಮಾಡುತ್ತಿದ್ದಾರೆ. ಅವರಿಗೆ permanent registration ಇದೆ. ಇವತ್ತು ಅವನು ಐದು ವರ್ಷದಲ್ಲಿ ನೂರು ಗಂಟೆ ತರಬೇತಿ ಪಡೆದುಕೊಂಡಿಲ್ಲ ಎಂಬ ಕಾರಣಕ್ಕಾಗಿ ಅವನ ನೋಂದಣಿಯನ್ನು ಏನು ಮಾಡುವುದು? ತಮ್ಮ Personal example quote ಮಾಡುತ್ತೇನೆ ಎಂದು ತಪ್ಪು ತಿಳಿಯಬಾರದು. ಮಾನ್ಯ ಶರಣಪ್ರಕಾಶ್ ಪಾಟೀಲ್‌ರವರು ಕಳೆದ ಮೂರ್ನಾಲ್ಕು ವರ್ಷಗಳಿಂದ ಸಚಿವರಾಗಿದ್ದಾರೆ. ಇವರು CME ಗೆ ಹೋಗಿದ್ದಾರೆಯೇ? ಅಲ್ಲಿಗೆ ಹೋಗುವುದಕ್ಕೆ ಇವರಿಗೆ ಸಾಧ್ಯವಾಗಿದೆಯೇ? ಇವರು ಅಭ್ಯಾಸ ಮಾಡಿದ್ದಾರೆಯೇ? ಐದು ವರ್ಷ ಆದರೆ ಇವರ degree ರದ್ದಾಗುತ್ತದೆ. ಇದನ್ನು ತಾವು ಹೇಗೆ ನಿಭಾಯಿಸುತ್ತೀರಿ?

**ಶ್ರೀ ಐವನ್ ಡಿ'ಸೋಜಾ:–** ಪದವಿ ರದ್ದಾಗುವುದಿಲ್ಲ. ತಪ್ಪು ಸಂದೇಶವನ್ನು ಕೊಡಬೇಡಿ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:–** ಮಾನ್ಯ ಐವನ್ ಡಿ'ಸೋಜಾರವರೆ, ನಾನು ಹೇಳುವುದನ್ನು ಸ್ವಲ್ಪ ಕೇಳಿ.

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರಿಗೆ ಉತ್ತರ ಕೊಡುವ ಸಾಮರ್ಥ್ಯ ಇದೆ.

(ಗೊಂದಲ)

**ಸಭಾಪತಿಯವರು:–** ಮಾನ್ಯ ಸಚಿವರು ಹೇಳುತ್ತಾರೆ. ಅವರೇ ಹೇಳಲಿ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಎಸ್. ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಮಂತ್ರಿಯವರಿಗೆ ಶಕ್ತಿ ಇದೆ, ಉತ್ತರ ಕೊಡುವ ಯೋಗ್ಯತೆಯೂ ಇದೆ. ಮೂರು ಮೂರು ಜನರು ಮಂತ್ರಿಗಳಾದರೆ ನಮ್ಮ ಗತಿ ಏನು? ಅವರೇ ಉತ್ತರ ಕೊಡಲಿ ಬಿಡಿ.

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೆ, ಇದೊಂದು ಚರ್ಚೆಯಾಗಿದೆ.

**ಶ್ರೀ ಕೆ.ಎಸ್. ಈಶ್ವರಪ್ಪ:-** ಮಾನ್ಯ ಐವನ್ ಡಿ'ಸೋಜಾರವರೆ, ಅವರು ಉತ್ತರ ಕೊಡುತ್ತಾರೆ ಎಂದು ಹೇಳಿದೆ.

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಈಶ್ವರಪ್ಪರವರೆ, ತಾವು ಹೇಳಿದ್ದನ್ನು ಸುಮ್ಮನೆ ಕುಳಿತುಕೊಂಡು ಕೇಳುವುದಕ್ಕಾಗುವುದಿಲ್ಲ. ನಮ್ಮ ಮನಸ್ಸಿನಲ್ಲಿ ಇದು ತಪ್ಪು ಎಂದು ಅನಿಸಿದರೆ ...

(ಗೊಂದಲ)

**ಸಭಾಪತಿಯವರು:-** ಆಯಿತು ಬಿಡಿ ಅವರು ಪ್ರಶ್ನೆ ಕೇಳಿದ್ದಾರೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** ಮಾನ್ಯ ಸಭಾಪತಿಯವರೆ, ಇದನ್ನು ನಾನು ಮುಗಿಸಿಬಿಡುತ್ತೇನೆ.

**ಸಭಾಪತಿಯವರು:-** ಈಗ ಅವರು ಇನ್ನೂ ಏನನ್ನು ಕೇಳಬೇಕೋ ಅದನ್ನು ಕೇಳುತ್ತಾರೆ. ಮತ್ತೆ ಅವರು ಕೇಳುವ ಹಾಗಿಲ್ಲ ಅವರ ಪ್ರಶ್ನೆಗೆ ಉತ್ತರ ಕೊಡಬೇಕು.

**ಶ್ರೀ ಬಸವರಾಜ ರಾಯರೆಡ್ಡಿ:-** ಮಾನ್ಯ ಸಭಾಪತಿಯವರೆ, ಈ ಬಿಲ್ಲನ್ನು ಸೋಮವಾರ ಮಾಡುವುದಕ್ಕೆ ಇಬ್ಬರು ಸಚಿವರೂ ಹೇಳುತ್ತಿದ್ದೇವೆ.

**ಸಭಾಪತಿಯವರು:-** ಮಾನ್ಯ ಸಚಿವರೆ, ನಿಮ್ಮ ಬಿಲ್ಲನ್ನು ಈ ದಿನ ಎರಡು ಗಂಟೆಯೊಳಗೆ ಪಾಸ್ ಮಾಡಿಸಿಕೊಡುತ್ತೇವೆ. ಡೋಂಟ್ ವರಿ, ಇದು ಸ್ವಲ್ಪ ಚರ್ಚೆಯಾಗಲಿ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** ಮಾನ್ಯ ಸಭಾಪತಿಯವರೆ, ಇಡೀ ದೇಶದಲ್ಲಿ ಬೇರೆ ಬೇರೆ ರಾಜ್ಯಗಳಲ್ಲಿ ಏನು ಕಾನೂನಿದೆ? ಅಕಸ್ಮಾತ್ತಾಗಿ ನಮ್ಮಲ್ಲಿ ಈ ಕಾನೂನನ್ನು ಮಾಡಿದರೆ ಈಗಲೇ ನಮಗೆ ವೈದ್ಯರುಗಳು ಸಿಗುತ್ತಿಲ್ಲ. ಇಲ್ಲಿ ಐದು ವರ್ಷಕ್ಕೊಂದು ಸಲ ಖಾಯಂ ನೋಂದಣಿಯಾಗುವುದಿಲ್ಲ ಎಂಬ ಕಾರಣಕ್ಕಾಗಿ ನಾಳೆ ನಮ್ಮ ರಾಜ್ಯದವರು ಬೇರೆ ರಾಜ್ಯಗಳಿಗೆ ವಲಸೆ ಹೋದರೆ ಏನು ಮಾಡುವುದು? ಅಲ್ಲಿ ಯಾವ ಕಾನೂನಿದೆ ಅದನ್ನು ನೋಡಿದ್ದೀರಾ? ನನ್ನಲ್ಲಿ ಮೂರು ಪ್ರಶ್ನೆಗಳಿವೆ. ಮೊದಲನೆಯದಾಗಿ, ಈಗ ಯಾರು ಖಾಯಂ ನೋಂದಣಿ ಮಾಡಿಕೊಂಡಿದ್ದಾರೆ ಅವರಿಗೆ ಇದು ಅನ್ವಯವಾಗುವುದೇ?

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅವರೇನಾದರೂ ಕೋರ್ಟ್‌ಗೆ ಹೋಗಿ ಸ್ಟೇ ತೆಗೆದುಕೊಂಡು ಬಂದರೆ, ತಮಗೆ ಈಗಾಗಲೇ ಖಾಯಂ ಎಂದು ಸರ್ಕಾರ ಕೊಟ್ಟಾಗಿದೆ ಮತ್ತೆ where is the question of renewal ಎಂದು ಕೇಳಿದರೆ? ಎರಡನೆಯದಾಗಿ, ಎಂಬಿಬಿಎಸ್ ಮಾಡಿ ಗ್ರಾಮಾಂತರ ಪ್ರದೇಶಗಳಲ್ಲಿ 20–25 ವರ್ಷಗಳಿಂದ ಯಾರು ಅಭ್ಯಾಸ ಮಾಡುತ್ತಿದ್ದಾರೆ ಅವರು ಒಳ್ಳೆಯ ಸೇವೆಯನ್ನೇ ಕೊಟ್ಟಿದ್ದಾರೆ. ಈಗ ಅವರಿಗೆ ನೀವು CME ಗೆ ಹೋಗಿ, workshopಗೆ ಹೋಗಿ, ಸೆಮಿನಾರ್‌ಗೆ ಹೋಗಿ, ಕಾಲೇಜುಗಳಿಗೆ ಹೋಗಿ ಎಂದು ಹೇಳಿದರೆ ಅವರು ಪ್ರಾಕ್ಟೀಸ್ ಅನ್ನು ಬಿಟ್ಟು ಹೋದರೆ ಕ್ಲಿನಿಕ್‌ನ ಗತಿ ಏನು? ಅಲ್ಲಿ ಅವರು ಏನನ್ನು ಮಾಡಬೇಕು? ಅವರು ಗ್ರಾಮಾಂತರದಲ್ಲಿ ಸರಿಯೊ ತಪ್ಪೊ ಏನೋ ಒಂದು ಸೇವೆಯನ್ನು ಸಲ್ಲಿಸುತ್ತಿದ್ದಾರೆ. ಯಾರು quacks ಆಗಿದ್ದಾರೆ, ಯಾರು ಕಾನೂನುಬಾಹಿರವಾಗಿ ಪ್ರಾಕ್ಟೀಸ್ ಮಾಡುತ್ತಿದ್ದಾರೆ, ಯಾರ ಬಳಿ ಸರ್ಟಿಫಿಕೇಟ್ಸ್ ಇಲ್ಲ, ಯಾರು ಬೇರೆ ಬೇರೆ ರೀತಿಯಲ್ಲಿ ಅವ್ಯವಹಾರ ಮಾಡುತ್ತಿದ್ದಾರೆ ಅವರನ್ನು ನಿಯಂತ್ರಿಸುವುದಕ್ಕೆ ತೆಗೆದುಕೊಂಡು ಬನ್ನಿ. ಮೂರನೆಯದಾಗಿ, updation ಮಾಡುವುದಕ್ಕೆ registration renewal ಒಂದೇ ವಿಧಾನವೊ ಅಥವಾ ಬೇರೆ ಯಾವರೀತಿಯಾದರೂ ಅದನ್ನು ಮಾಡುವುದಕ್ಕೆ ಸಾಧ್ಯವಿದೆಯೇ? ನಾನು ತಿಳಿದುಕೊಂಡ ಹಾಗೆ ಅವರೆಲ್ಲಾ Indian Medical Associationನ ಸದಸ್ಯರಾಗಿದ್ದಾರೆ. Indian Medical Association ಎಲ್ಲಾ ವೈದ್ಯರುಗಳಿಗೆ ತರಬೇತಿಯನ್ನು ನೀಡುತ್ತದೆ. ಅದನ್ನು ತಾವು ಯಾವರೀತಿ ನಿಯಂತ್ರಣ ಮಾಡುತ್ತೀರಿ? ಇದಾವುದನ್ನೂ ಮಾಡದೆ ಐದು ವರ್ಷದ ಅವಧಿಯಲ್ಲಿ ಪ್ರತಿಯೊಬ್ಬ ವೈದ್ಯರು 100 ಗಂಟೆಗಳ ಕಾಲ ತರಬೇತಿ ಮಾಡಬೇಕೆಂದರೆ ಆ ತರಬೇತಿಯನ್ನು ವ್ಯವಸ್ಥೆ ಮಾಡುವವರು ಯಾರು? ಇದಕ್ಕೆ ಸೂಕ್ತವಾದ ವ್ಯವಸ್ಥೆಗಳನ್ನು ಮಾಡಿಕೊಳ್ಳದೇ ಹೋದರೆ ಈಗಿರುವ ವ್ಯವಸ್ಥೆಗೆ ಗೊಂದಲವಾಗುವ ವಾತಾವರಣ ನಿರ್ಮಾಣವಾಗುತ್ತದೆ, ಅವರು ಕೋರ್ಟ್‌ಗೆ ಹೋಗಬಹುದು, ಸಮಸ್ಯೆಗಳಾಗಬಹುದು ಎಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

**ಸಭಾಪತಿಯವರು:–** ಯಾರಾದರು ಒಬ್ಬರು ಮಾತನಾಡಿ.

**ಶ್ರೀ ಎಸ್.ವ್ಹಿ. ಸಂಕನೂರ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಈಗ ಈ ವಿಷಯವು ಚರ್ಚೆಯಾಗಬೇಕು. ಮೆಡಿಕಲ್ ಅಸೋಸಿಯೇಷನ್ ಜೊತೆಗೂ ಚರ್ಚೆಯಾಗಬೇಕಾಗಿದೆ. ಚುನಾಯಿತ ಪ್ರತಿನಿಧಿಗಳು ಅವಸರ ಮಾಡಿ ಈ ಬಿಲ್ ಅನ್ನು ಪಾಸ್ ಮಾಡುವ ಅವಶ್ಯಕತೆಯಿಲ್ಲ. ಈ ಬಿಲ್ ಅನ್ನು ಸೋಮವಾರಕ್ಕೆ ಮುಂದಕ್ಕೆ ಹಾಕಿ. ಈಗ ಒಂದು ಪ್ರಶ್ನೆ ಮಾಡುತ್ತೇನೆ. ವೈದ್ಯರುಗಳ knowledge updation ಮಾಡುವುದರ ಬಗ್ಗೆ ನಮ್ಮ ತಕರಾರಿಲ್ಲ. ಸಾರ್ವಜನಿಕ ಹಿತದೃಷ್ಟಿಯಿಂದ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಅದು ಆಗಬೇಕು. ನೀವೆಲ್ಲ updation ಮಾಡಿಕೊಳ್ಳದಿದ್ದರೆ ಜನರೇ ಅವರ ಬಳಿಗೆ ಹೋಗುವುದಿಲ್ಲ ಇದು ಮೊದಲನೆಯದು. ಎರಡನೆಯದಾಗಿ 80 ಕಡೆಗಳಲ್ಲಿ CME ತರಬೇತಿಗೆ ಹೋಗಿ ಸರ್ಟಿಫಿಕೇಟ್ ಅನ್ನು ತೆಗೆದುಕೊಂಡು ಬನ್ನಿ ಎಂದರೆ ಅದು ಸಾಧ್ಯವಾಗುವುದೇ? ಅದಕ್ಕೊಂದು age limit ಹಾಕಿದ್ದೀರಾ? ಆದ್ದರಿಂದ ಈ ಬಿಲ್‌ಗೆ ಅವಸರವಿಲ್ಲ. ದಯವಿಟ್ಟು ಸಾರ್ವಜನಿಕ ಅಭಿಪ್ರಾಯವನ್ನು ಸಂಗ್ರಹಿಸಬೇಕಾಗುತ್ತದೆ. ಮೆಡಿಕಲ್ ಅಸೋಸಿಯೇಷನ್ ಸದಸ್ಯರ ಜೊತೆಗೆ ಚರ್ಚೆ ಮಾಡಬೇಕಾಗುತ್ತದೆ ಅದಕ್ಕೆ ಅವಕಾಶ ಕೊಡಿ. ಆದ್ದರಿಂದ ಸೋಮವಾರ ಈ ಬಿಲ್ ಅನ್ನು ಚರ್ಚೆಗೆ ತೆಗೆದುಕೊಳ್ಳಿ ಎಂದು ವಿನಂತಿಸಿಕೊಳ್ಳುತ್ತೇನೆ.

(ಮುಂವ...

429/24-3-2017/12.10/ಡಿಎಸ್-ಆರ್‌ಎನ್ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಅಮರನಾಥ ಪಾಟೀಲ್(ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಒಂದೇ ಮಾತಿನಲ್ಲಿ ಹೇಳಬೇಕೆಂದರೆ, ನಾಳೆಯಿಂದಲೇ ಡಾಕ್ಟರ್ ಎಂಬುದನ್ನು ತೆಗೆದು ಹಾಕಬೇಕಾಗುತ್ತದೆ. ಅಂತಹ ಸಂದರ್ಭದಲ್ಲಿ ಸಚಿವರು ಕೇವಲ ಶರಣ ಪ್ರಕಾಶ್ ಪಾಟೀಲ್ ಆಗಿ ಉಳಿಯುತ್ತಾರೆ. ಹಲವಾರು ನರ್ಸಿಂಗ್ ಹೋಮ್‌ಗಳಿವೆ, ಈ ರೀತಿಯ ಸಂದರ್ಭದಲ್ಲಿ ವೃತ್ತಿ ನಿರತರ ಹೆಸರನ್ನು ತೆಗೆದು ಹಾಕಿ ಎಂದು ನಮಗೆ ಮತ ನೀಡಿದ ವೈದ್ಯ ಸಹೋದ್ಯೋಗಿಗಳು ಬಹಳಷ್ಟು ಜನ ಹೇಳುತ್ತಿದ್ದಾರೆ. ಹೀಗಾಗಿ ಸೋಮವಾರ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಿ ಎಂದು ಕೇಳಿಕೊಳ್ಳುತ್ತಿದ್ದೇನೆ.

**ಡಾ:ಶರಣಪ್ರಕಾಶ್ ಪಾಟೀಲ್(ವೈದ್ಯಕೀಯ ಶಿಕ್ಷಣ ಸಚಿವರು):-** ಮಾನ್ಯ ಸಭಾಪತಿಯವರೆ, ಇದನ್ನು ಬೇಕಿದ್ದರೆ ಸೋಮವಾರ ಚರ್ಚೆಗೆ ತೆಗೆದುಕೊಳ್ಳೋಣ. ನನ್ನದೇನೂ ಅಭ್ಯಂತರ ಇಲ್ಲ. ಆದರೆ, ಮಾನ್ಯ ಸದಸ್ಯರುಗಳಿಗೆ confusion ಇರಬಾರದೆಂದು ನಾನು ಸಣ್ಣ ಸ್ಪಷ್ಟೀಕರಣವನ್ನು ಕೊಡುತ್ತೇನೆ. ಸೆಕ್ಷನ್ 2 ರಲ್ಲಿ ಮೊದಲನೆ proviso ಅನ್ನು ನೋಡಿ. *"Provided that participation in such continued Medical Educational Programme shall not be necessary in respect of such class of Medical Practitioners as may be prescribed."* What is the intention of this paragraph? The intention of this proviso is to examine certain kind of people. It is in all the States. ರೂಲ್ಸ್‌ನಲ್ಲಿ ಬರುತ್ತದೆ. Persons who have crossed

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

sixty-five years of age they are exempted from this. All doctors who are going for administrative work like that becoming Vice Chancellors, they are becoming DME, becoming MLA and they becoming MPs, Ministers. So there is an exemption clause. In the interest of the doctors who are deputed for other kind of work. There is a proviso. You need not to worry. ತೆಗೆದು ಹಾಕಿದರೆ ಅವರು ವೈದ್ಯರು ಎಂದಲ್ಲ. They are not entitled to practice. Nobody can't withdraw their degree. We are not withdrawing their degree. We are only restricting them from practicing, because this is required. ಈ ಪ್ರಾವಿಜನ್‌ನ್ನು ನನಗೋಸ್ಕರ ಮಾಡಿಕೊಂಡಿರುವುದಲ್ಲ. It is there in all the States. Credit hours is not just attending. ಕ್ಯಾಪ್ಟನ್ ಗಣೇಶ್ ಕಾರ್ಣಿಕ್‌ರವರು express ಮಾಡಿದರು. ಗ್ರಾಮೀಣ ಪ್ರದೇಶದಲ್ಲಿ ಕೆಲಸ ಮಾಡತಕ್ಕಂಥ ವೈದ್ಯರು ಐದು ವರ್ಷದಲ್ಲಿ should he not attend any conferences, CMEs, seminars, workshops to update his knowledge. Of course, he can. Because, it is only thirty hours credit point in five years. This is not big. It will not hinder his work. ಅವರು ಕೂಡ ಬೇರೆಯವರ ಜೊತೆಯಲ್ಲಿ interact ಮಾಡುವುದಕ್ಕೆ latest ಏನಾಗುತ್ತಿದೆ ಎನ್ನುವುದನ್ನು ತಿಳಿಯುವುದಕ್ಕೆ, ಇದರಿಂದ ವೈದ್ಯರುಗಳಿಗೆ ಏನು ತಾಪತ್ರಯ ಇಲ್ಲ. ಸುಮ್ಮನೆ ಯಾರೋ ಕೆಲವೊಬ್ಬರು ಪ್ರತಿಷ್ಠೆ ಮಾಡಿಕೊಂಡು ಇದನ್ನು ವಿರೋಧ ಮಾಡಿದರೆ we cannot listen to them. ಇದನ್ನು ಜನರ ಆರೋಗ್ಯದ ಹಿತದೃಷ್ಟಿಯಿಂದ ತಂದಿರುವಂಥದ್ದು. I cannot stand here in the interest of protecting my fraternity. I am here to protect the interest of my people. You should understand this. ಕಟ್ಟಕಡೆಯವನಿಗೂ ಉತ್ತಮ ಆರೋಗ್ಯ ಸೌಲಭ್ಯ ದೊರೆಯಬೇಕೆಂಬುದೇ ನಮ್ಮ ಉದ್ದೇಶ. ಎಲ್ಲರಿಗೂ ಗೊತ್ತಿರುತ್ತದೆಂದು ಮಾನ್ಯ ಸಂಕನೂರರವರು ಹೇಳಿದರು. ಎಲ್ಲರಿಗೂ ಗೊತ್ತಿರುವುದಿಲ್ಲ. ಗ್ರಾಮೀಣ ಪ್ರದೇಶದಲ್ಲಿರುವಂತಹ ರೈತರು ಯಾವ ವೈದ್ಯರು ಸಿಗುತ್ತಾರೆ ಅವರ ಹತ್ತಿರ ಹೋಗುತ್ತಾರೆ. ಯಾರ ಹತ್ತಿರ ಹಣವಿದೆ, ಎಲ್ಲಾ ರೀತಿಯಿಂದಲೂ ಶಕ್ತಿಶಾಲಿಯಾಗಿದ್ದಾರೆ ಅವರು ಯಾರು ಉತ್ತಮ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವೈದ್ಯರು ಇದ್ದಾರೆಂದು ಹುಡುಕುತ್ತಾರೆ. ಪಾಪ, ಹಳ್ಳಿಯಲ್ಲಿ, ತಾಲ್ಲೂಕಿನಲ್ಲಿರತಕ್ಕಂಥವರು ಯಾವ ವೈದ್ಯರು ಸಿಗುತ್ತಾರೆ ಅವರ ಹತ್ತಿರ ಹೋಗುತ್ತಾರೆ. It is our responsibility. ಮಾನ್ಯ ಸದಸ್ಯರು ಒಂದು ಕಡೆಯಿಂದ ನೋಡುತ್ತಿದ್ದಾರೆ. I appreciate your support to the doctors. ಕೆಲವೊಂದು ವೈದ್ಯರು ಇದಕ್ಕೆ ವಿರೋಧ ಮಾಡಬಹುದು. But most of them they do agree and welcome this. ಯಾರದೋ ಒಬ್ಬರ interest protect ಮಾಡುವುದನ್ನು ನೋಡುವುದಕ್ಕಾಗುವುದಿಲ್ಲ. I understand your opinions from both the sides. ಬೇಕಿದ್ದರೆ ಇದರ ಬಗ್ಗೆ ಸೋಮವಾರ ಚರ್ಚೆ ಮಾಡೋಣ.

**ಸಭಾಪತಿಯವರು:-** ನಾವು ಅದನ್ನು prestige point ಆಗಿ ತೆಗೆದುಕೊಳ್ಳುವುದು ಬೇಡ. ಈಗ ಸಾಕಷ್ಟು ವಿಷಯ ಚರ್ಚೆಯಾಗಿದೆ. ಇನ್ನು ಕೆಲವು ಸದಸ್ಯರು ಕೈ ಎತ್ತಿದವರಿಗೆ ನಾನು ಅವಕಾಶ ಕೊಟ್ಟಿಲ್ಲ. ಅವರ ಅಭಿಪ್ರಾಯವನ್ನು ಕೇಳೋಣ. ಅಂತಿಮವಾಗಿ ಸಚಿವರ ಉತ್ತರ ಸಮಾಧಾನ ಆಗಿಲ್ಲ ಎಂದು ಪ್ರಶ್ನೆ ಬಂದಾಗ ಸೋಮವಾರ ಚರ್ಚೆ ಮಾಡುವುದಕ್ಕೆ ಯೋಚನೆ ಮಾಡೋಣ. ಈ ಬಿಲ್‌ಗಳನ್ನು ಚರ್ಚೆ ಮಾಡುವುದಕ್ಕಾಗಿಯೇ ನಾನು ನಿಮ್ಮ ಒಪ್ಪಿಗೆ ತೆಗೆದುಕೊಂಡು ಪ್ರಶ್ನೋತ್ತರ ಅವಧಿಯನ್ನು ಮುಗಿಸಿಬಿಟ್ಟಿದ್ದೇನೆ. ಹಾಗಾಗಿ ಗೌರವಾನ್ವಿತ ಸದಸ್ಯರು ಕೈ ಎತ್ತಿದವರ ಹೆಸರನ್ನು ನಾನು ಬರೆದುಕೊಂಡಿದ್ದೇನೆ. ಅವರಿಗೆ ಅವಕಾಶವೇ ಕೊಡದೆ ನಾನು ಚರ್ಚೆಯನ್ನು ಮುಂದಕ್ಕೆ ಹಾಕುವುದು ಸರಿಯಲ್ಲ. ಈ ಕಡೆ ಮೂರ್‍ನಾಲ್ಕು ಸದಸ್ಯರ ಅಭಿಪ್ರಾಯವನ್ನು ಕೇಳಿ ಆಯಿತು. ಮಾನ್ಯ ಶ್ರೀಕಂಠೇಗೌಡರು, ಮಾನ್ಯ ಯತ್ನಾಳ್‌ರವರು ಮಾತನಾಡಬೇಕೆಂದು ಕೈ ಎತ್ತಿದ್ದಾರೆ. ಆ ಕಡೆ ಮಾನ್ಯ ಉಗ್ರಪ್ಪನವರು, ಮಾನ್ಯ ಶರಣಪ್ಪ ಮಟ್ಟೂರುರವರು ಕೈ ಎತ್ತಿದ್ದಾರೆ. ಅವರ ಅಭಿಪ್ರಾಯವನ್ನು ಕೇಳೋಣ. ಅಷ್ಟರ ಮೇಲೂ ತೀರ್ಮಾನವಾಗದಿದ್ದರೆ ನನ್ನದೇನೂ ಅಭ್ಯಂತರವಿಲ್ಲ. ಮಾನ್ಯ ಶ್ರೀಕಂಠೇಗೌಡರೆ, ಈ ಬಿಲ್ ಬಗ್ಗೆ ತಮ್ಮ ಅಭಿಪ್ರಾಯವನ್ನು ಹೇಳಬಹುದು.

**ಶ್ರೀ ಕೆ.ಟಿ.ಶ್ರೀಕಂಠೇಗೌಡ(ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಕರ್ನಾಟಕ ವೈದ್ಯಕೀಯ ನೋಂದಣಿ (ತಿದ್ದುಪಡಿ) ವಿಧೇಯಕ, 2017 ಅನ್ನು ಅತ್ಯಂತ ವಿಶ್ವಾಸದಿಂದ, ತುಂಬು ಹೃದಯದಿಂದ ನಾನು ಸ್ವಾಗತಿಸುತ್ತೇನೆ. ಆದರೆ, ಇಲ್ಲಿ ಶಾಸಕರ ಮಹತ್ವದ ಜವಾಬ್ದಾರಿ ಶಾಸನ ಮಾಡುವುದು ಎಂದು ಮಾನ್ಯ ಸಭಾಪತಿಗಳು ಹೇಳಿದರು. ಶಾಸನ ಮಾಡುವುದಕ್ಕೆ ಮೊದಲ ಆದ್ಯತೆ ನೀಡಬೇಕು, ಉಳಿದ ಕೆಲಸಗಳು ಆಮೇಲೆ ಎಂದು ದಿವಂಗತ ಗೋಪಾಲಗೌಡರು ಹೇಳಿರುವುದನ್ನು ನಾನು ಕೇಳಿದ್ದೇನೆ. ಅವರ ಬಗ್ಗೆ ಓದುವಾಗ ಚರಂಡಿ ಮಾಡಿಸುವುದು, ರಸ್ತೆ ಮಾಡಿಸುವುದು ನನ್ನ

ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಕೆಲಸವಲ್ಲ, ಶಾಸನ ಮಾಡಿಸುವುದು ಎಂದು ಹೇಳಿದ್ದಾರೆ. ಶಾಸನ ಮಾಡುವ ವಿಚಾರದಲ್ಲಿ ಮಾಹಿತಿ ಕೊಡುವುದರಲ್ಲಿ ಪದೇಪದೇ ಎಡವುತ್ತಿದ್ದಾರೆ. ನಾವು ರಾತ್ರಿ ನೋಡಿದ ಪತ್ರ ಬಿಟ್ಟರೆ ಅಜೆಂಡಾದಲ್ಲಿ ಏನು ಇಲ್ಲ. ಕನಿಷ್ಠ ಹಿಂದಿನ ರಾತ್ರಿಯಾದರೂ ಕಳುಹಿಸುವ ಕೆಲಸ ಮಾಡಿದರೆ ನಾವು ಒಂದೆರಡು ಗಂಟೆ ಓದಿಕೊಂಡು ಬರುತ್ತೇವೆ.

ಮಾನ್ಯ ಸಭಾಪತಿಯವರೆ, ಇವತ್ತು ಬದಲಾದ ಈ ಜಗತ್ತಿನಲ್ಲಿ ನಾವು ಮೇಲ್ದರ್ಜೆಗೇರಲೇ ಬೇಕಾಗುತ್ತದೆ. ಇದು ಮನುಷ್ಯನ ಆರೋಗ್ಯಕ್ಕೆ ಸಂಬಂಧಪಟ್ಟ ವಿಚಾರ. ಆರೋಗ್ಯದ ವಿಚಾರದಲ್ಲಿ ನಾವು ವಿಶೇಷವಾದ ಕಾಳಜಿ, ಎಚ್ಚರಿಕೆ ವಹಿಸಿದರೆ ಆದಷ್ಟು ಒಳ್ಳೆಯದಾಗುತ್ತದೆ. ಇವತ್ತು ಇಡೀ ಜಗತ್ತಿನಲ್ಲಿ ಪ್ರತಿ ದಿವಸ ಕ್ಯಾನ್ಸರ್ ಬಗ್ಗೆ ಎಂಥೆಂಥ ಶೋಧನೆಗಳಾಗುತ್ತಿವೆ. ಸಕ್ಕರೆ ಕಾಯಿಲೆ ಬಗ್ಗೆ, ಹೃದಯ ಬೇನೆ ಬಗ್ಗೆ ದೊಡ್ಡ ದೊಡ್ಡ ಸಂಶೋಧನೆಗಳಾಗುತ್ತಿವೆ. ಅದನ್ನು ಮೇಲ್ದರ್ಜೆಗೇರಿಸಬೇಕೆನ್ನುವುದರ ಬಗ್ಗೆ ತಕಾರರು ಇಲ್ಲ. ಏಕೆಂದರೆ, ಇವತ್ತು ನಮ್ಮ ಹಳ್ಳಿಗಳಲ್ಲಿ ಯಾವ್ಯಾವುದೋ ಸರ್ಟಿಫಿಕೇಟ್‌ಗಳನ್ನು ಇಟ್ಟುಕೊಂಡು ಬಂದು ಪ್ರಾಕ್ಟೀಸ್ ಪ್ರಾರಂಭ ಮಾಡಿಬಿಡುತ್ತಾರೆ. ಯಾರ್‍ಯಾರನ್ನೋ ಕೇಳಿ ಏನೇನೋ ಇಂಜೆಕ್ಷನ್ ಕೊಡುತ್ತಾರೆ ಮತ್ತು ಅವರು ಯಾವುದೋ ಇಂಜೆಕ್ಷನ್ ಕೊಟ್ಟು ರೋಗಿ ಸಾಯುತ್ತಾರೆ ಅವರಿಗೆ ಊರಿನವರೆಲ್ಲಾ ಸೇರಿಕೊಂಡು ಹೊಡೆಯುತ್ತಾರೆ. ಹಾಗಾಗಿ ಅಂತಹ ನೂರಾರು ಘಟನೆಗಳು ನಡೆದಿವೆ. ನಮ್ಮಲ್ಲಿ ಅದೇ ದಂಧೆ ಕೂಡ ಇದೆ. ಆದ್ದರಿಂದ ಮೇಲ್ದರ್ಜೆಗೇರಿಸುವ ಬಗ್ಗೆ ನನ್ನದೇನೂ ತಕರಾರು ಇಲ್ಲ. ಅವರು ಆ ವೈದ್ಯ ವೃತ್ತಿಯಲ್ಲಿ ತಮ್ಮ ಜ್ಞಾನವನ್ನು ವಿಸ್ತರಿಸಿಕೊಳ್ಳುವುದಕ್ಕೆ, ಸಾಮರ್ಥ್ಯ, ಕೌಶಲ್ಯವನ್ನು ಹೆಚ್ಚಿಸಿಕೊಳ್ಳುವುದಕ್ಕೆ ಇದು ಸಹಾಯಕವಾಗಿ ನಿಲ್ಲುತ್ತದೆ. ಆದರೆ ನನ್ನ ಒಂದು ಮನವಿ ಏನೆಂದರೆ, ಐದು ವರ್ಷದಲ್ಲಿ ಕನಿಷ್ಠ 30 ವಿಚಾರಸಂಕಿರಣಗಳನ್ನು, ವೈದ್ಯಕೀಯ ಸಮ್ಮೇಳನ, ಕಾರ್ಯಗಾರದಲ್ಲಿ ಭಾಗವಹಿಸಬೇಕೆಂದು ಹೇಳಿದ್ದಾರೆ. ಅದರಲ್ಲಿ ವರ್ಷಕ್ಕೆ 6 ಅನ್ನು ಕಡ್ಡಾಯ ಮಾಡಿದ್ದಾರೆ. ಒಟ್ಟು 30 ಕ್ಕೆ ನನ್ನ ತಕರಾರು ಇಲ್ಲ. ಕಾರ್ಯಗಾರವನ್ನೇ ಮಾಡದಿದ್ದರೆ ಅವರು ಎಲ್ಲಿ ಹೋಗುತ್ತಾರೆ? ವೈದ್ಯಕೀಯ ಕೋರ್ಸ್ ಬಗ್ಗೆ ಕಾರ್ಯಗಾರ ನಡೆಸುವುದು ಬಹಳ ಅಪರೂಪ. ನಮ್ಮ ಮೈಸೂರಿನಲ್ಲಿ ಐದು ವರ್ಷಕ್ಕೋ, ಹತ್ತು ವರ್ಷಕ್ಕೋ ಒಂದು ಕಾರ್ಯಗಾರವನ್ನು ನಡೆಸುತ್ತಾರೆ. ಜಿಲ್ಲಾ ಕೇಂದ್ರಗಳಲ್ಲಿ ಕಾರ್ಯಗಾರ ನಡೆಯುವುದನ್ನೇ ನಾನು ನೋಡಿಲ್ಲ. ಈಗ ನಮ್ಮ ಪ್ರತಿ ಪದವಿ ಕಾಲೇಜುಗಳಲ್ಲೂ ಕಡ್ಡಾಯವಾಗಿ ವಿಚಾರ ಸಂಕಿರಣವನ್ನು ನಡೆಸುತ್ತಾರೆ. National and State Seminars ನಡೆಸುತ್ತಾರೆ. ವೈದ್ಯಕೀಯ ಶಿಕ್ಷಣ, ಆರೋಗ್ಯ ಶಿಕ್ಷಣದಲ್ಲಿ ವಿಚಾರ ಸಂಕಿರಣ ನಡೆಸುವ ಸಂಖ್ಯೆ ಬಹಳ ಕಡಿಮೆ ಇದೆ. ಈ ವಿಚಾರ ಸಂಕಿರಣಗಳನ್ನು, ಕಾರ್ಯಗಾರಗಳನ್ನು ನಡೆಸುವ ಜವಾಬ್ದಾರಿ ಯಾರು ವಹಿಸಿಕೊಳ್ಳುತ್ತಾರೆ? ಕನಿಷ್ಠ 6 ಕಾರ್ಯಕ್ರಮಗಳಲ್ಲಿ ಭಾಗವಹಿಸಲೇಬೇಕೆಂದು ಕಡ್ಡಾಯ ಮಾಡಿದ ಮೇಲೆ ಅದಕ್ಕೆ ವ್ಯವಸ್ಥೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಾಡಬೇಕಲ್ಲವೆ? 12, 15, 20 ಮಾಡಿದಾಗ ಅವರು 6 ಕ್ಕೆ ಹೋಗುತ್ತಾರೆ. ಏಕೆಂದರೆ ಅವರು ಎಲ್ಲಾ ದಿನಾಂಕಗಳಲ್ಲೂ ಹೋಗುವುದಕ್ಕಾಗುವುದಿಲ್ಲ. ಅವರಿಗೆ ಸಮಯ ಸಂದರ್ಭ ಕೂಡಿ ಬರುವುದಿಲ್ಲ. ಹಾಗಾಗಿ ಐದು ವರ್ಷಗಳಲ್ಲಿ ಮೂವತ್ತು ಸರಿ ಇದೆ. ಪ್ರತಿ ವರ್ಷ ಆರು ಏಕೆ? ಅದನ್ನು ರಿಲ್ಯಾಕ್ಸ್ ಮಾಡಿ. ಈ ವಿಚಾರ ಸಂಕಿರಣಗಳನ್ನು, ಕಾರ್ಯಗಾರಗಳನ್ನು ನಡೆಸುವ ಜವಾಬ್ದಾರಿಯನ್ನು ಹೇಗೆ ವಹಿಸುತ್ತಾರೆ ಎಂಬುದನ್ನು ಸ್ಪಷ್ಟ ಮಾಡಬೇಕು. ಈ ವಿಧೇಯಕವನ್ನು ನಾನು ಸ್ವಾಗತ ಮಾಡುತ್ತೇನೆ. ಇದಕ್ಕೆ ನಮ್ಮ ಒಪ್ಪಿಗೆ ಇದೆ.

**ಶ್ರೀ ಬಸನಗೌಡ ಆರ್.ಪಾಟೀಲ್ ಯತ್ನಾಳ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಕರ್ನಾಟಕ ವೈದ್ಯಕೀಯ ನೋಂದಣಿ (ತಿದ್ದುಪಡಿ) ವಿಧೇಯಕ, 2017 ಅನ್ನು ತಂದಿದ್ದಾರೆ ಅದನ್ನು ನಾನು ಸಂಪೂರ್ಣವಾಗಿ ಸ್ವಾಗತಿಸುತ್ತೇನೆ. ಇವತ್ತು ಜಗತ್ತಿನಲ್ಲಿ ಅನೇಕ ಹೊಸ ಹೊಸ ಅವಿಷ್ಕಾರಗಳು, ಹೊಸ ಹೊಸ ಸಂಶೋಧನೆಗಳು ನಡೆಯುತ್ತಿರುತ್ತವೆ. ವೈದ್ಯರು ಮೇಲ್ದರ್ಜೆಗೇರುವುದು ಬಹಳ ಅವಶ್ಯಕವಿದೆ. ನಾವು ಅವರಿಗೆ ಮೇಲ್ದರ್ಜೆಗೇರುವುದಕ್ಕೆ ಅವಕಾಶ ಇಲ್ಲ ಎಂದು ಹೇಳುವುದಕ್ಕಾಗುವುದಿಲ್ಲ. ಏಕೆಂದರೆ, ಅವರು ತಮ್ಮ ದವಾಖಾನೆಯನ್ನು ಬಿಟ್ಟು ಹೇಗೆ ಹೋಗುತ್ತಾರೆಂದು ಮಾನ್ಯ ಸದಸ್ಯರೊಬ್ಬರು ಹೇಳಿದರು. ಕನಿಷ್ಠ ಒಂದು ವರ್ಷದಲ್ಲಿ ಹಳ್ಳಿಯಲ್ಲಿರುವಂತಹ ವೈದ್ಯರಿಗೂ ಕೂಡ ಇವತ್ತು ಈ ಔಷಧಿ ಕಂಪನಿಯವರು ಕಡ್ಡಾಯವಾಗಿ ವಿದೇಶ ಪ್ರವಾಸಕ್ಕೆ ಕಳುಹಿಸುತ್ತಾರೆ. ಅದನ್ನು ತಪ್ಪಿಸುವುದಿಲ್ಲ. ಹದಿನೈದು ದಿವಸ, ತಿಂಗಳು ಮಜಾ ಮಾಡುವುದಕ್ಕೆ ಹೋಗುತ್ತಾರೆ. ಏಕೆಂದರೆ, ಆಯಾಯ ಕಂಪನಿಗಳದ್ದು ಏನು ಟಾರ್ಗೆಟ್ ಇರುತ್ತದೆ, ಇಷ್ಟು ಗುಳಿಗೆ ಬರೆಯಬೇಕೆಂದರೆ ಅಷ್ಟನ್ನು ಬರೆದು ಮಲೇಷಿಯಾ ಇನ್ನಿತರ ಕಡೆಗಳಲ್ಲಿ ಮಜಾ ಮಾಡುವುದಕ್ಕೆ ಹೋಗುತ್ತಾರೆ. ಆದರೆ ಮೇಲ್ದರ್ಜೆಗೇರುವುದಕ್ಕೆ ಅವರಿಗೆ ಆಗುವುದಿಲ್ಲ ಎಂದು ಹೇಳುವುದನ್ನು ನಾನು ಒಪ್ಪುವುದಿಲ್ಲ.

(ಮುಂದು)

(430) 24.03.2017/ 12.20/ ಕೆಹೆಚ್/ವಿಕೆ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಬಸನಗೌಡ ಆರ್.ಪಾಟೀಲ್ (ಯತ್ನಾಳ್) (ಮುಂದು):-** ವೈದ್ಯರು upgrade ಆಗಬೇಕು. ವೈದ್ಯರ ಮೇಲೆ ನಿಯಂತ್ರಣವನ್ನು ತರಬೇಕು. ಮಾನ್ಯ ಸಭಾಪತಿಯವರೆ, ಅವರು ಏನು ಮಾಡುತ್ತಾರೆಂದರೆ, ವೈದ್ಯರು ಕೊಟ್ಟಂತಹ ಔಷಧಿಗಳನ್ನು 3 ದಿವಸಗಳಲ್ಲಿ ತೆಗೆದುಕೊಂಡರೆ ಹುಷಾರಾಗುತ್ತಾರೆ. 15 ದಿವಸಗಳಿಗೆ ಔಷಧಿಗಳನ್ನು ಬರೆದುಕೊಡುವುದು. ಸಂಬಂಧಪಡದೇ ಇರುವ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

painkiller ಏನೇನು ತಮಗೆ ಬೇಕಾಗಿರುವುದು ಮತ್ತು ಯಾವ ಯಾವ ಕಂಪನಿಗಳ ಜೊತೆಗೆ ಒಪ್ಪಂದವಾಗಿರುತ್ತದೆ. ಇವತ್ತು ಸಂಬಂಧಪಡದೆ ಇದ್ದರೂ blood testingಗೆ ಕಳುಹಿಸುತ್ತಾರೆ. ಇವತ್ತಿನ ದಿವಸ ಶೇಕಡಾ 60 ರಿಂದ 70 ರಷ್ಟು ಹಗಲು ದರೋಡೆ ವೈದ್ಯಕೀಯ ಕ್ಷೇತ್ರದಲ್ಲಿ ನಡೆಯುತ್ತದೆ. ಒಂದು “ವೈದ್ಯೋ ನಾರಾಯಣ” ಎಂದು ಒಂದು ಕಡೆಯಲ್ಲಿ ಹೇಳುತ್ತಾರೆ.

**ಸಭಾಪತಿಯವರು:-** ಶ್ರೀ ಯತ್ನಾಳ್‌ರವರೆ ಅದರ ಬಗ್ಗೆ ಚರ್ಚೆ ಬೇಡ. ವಿಧೇಯಕದ ಬಗ್ಗೆ ಮಾತನಾಡಿ.

**ಶ್ರೀ ಬಸನಗೌಡ ಆರ್.ಪಾಟೀಲ್ ಯತ್ನಾಳ್:-** ಮಾನ್ಯ ಸಭಾಪತಿಯವರೆ, ನಾನು ವಿಧೇಯಕದ ಬಗ್ಗೆ ಮಾತನಾಡುತ್ತಿದ್ದೇನೆ. ಮಾನ್ಯ ಸಚಿವರು ಈ ವಿಧೇಯಕವನ್ನು ತಂದಿದ್ದಾರೆ. ಅವರು up gradation ಮಾಡಿಕೊಳ್ಳದೇ ಇದ್ದರೆ, ಅವರ registration cancel ಮಾಡುವಂತದ್ದನ್ನು ನಾವು ಸ್ವಾಗತ ಮಾಡುತ್ತೇವೆ. ಅವರಿಗೆ ಒಂದು ಭಯವಿರಬೇಕು. ನಾವು ಅವರಿಗೆ ಭಯನೇ ಬೇಡಪ್ಪಾವೆಂದರೆ ನಮಗೆ ಎಲ್ಲರೂ ವೋಟ್ ಹಾಕಿದ್ದಾರೆಂದು ಹೇಳಿ, ಎಲ್ಲಾ ಕಾನೂನುಗಳನ್ನು ಅವರಿಗೆ ಅನುಕೂಲವಾಗುವ ಹಾಗೆ ಮಾಡಿಕೊಂಡು ಹೋದರೆ, ನಾವು ಆಡಳಿತವನ್ನು ನಡೆಸುವುದಕ್ಕೆ ಆಗುವುದಿಲ್ಲ. ಮಾನ್ಯ ಸಚಿವರು ಏನು ಈ ವಿಧೇಯಕವನ್ನು ತಂದಿದ್ದಾರೆ. ಅದನ್ನು ನಾನು ಸಂಪೂರ್ಣವಾಗಿ ಸ್ವಾಗತ ಮಾಡುತ್ತೇನೆ. ಇವತ್ತಿನ ದಿವಸವೇ ಈ ವಿಧೇಯಕವನ್ನು ಪಾಸ್ ಮಾಡಬೇಕೆಂದು ನಾನು ತಮ್ಮಲ್ಲಿ ವಿನಂತಿ ಮಾಡುತ್ತೇನೆ.

**ಶ್ರೀ ಶರಣಪ್ಪ ಮಟ್ಟೂರ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಅವಕಾಶಕ್ಕಾಗಿ ಧನ್ಯವಾದಗಳು. ಈ ದೇಶದ ಪ್ರತಿಯೊಬ್ಬ ಪ್ರಜೆಯ ಆರೋಗ್ಯವನ್ನು ಕಾಪಾಡುವಂತಹದ್ದು ಒಂದು ಪ್ರದೇಶದಲ್ಲಿರುವ ಸರ್ಕಾರದ ಆದ್ಯ ಕರ್ತವ್ಯ ಮತ್ತು ಜವಬ್ದಾರಿಯಾಗಿದೆ. ಈ ನಿಟ್ಟಿನಲ್ಲಿ ನಮ್ಮ ಸರ್ಕಾರದಲ್ಲಿ ಮಾನ್ಯ ಡಾ॥ ಶರಣಪ್ರಕಾಶ್ ಪಾಟೀಲ್ ರವರು Karnataka Medical Registration Act, 1961 Section 3 ಗೆ ತಂದಿರುವಂತಹ amendment. ಈ ವಿಧೇಯಕಕ್ಕೆ ಸ್ವಾಗತ ಮಾಡುತ್ತೇನೆ ಮತ್ತು ವಿಶೇಷವಾಗಿ ಒಂದು ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ. Degree is different and practice is different. ಯಾವುದೇ ಒಂದು ಕಾನೂನನ್ನು ತಂದರೂ ಸಹ ಈ ದೇಶದಲ್ಲಿ ಯಾರ degree ಯನ್ನು ತೆಗೆದುಕೊಳ್ಳುವಂತಹ ಅಧಿಕಾರ ಯಾವುದಕ್ಕೂ ಇಲ್ಲ. It is very clearly enshrined in the constitution. But

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

for the practice is concerned, imposing certain conditions to upgrade their knowledge to get the good medicine or treatment to the patients of our land. ನಮ್ಮ ಭೂಮಿಯಲ್ಲಿ ಬದುಕಿರುವಂತಹ ಪ್ರತಿಯೊಬ್ಬ ಪ್ರಜೆಗೆ ಒಳ್ಳೆಯ ಆರೋಗ್ಯವನ್ನು ಕೊಡಬೇಕು ಮತ್ತು ಅವನ ಆರೋಗ್ಯವನ್ನು ರಕ್ಷಣೆ ಮಾಡುವಂತಹದ್ದು ನಮ್ಮ ಕರ್ತವ್ಯವಾಗಿದೆ. ಮಾನ್ಯ ಡಾ॥ ಶರಣಪ್ರಕಾಶ್ ಪಾಟೀಲ್ ರವರು ಈ ವಿಧೇಯಕದಲ್ಲಿ ಏನು ತಂದಿದ್ದಾರೆಯೆಂದರೆ, ಎರಡು ವಿಷಯಗಳ ಬಗ್ಗೆ ನಾನು wholeheartedly appreciate ಮಾಡುತ್ತೇನೆ. Amendment of Section 3 ತಂದಿರುವಂತಹದ್ದು ಎಲ್ಲರಿಗೂ ಅವಕಾಶ ಸಿಗಬೇಕೆನ್ನುವಂತಹದ್ದು ಬಹಳ ಒಳ್ಳೆಯ ಕಾನೂನು. ಇದನ್ನು ಎಲ್ಲರೂ ಒಪ್ಪುತ್ತಾರೆಂಬ ಭಾವನೆಯನ್ನು ನಾನು ವ್ಯಕ್ತಪಡಿಸುವುದಕ್ಕೆ ಬಯಸುತ್ತೇನೆ. With regard to Section 19: Renewal of Certificate is concerned, about few days ago, ಮಾನ್ಯ ಉಗ್ರಪ್ಪನವರು ಸಹ ಅದರಲ್ಲಿ participation ಮಾಡಿ ಒಳ್ಳೆಯ ಸಲಹೆಯನ್ನು ಕೊಟ್ಟಿದ್ದರು. Renewal of our Certificate for practicing. ನಾನು ಕೂಡ when I was practicing as a lawyer, ಮಾನ್ಯ ಅಮರನಾಥ್ ಮತ್ತು ಶ್ರೀ ಗಣೇಶ್ ಕಾರ್ಣಿಕ್ ರವರು ಹೇಳಿದರು. When I became a Member of Assembly, I had certain instruction from our Bar Council to get our certificates renewed by paying some extra fees. ಅಲ್ಲಿಗೆ ಕೊಟ್ಟು, ನನ್ನ ಸರ್ಟಿಫಿಕೇಟ್‌ಗಳನ್ನು renewal ಮಾಡಿಸುವಂತಹ ಒಳ್ಳೆಯ amendment ಅನ್ನು ತಂದು ಕೊಟ್ಟಿದ್ದೀರಿ. ಅದೇ ರೀತಿಯಲ್ಲೂ ಕೂಡ ಮಾನ್ಯ ಡಾ॥ ಶರಣಪ್ರಕಾಶ್ ಪಾಟೀಲ್ ರವರು ತಂದಿರುವಂತದ್ದು.

> ***"Section 19, Renewal of Registration:-*** *(1) Every Medical practitioner shall once in five years renew his registration by paying prescribed fees to the medical Council. For renewal of registration such applicant shall submit his application in such manner along with the evidence to the effect that he has participated or attended to a minimum of thirty credit hours of continued medical Education Programme (one credit hour = four hours of continued medical Education Programme) not less than six credit hours per year over a period*

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

*preceding five years in any recognized medical Conference or Seminar or Workshop or Continued Medical Education approved in this behalf by the Karnataka Medical Council."*

ನೋಡಿ, ಇಲ್ಲಿ 5 ವರ್ಷಗಳಲ್ಲಿ ವರ್ಷಕ್ಕೆ 6 ಸಲ. ಮಾನ್ಯ ಯತ್ನಾಳ್ ರವರು ಬಹಳ ಚೆನ್ನಾಗಿ ಹೇಳಿದರು. ಕಂಪನಿಯವರೆ ಅವರಿಗೆ sponsor ಮಾಡುವಾಗ ಅವರು ಹೋಗಿ ಬರುತ್ತಾರೆ. ನಮ್ಮ knowledge update ಮಾಡಿಕೊಂಡು ಬರುವುದಕ್ಕೆ ಏನು ತಪ್ಪಿಲ್ಲ. but, stringent ಆಗಿ ಅದನ್ನು ಮಾಡಲೇಬೇಕಾಗುತ್ತದೆ. ಆ ಉದ್ದೇಶದಿಂದ Section 19 ಅನ್ನು ತಂದಿರುವಂಥದ್ದು ಒಳ್ಳೆಯದೆಂಬ ಮಾತನ್ನು ಸಹ ಹೇಳುವುದಕ್ಕೆ ಬಯಸುತ್ತೇನೆ. At the same time, ಇಲ್ಲಿ ನೋಡಿ in paragraph (2) of the last lines *"Provided further that the name so removed may be re-entered...."* ಇದರಲ್ಲಿ clear ಆಗಿ ಇದೆ. ಅವರಿಗೆ opportunity ಇಲ್ಲದೆ ಮಾಡುವುದಕ್ಕೆ ಬರುವುದಿಲ್ಲ, suppose opportunity ಬಿಟ್ಟು ಮಾಡಿದರೂ ಕೂಡ ನಮಗೆ we will have an opportunity to knock the doors of the court for which I have not been given an opportunity before cancelling my certificate of registration. ಹೀಗಾಗಿ ಒಳ್ಳೆಯ ವಿಧೇಯಕವನ್ನು ತಂದಿದ್ದಾರೆ. ಇವರು ಬಹಳ ಬದ್ಧತೆ ಇರತಕ್ಕ ಮಂತ್ರಿಗಳಾಗಿದ್ದಾರೆ. ನಾನು ಈ ವಿಧೇಯಕವನ್ನು ಸ್ವಾಗತ ಮಾಡುತ್ತೇನೆ. ಈ ವಿಧೇಯಕವನ್ನು ಒಪ್ಪಬೇಕೆಂದು ಹೇಳುತ್ತೇನೆ.

**ಶ್ರೀ ರಿಜ್ವಾನ್ ಅರ್ಷದ್ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಈ ವಿಧೇಯಕವು ನನ್ನ ದೃಷ್ಟಿಯಲ್ಲಿ ಬಹಳ ಒಳ್ಳೆಯ ವಿಧೇಯಕ. ಇವತ್ತು ಸಮಾಜದಲ್ಲಿ ಏನಾಗಿದೆಯೆಂದರೆ ವೈದ್ಯರೆಂದರೆ ಎಲ್ಲರಿಗೂ ಇಡೀ ಪ್ರಪಂಚದಲ್ಲಿಯೇ ಎಷ್ಟು ಜನರಿದ್ದಾರೆ. ಅವರಿಗೆಲ್ಲರಿಗೂ ಅಗತ್ಯವಿರುವಂತಹ ಒಬ್ಬ ವ್ಯಕ್ತಿ. ಇವತ್ತು ವೈದ್ಯರುಗಳು ಒಂದು ಬಾರಿ graduate ಗಳಾಗಿ ಬಿಟ್ಟರೆ, ಉದಾಹರಣೆಗೆ, 20 ವರ್ಷಗಳ ಹಿಂದೆ ಯಾರೋ graduate ಆಗಿ ವೈದ್ಯರಾಗಿದ್ದರು. ಅವರು 20 ವರ್ಷಗಳಿಂದ ಪ್ರಾಕ್ಟೀಸ್ ಮಾಡುತ್ತಿದ್ದಾರಾ ಅಥವಾ ಪ್ರಾಕ್ಟೀಸ್ ಮಾಡುತ್ತಿಲ್ಲವೋ, ಬಿಟ್ಟು ಬಿಟ್ಟಿದ್ದಾರಾ, ಪ್ರಾಕ್ಟೀಸ್ ಬಿಟ್ಟು ಮತ್ತೆ ಪ್ರಾಕ್ಟೀಸ್‌ಗೆ ಬಂದಿದ್ದಾರಾ, ನಾವು ಕೆಲವು ವೈದ್ಯರುಗಳನ್ನು ನೋಡಿದ್ದೇವೆ. 8–10 ವರ್ಷಗಳಿಂದ ಪ್ರಾಕ್ಟೀಸ್ ಮಾಡಿಲ್ಲ. ಬಿಟ್ಟು ಬಿಟ್ಟಿದ್ದರು. ಮತ್ತೆ ವಾಪಸ್ಸು ಪ್ರಾಕ್ಟೀಸ್ ಅನ್ನು ಶುರು ಮಾಡಿದರು. ಎಲ್ಲೋ ಕ್ಲಿನಿಕ್ ಅನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪ್ರಾರಂಭ ಮಾಡಿದರು. ಅಲ್ಲಿಂದ ಪ್ರಾಕ್ಟೀಸ್ ಶುರು ಮಾಡಿದರು. ಯಾವುದೂ ಕೂಡ regulation ಇಲ್ಲ. ಬಹುಶಃ ಅವರು 20 ವರ್ಷಗಳು ಏನು ಓದಿದ್ದರು. ಆ 20 ವರ್ಷಗಳಲ್ಲಿ scientific development and advancement ಗಳು ಎಷ್ಟಾಗಿದಿಯೋ ಎಂಬ ಬಗ್ಗೆ ಕೆಲವು ವೈದ್ಯರಿಗೆ ಗೊತ್ತಿಲ್ಲ. ಹೊಸ ಹೊಸ scientific advancement ಏನಾಗಿದೆ. ಆ medicine field ನಲ್ಲಿ ಏನಾಗಿದೆ ಎಂಬುದು ಕೂಡ ಕೆಲವು ವೈದ್ಯರುಗಳಿಗೆ ಗೊತ್ತಿಲ್ಲ. ಬಹುಶಃ ಈ ಒಂದು ವಿಧೇಯಕದಿಂದ ಒಳ್ಳೆಯದು ಏನಾಗಬಹುದೆಂದರೆ, ವೈದ್ಯರು ಮಧ್ಯ ಮತ್ತೆ ಬಂದು skill upgradation ಮಾಡುವುದು. ಅವರು information upgradation ಆಗುವುದು. ಅವರು regular practice ನಲ್ಲಿ ಇದ್ದಾರೋ, ಇಲ್ಲವೋ ಎಂಬ ಬಗ್ಗೆ ಕೂಡ ನಮಗೆ ಗೊತ್ತಾಗುವುದು. ಇದೆಲ್ಲ ಸ್ವಲ್ಪ regulation ಆಗುತ್ತದೆ. ಈ ವಿಧೇಯಕದಲ್ಲಿ ಎಲ್ಲ ಒಳ್ಳೆಯದಿದೆ. ಈ ವಿಧೇಯಕ ಪಾಸ್ ಆಗಬೇಕು. ಮಾನ್ಯ ಡಾ॥ ಶರಣಪ್ರಕಾಶ್ ಪಾಟೀಲ್ ರವರು ಸಹ ವೈದ್ಯರಾಗಿದ್ದು, 12 ವರ್ಷಗಳಿಂದ ಶಾಸಕರಾಗಿದ್ದಾರೆ. ಅವರು ಪ್ರಾಕ್ಟೀಸ್ ಮಾಡುತ್ತಿದ್ದಾರೋ, ಇಲ್ಲವೋ ಎಂಬ ಬಗ್ಗೆ ನಮಗೆ ಗೊತ್ತಿಲ್ಲ. ನಾಳೆ ಮತ್ತೆ ಪ್ರಾಕ್ಟೀಸ್‌ಗೆ ಹೋದರೆ, ಅವರು ಸಹ renewal ಮಾಡಿಸಬೇಕಾಗುತ್ತದೆ. ಮತ್ತೆ skill upgrade ಮಾಡಿಕೊಳ್ಳಬೇಕಾಗುತ್ತದೆ. ಈ ರೀತಿಯಲ್ಲಿ ಬಹಳಷ್ಟು ಜನರು ಬರುತ್ತಾರೆ.

**ಶ್ರೀ ಆರ್.ಪ್ರಸನ್ನಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಅವಕಾಶಕ್ಕಾಗಿ ಧನ್ಯವಾದಗಳು. ವೈದ್ಯಕೀಯ ಶಿಕ್ಷಣ ಸಚಿವರು ತಂದಿರುವಂತಹ ಈ ಮಸೂದೆಗೆ ನಾನು ಬೆಂಬಲವನ್ನು ವ್ಯಕ್ತಪಡಿಸುತ್ತಾ, ವೈದ್ಯಕೀಯ ಕ್ಷೇತ್ರದಲ್ಲಿ ಸಾಕಷ್ಟು ಪ್ರಗತಿಗಳನ್ನು ಕಾಣುತ್ತಿದ್ದೇವೆ. ಇವತ್ತು ಈ ಜ್ಞಾನಯೇನಿದೆ. ಈ ಜ್ಞಾನ ಎಲ್ಲ ವೈದ್ಯರಿಗೂ ಸಿಗಬೇಕೆಂಬುದು ಬಹಳ ಮುಖ್ಯವಾಗಿರುವಂತಹದ್ದು, ಆದ್ದರಿಂದ ಈ ಒಂದು ಮಸೂದೆಯನ್ನು ತೆಗೆದುಕೊಂಡು ಬಂದಿದ್ದಾರೆ. ಹಾಗಾಗಿ ಈ ಮಸೂದೆಯನ್ನು ಇವತ್ತು ಮಂಡನೆ ಮಾಡಿದ್ದಾರೆ. ಈ ಸದನ ಒಪ್ಪಿಗೆ ಕೊಡಬೇಕೆಂದು ಹೇಳಿ, ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ.

**ಶ್ರೀ ವಿ.ಎಸ್.ಉಗ್ರಪ್ಪ (ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೆ, ನಾನು ಸಹ ವಿರೋಧಪಕ್ಷದ ನಾಯಕನಾಗಿ ಕೆಲಸ ಮಾಡಿದ್ದೇನೆ. ಬಹುಶಃ Rules of Procedure and Conduct of Business in the Karnataka Legislative Council ನ Rule 114 ಅನ್ನು ಆದಷ್ಟು ಮಟ್ಟಿಗೆ ಪಾಲನೆ ಮಾಡುವಂತಹದ್ದು ಅತ್ಯಂತ ಸೂಕ್ತವೆಂದು ಹೇಳಿ ನಾನು

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಭಾವಿಸಿದ್ದೇನೆ. ಏಕೆಂದರೆ ತಾವೇ ಹೇಳಿದ ಹಾಗೆ ಈ ಸದನ ಬೇರೆ ಬೇರೆ ಸಮಸ್ಯೆಗಳಿಗೆ ಚರ್ಚೆ ಮಾಡುವುದಕ್ಕಿಂತ ಹೆಚ್ಚಾಗಿ ಕಾನೂನನ್ನು ಮಾಡತಕ್ಕಂಥದ್ದೇ ಅತ್ಯಂತ ಪ್ರಮುಖವಾಗಿರುವಂತಹ ಜವಬ್ದಾರಿಯಾಗಿದೆ. ಬಹುಶಃ Rule 114 ರಲ್ಲಿ *"...unless the Chairman otherwise directs be not less than three days from the receipt of the notice,..."* ಬಹುಶಃ ಇದು mandatory. ತಾವು ಈಗ permission ಕೊಟ್ಟಿರುವುದು. ತಮಗೆ ಅಧಿಕಾರದತ್ತವಾಗಿದೆ. Even one day ನಲ್ಲಿ it can be taken up ಎಂದು ಹೇಳಿ ತಾವು ಅದಕ್ಕೆ ಅನುಮತಿ ಕೊಟ್ಟಿರುವುದರಿಂದ, ಬಹುಶಃ ಈ ವಿಧೇಯಕವನ್ನು ತೆಗೆದುಕೊಂಡು ಚರ್ಚೆ ಮಾಡುತ್ತಿರುವಂಥದ್ದು.

**ಸಭಾಪತಿಯವರು:-** ಶ್ರೀ ಉಗ್ರಪ್ಪನವರೆ ತಾವು ಬಹಳ ವರ್ಷಗಳಿಂದ ವಿರೋಧಪಕ್ಷದ ನಾಯಕರಾಗಿ ಕೆಲಸವನ್ನು ಮಾಡಿದ್ದೀರಾ. ಆ Rule ನ violation ಜಾಸ್ತಿಯಾಗಿರುವುದು. Follow ಮಾಡಿರುವುದೇ ಕಡಿಮೆ. ಇದು successive Governments ಇದೇ ಮಾಡುವುದು. ಇವತ್ತಿನ ಸರ್ಕಾರ, ನೆನ್ನೆಯ ಸರ್ಕಾರವೆಂದು ಹೇಳಬೇಡಿ. ನಾವು ನಮ್ಮ ಸದನದ ಹಿರಿತನದ ಹಿನ್ನಲೆಯಲ್ಲಿ ಸರ್ಕಾರದ ಮೇಲೆ ಒತ್ತಡಗಳನ್ನು ತಂದಾಗ ನಾವೆಲ್ಲರೂ ಒಟ್ಟಾಗಿ ಆಡಳಿತ ಪಕ್ಷ, ವಿರೋಧ ಪಕ್ಷದವರೆಂದು ಮರೆತು successive Governments ಮೇಲೆ ಒತ್ತಡಗಳನ್ನು ತಂದರೆ ಮಾತ್ರ ಆ ನಿಯಮದ ಸದಭಿಪ್ರಾಯ implement ಆಗುತ್ತದೆ. ಇಲ್ಲದೆ ಹೋದರೆ ಅದರೊಳಗಡೆ ದಾರಿ ಹುಡುಕಿ, ತಾವೇ ಹೇಳಿದ ಹಾಗೆ Chairman ಗೆ ಅಧಿಕಾರವಿದೆ ಮಾಡಿಕೊಡಿ ಎಂದು ಸರ್ಕಾರ ಕೇಳಿದಾಗ, Chairman ರವರು ಮಾಡಿಕೊಡಲೇ ಬೇಕಾದಂತಹ ಇಕ್ಕಟ್ಟಿಗೆ ಸಿಕ್ಕಿ ಹಾಕಿಕೊಳ್ಳುತ್ತಾರೆ.

(ಮುಂದು)

431/24-03-2017/12-30/bkp-vk **ಸಭಾಪತಿಯವರು(ಮುಂದು. . .)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು (ಮುಂದು):** ಅದಕ್ಕಾಗಿ ನಾನು ಪದೇ ಪದೇ ಪ್ರತಿಯೊಂದು ಬಾರಿ, ಈ ಬಿಲ್ ಬಂದಾಗ ಈ ರೀತಿಯಲ್ಲಿ ಹೇಳುತ್ತಿರುತ್ತೇನೆ. ಸದನ ಒಟ್ಟಾಗಿ, ಆಡಳಿತ ಪಕ್ಷ ಮತ್ತು ವಿರೋಧ ಪಕ್ಷ ಎನ್ನುವುದನ್ನು ಮರೆತು ಸದನ ಒಟ್ಟಾಗಿ, ಸರ್ಕಾರದ ಮೇಲೆ ಒತ್ತಡಗಳನ್ನು ತಂದು ಇನ್ನು

ಮುಂದಾದರೂ ಸಹ ಈ ರೀತಿಯಲ್ಲಿ ಆಗುವ ಹಾಗೆ ನಾವು ಗಮನಿಸಬೇಕು. ಒಳ್ಳೆಯ ವಿಷಯವನ್ನು ಹೇಳಿದ್ದೀರಿ. ಆದ್ದರಿಂದ, ತಾವು ತಮ್ಮ ಭಾಷಣವನ್ನು ಮುಂದುವರಿಸಿ.

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೆ, ಸಂದರ್ಭ ಬಂತು ಎಂದು ಹೇಳಿ, ನಾನು ಇನ್ನೊಂದು ವಿಚಾರವನ್ನು ಸೇರಿಸಲಿಕ್ಕೆ ಬಯಸುತ್ತೇನೆ. ತಾವು ಅನ್ಯಥಾ ಭಾವಿಸಬೇಡಿ. ಈಗ ಪ್ರಶ್ನೋತ್ತರ ವೇಳೆ ಇದ್ದಂತಹ ಸಮಯದಲ್ಲಿ ನನ್ನ ಪ್ರಶ್ನೆ ಇರುವುದಿಲ್ಲ. ಹೀಗಾಗಿ, ಪ್ರಶ್ನೆಗಳು ಇರುವವರು ಬಿಟ್ಟು ಉಳಿದವರು ಇಲ್ಲಿ ಏತಕ್ಕೆ ಸುಮ್ಮನೆ ಒಂದು ಗಂಟೆ, ಎರಡು ಗಂಟೆ ಕಾಯಬೇಕೆನ್ನುವ ಮನೋಸ್ಥಿತಿ develop ಆಗುತ್ತಿದೆ. ಏಕೆಂದರೆ, ನಾವ್ಯಾರೂ ಸಪ್ಲಿಮೆಂಟರಿಯನ್ನು ಕೇಳಲಿಕ್ಕೆ ಅವಕಾಶವೇ ಇಲ್ಲ. ಅದಕ್ಕೋಸ್ಕರ ಪ್ರಶ್ನೋತ್ತರ ಅವಧಿಯಾದ ಮೇಲೆ ಹೌಸ್‌ಗೆ ಹೋಗೋಣ ಎನ್ನುವಂತಹ ಮನೋಸ್ಥಿತಿ ಬದಲಾವಣೆಯಾಗುವ ಹಾಗೆ ಕಾಣುತ್ತಿದೆ. ಆದ್ದರಿಂದ, ದಯಮಾಡಿ, reconsider ಮಾಡುವುದು ಅವಶ್ಯಕತೆ ಇದೆ ಎಂದು ನಾನು ಹೇಳಲಿಕ್ಕೆ ಬಯಸುತ್ತೇನೆ.

ಮಾನ್ಯ ಸಭಾಪತಿಯರವರೆ, ಈ ಆಕ್ಟ್ 1961 ರಲ್ಲಿ ಆಗಿದೆ, ಸುಮಾರು 55 ವರ್ಷಗಳ ನಂತರ ಈ ತಿದ್ದುಪಡಿಯನ್ನು ಸರ್ಕಾರ suggest ಮಾಡುತ್ತಿದೆ. ಏತಕ್ಕೆ 55 ವರ್ಷಗಳ ನಂತರ ಈ ರೀತಿಯ ತಿದ್ದುಪಡಿಯನ್ನು ತರಲಿಕ್ಕೆ ಕಾರಣಗಳೇನು ಎನ್ನುವುದರ ಬಗ್ಗೆ ಒಂದು ಕಾರಣ ಕಾಣುತ್ತಿತ್ತು. ಮಿಕ್ಕ cogent reasons ಇನ್ನು ಸ್ವಲ್ಪ ಮಾನ್ಯ ಮಂತ್ರಿಗಳು ಹೇಳಿದ್ದರೆ ಸಮಂಜಸವಾಗುತ್ತಿತ್ತು. ನೋಡಿ, ಸೆಕ್ಷನ್ 3 ಗೆ ನಿಜವಾಗಿಯೂ ಸಹ ಅತ್ಯಂತ ಪ್ರಗತಿಪರವಾಗಿರುವಂತಹ ಸಾಮಾಜಿಕ ನ್ಯಾಯವನ್ನು ಕೊಡತಕ್ಕಂತಹ ದಿಕ್ಕಿನಲ್ಲಿ ಸೆಕ್ಷನ್ 3ಗೆ ತಿದ್ದುಪಡಿಯನ್ನು ತಂದಿದ್ದಾರೆ. ನಿಜಕ್ಕೂ ಸಹ ಅತ್ಯಂತ ಸ್ವಾಗತಾರ್ಹವಾಗಿರುವಂತಹ ವಿಷಯವಾಗಿದೆ. ಈ Medical Council ಗೆ ಏನಾಗುತ್ತಿತ್ತು, ಕೇವಲ ನಗರಗಳಿಂದ, ವಿಶೇಷವಾಗಿ ಬೆಂಗಳೂರಿನವರೆ ಎಲ್ಲರೂ ಸಹ ಚುನಾಯಿತರಾಗುತ್ತಿದ್ದರು. ಆದರೆ, ಈಗ ಇವರು ಏನು ಮಾಡಿದ್ದಾರೆಂದರೆ ಒಂದೊಂದು division ಗೆ "(a) six members to be elected from amongst themselves by the medical practitioners who are registered under this Act;" ಹೀಗಾಗಿ, ಇದನ್ನು ಏನು ಮಾಡಿದ್ದಾರೆಂದರೆ ನಾಲ್ಕು Division ಗಳನ್ನಾಗಿ ಮಾಡಿ ಒಂದೊಂದು Division ನಿಂದ ಇಬ್ಬರಿಬ್ಬರು ಆಯ್ಕೆಯಾಗಬೇಕೆಂದು ಮಾಡಿದ್ದಾರೆ. ನಿಜಕ್ಕೂ ಸಹ ಇದು ಸ್ವಾಗತಾರ್ಹವಾದ ವಿಚಾರ. "(b) four members to be elected from amongst themselves by the

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"teachers"..." ಅದು ಸಹ ಬೆಂಗಳೂರಿನವರೇ ಆಗುತ್ತಿದ್ದರು. ಈಗ ನಾಲ್ಕು Division ಗಳಿಂದ ಮಾಡಬೇಕೆಂದು ಮಾಡಿರುವುದು ನಿಜಕ್ಕೂ ಸ್ವಾಗತಾರ್ಹವಾದ ವಿಚಾರ. "(c) four members to be nominated by the State Government from among registered practitioners." ಅವರು ಸಹ majority ಬೆಂಗಳೂರು, ಮಂಗಳೂರಿನವರೋ, ಮೈಸೂರಿನವರೋ ಅಥವಾ ಗುಲ್ಬರ್ಗದವರೋ ಎನ್ನುವಂತೆ ಯಾವುದೋ ಒಂದು ಏರಿಯಾಕ್ಕೆ ಸಿಮೀತವಾಗುತ್ತಿತ್ತು. ಈಗ ಇದಕ್ಕೆ ಒಬ್ಬೊಬ್ಬರನ್ನು ಒಂದೊಂದು Division ನಿಂದ ಮಾಡಬೇಕೆನ್ನುವುದು ನಿಜಕ್ಕೂ ಸಹ ಭೌಗೋಳಿಕವಾಗಿ representation ಅನ್ನ ಕೊಡುವಂತಹದ್ದಕ್ಕೆ ಏನು ತಂದಿರುವಂತಹದ್ದು ಇದೆ, ಇದು ಒಂದು ರೀತಿಯಲ್ಲಿ ಎಲ್ಲಾ ಭಾಗಗಳಿಗೆ representation ಕೊಡುವಂತಹದ್ದಕ್ಕೆ ನಿಜವಾಗಿಯೂ ಸಹ ಒಂದು ರೀತಿಯಲ್ಲಿ ಸಾಮಾಜಿಕ ನ್ಯಾಯಕ್ಕೆ ಒತ್ತು ಕೊಟ್ಟಿದ್ದಾರೆಂದು ಹೇಳಿ ನಾನು ಭಾವಿಸುತ್ತೇನೆ.

ಇನ್ನು ಸೆಕ್ಷನ್ 19 ಬಗ್ಗೆ ಹೇಳುವುದಾದರೆ ಬಹುಶ: ಒಬ್ಬ Legislator ಆಗಿ ನಾನು ನನ್ನ ಮುಕ್ತ ಅಭಿಪ್ರಾಯವನ್ನು ವ್ಯಕ್ತ ಮಾಡಬೇಕಾಗುತ್ತದೆ. 55 ವರ್ಷಗಳಿಂದ there was no problem at all. Update ಮಾಡುವಂತಹ problem ಇಲ್ಲಿಯವರೆಗೂ ಕಂಡು ಬಂದಿರಲಿಲ್ಲ. ಆದರೆ, ಈಗ update ಮಾಡಬೇಕೆನ್ನುವುದು ಸರ್ಕಾರಕ್ಕೆ ಅಥವಾ ಮಂತ್ರಿಗಳಿಗೆ ಬಂದಿದೆ. ನನ್ನ ಮನೆಯಲ್ಲೂ ಸಹ ಒಬ್ಬರು ಡಾಕ್ಟರ್ ಇದ್ದಾರೆ. ಅವರು ಎಂಬಿಬಿಎಸ್., ನನ್ನ ಪತ್ನಿ. ಕಳೆದ 30 ವರ್ಷಗಳಿಂದ ಬರಿ ಎಂಬಿಬಿಎಸ್.ಗೆ workshop ಎಂದಾಗಲಿ, conference ಎಂದಾಗಲಿ ಹೋಗಿರುವಂತಹದ್ದು ಯಾವುದನ್ನೂ ನಾನಂತೂ ಕೇಳಿಲ್ಲ. Yes, conferences ಆಗುತ್ತಿವೆ. Gynaecology ಗೆ ಆಗುತ್ತದೆ, Orthopedics ಗೆ ಆಗುತ್ತದೆ, Urology ಗೆ ಆಗುತ್ತದೆ. ಆದರೆ, ನಮ್ಮ ರಾಜ್ಯದಲ್ಲಿ General Practitioners ನವರು ಏನಿದ್ದಾರೆ. . . ಹೌದು, M.D. General Medicine ಇರುವವರಿಗೆ ಆಗುತ್ತದೆ.

(ಗೊಂದಲ)

**ಸಭಾಪತಿಯವರು:-** ಅವರ ಅಭಿಪ್ರಾಯವನ್ನು ಕೇಳಬೇಕು. ಈ ವಿಚಾರದಲ್ಲಿ ನಾವು ಎಲ್ಲರ ಅಭಿಪ್ರಾಯವನ್ನು ಕೇಳಬೇಕಾಗುತ್ತದೆ. ಶ್ರೀಯುತ ಉಗ್ರಪ್ಪನವರೆ, ತಾವು ಒಳ್ಳೆಯ ವಿಚಾರವನ್ನು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೇಳುತ್ತಿದ್ದೀರಿ. ನಾನು ಮಧ್ಯೆ ಬಾಯಿ ಹಾಕಿದರೆ ತಮಗೆ ಸ್ವಲ್ಪ ಮುಜಗರ ಆಗುತ್ತದೆ, ಇರಿಸು-ಮುರಿಸು ಆಗುತ್ತದೆ, ಮತ್ತೆ ಕೋಪವನ್ನೂ ಸಹ ಮಾಡಿಕೊಳ್ಳುತ್ತೀರಿ. ನಾನು ಹೇಳುವುದೇನೆಂದರೆ, ಇಷ್ಟು ಚೆನ್ನಾಗಿ ಹೇಳುವಂತಹ ವಿಷಯವನ್ನು ಬೇಗ ಹೇಳಿದರೆ impression ಜಾಸ್ತಿ ಆಗುತ್ತದೆ ಎನ್ನುವ ಕಾರಣದಿಂದ ಹೇಳುತ್ತಿದ್ದೇನೆ.

(ಗೊಂದಲ)

**ಶ್ರೀ ಹೆಚ್.ಎಂ. ರೇವಣ್ಣ:-** ಮಾನ್ಯ ಸಭಾಪತಿಯವರೆ, ಜೋರಾಗೂ ಹೇಳಬೇಕು, impression ನೂ ಜಾಸ್ತಿ ಆಗಬೇಕು. ಅದೇ ಉಗ್ರಪ್ಪ.

**Mr. CHAIRMAN:-** It is a very pertinent point. ಬರಿ ಎಂಬಿಬಿಎಸ್ ಡಾಕ್ಟರ್‌ಗಳಿಗೆ ಅವರು ಏನು ಹೇಳುತ್ತಿದ್ದಾರೆ, ಅದು ಇರುವುದಿಲ್ಲ.

(ಗೊಂದಲ)

**ಶ್ರೀ ಬಸವರಾಜ ರಾಯರೆಡ್ಡಿ:-** ಇದೇ ಒಂದು ದೊಡ್ಡ conference ಆಯಿತು.

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೆ, ಚರ್ಚೆ ಮಾಡದೇ ಎಲ್ಲಾ ಬಿಲ್‌ಗಳನ್ನು ಪಾಸ್ ಮಾಡೋಣ. ಏಕೆಂದರೆ, ನಮ್ಮ ಬಸವರಾಜ ರಾಯರೆಡ್ಡಿಯವರು ಬಹಳ hurry ನಲ್ಲಿದ್ದಾರೆ.

**ಸಭಾಪತಿಯವರು:-** ಆ ರೀತಿ ಏನಿಲ್ಲ.

**ಶ್ರೀ ವಿ.ಎಸ್.ಉಗ್ರಪ್ಪ:-** ಸದನ ಎಂದರೆ ಏನು ತಿಳಿದುಕೊಂಡಿದ್ದಾರೆಂದು ನನಗೆ ಅರ್ಥವಾಗುತ್ತಿಲ್ಲ.

**ಸಭಾಪತಿಯವರು:-** ಆ ರೀತಿ ಬೇಡ. ಅವರು ನಿಮ್ಮ ಸ್ನೇಹದಿಂದ ಏನಾದರೋ ಹೇಳಿಕೊಳ್ಳಲಿ, ನೀವು ಹೇಳುವುದನ್ನು ನನಗೆ ಹೇಳಿ. ಅವರ ವಿಚಾರವನ್ನು ಬಿಟ್ಟು ಬಿಡಿ. ನನ್ನ ವಿಷಯವನ್ನು ಹೇಳಿ. ನಾವು ನೀವು ಮಾತನಾಡೋಣ.

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೆ, ಇಲ್ಲಿ ಏನಾಗಿದೆ ಎಂದರೆ ಇಲ್ಲಿ ಕೊನೆಯಲ್ಲಿ *"...recognized Medical Conference or seminar or workshop as may be approved or conducted by the medical Council in the State headquarters or regional headquarters or district headquarters or*

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

*teaching hospitals or medical colleges or any institution run by the Karnataka medical Council."* ಆದರೆ ಬರಿ ಎಂಬಿಬಿಎಸ್., ಮಾಡಿದಂತಹವರಿಗೆ ನಮ್ಮ ಪಾವಗಡದ ವೆಂಕಟಾಪುರದಲ್ಲಿ ಡಾಕ್ಟರ್ ಇದ್ದಾರೆ. ಪಾವಗಡದಲ್ಲಿಯೂ ಇದ್ದಾರೆ. ಇಲ್ಲಿಯವರೆಗೂ ಸರ್ಕಾರದವರು "ಇಲ್ಲ, ರೀ. ನಾವು ಪ್ರತಿ ವರ್ಷ ಇಂತಹ conference organize ಮಾಡಿದ್ದೇವೆ, workshop organize ಮಾಡಿದ್ದೇವೆಂದು ಹೇಳಲಿ. Then there is a meaning, there is some meaning in it. ಯಾರೋ ಮಾಡುತ್ತಾರೆ, ನೀವು ಅದನ್ನು attend ಮಾಡಿ, ಅದನ್ನು ತಂದು ಕೊಡಿ ಎಂದು ಹೇಳಿದರೆ . . ಇದು ನನಗೆ ಸರಿ ಕಾಣುವುದಿಲ್ಲ. ನಾನು ಸುಮಾರು 30 ವರ್ಷಗಳ ವಕೀಲಿ ವೃತ್ತಿಯನ್ನು ಮಾಡಿದವನಾಗಿದ್ದೇನೆ. ಈಗಲೂ ಸಹ ಸೀರಿಯಸ್ ಆಗಿ ಕಾನೂನಿನ ಬಗ್ಗೆ ಅಧ್ಯಯನ ಮಾಡುತ್ತಿದ್ದೇನೆ. ಇದರಲ್ಲಿ ಏನಾಗುತ್ತದೆ ಎಂದರೆ 3 ವರ್ಷ 6 ಗಂಟೆ, 6 ಗಂಟೆ ಒಂದು ವರ್ಷಕ್ಕೆ ಎಂದು ಹೇಳಿದರೆ. . . ಒಂದು ವೇಳೆ ಯಾವುದೂ conference ನಡೆದೇ ಇಲ್ಲ, ಹೋಗಿಲ್ಲ. ಆ ಒಂದು ಸರ್ಟಿಫಿಕೇಟ್ ಇಲ್ಲವೆಂದರೆ ಒಂದು ವರ್ಷ ಅವನು registration ಮಾಡದೇ ಅವನು ಪ್ರಾಕ್ಟೀಸ್ ಮಾಡುವಂತೆಯೇ ಇಲ್ಲ. ಅಂದರೆ, 30 ಗಂಟೆಗಳು ಇರುವುದಿಲ್ಲ. So, three years registration renewal ಆಗುವವರೆಗೂ ಸಹ ಅವನು register ಮಾಡುವಂತಿಲ್ಲ.

ಈಗ ಒಂದು ವೇಳೆ ಡಾಕ್ಟರ್ ಸಹ ಆದಂತಹ ಮಂತ್ರಿಗಳು ಯಾವುದಾದರೊಂದು ಕಾರಣದಿಂದ ಮಂತ್ರಿಗಳು ಇಲ್ಲದಂತಹ ಸಮಯದಲ್ಲಿ ಅವರು ಪ್ರಾಕ್ಟೀಸ್ ಮಾಡಬೇಕಾದರೆ ನೀವು ಸಹ renewal ಆಗಬೇಕು. 30 ಗಂಟೆಗಳು. . . ಇವರು ಇದನ್ನು ಬಿಟ್ಟು ಹೋಗಿ ಸುಮ್ಮನೆ 3 ವರ್ಷ ಸುಮ್ಮನೆ ಕುಳಿತಿರಬೇಕು. ಏಕೆಂದರೆ, ಇವರು ರಿಜಿಸ್ಟ್ರೇಷನ್ ಮಾಡಿಸಿರುವುದಿಲ್ಲ. Without registration he cannot. ಹೀಗಾಗಿ, ನಾನು ಹೇಳುವುದೇನೆಂದರೆ ಇಲ್ಲಿ ಈ ವಿಚಾರವಾಗಿ ತಾವು specify ಮಾಡಬೇಕು. ನೀವು ಸಹ ಸರ್ಕಾರದಿಂದ ಪ್ರತಿವರ್ಷ are you going to organize the seminars, workshops and are you going to provide such facilities to the general practitioners ಎಂದು ಅದನ್ನು ಮಾಡಬೇಕು. ಆಗಲಿಲ್ಲವೆಂದಾಗ ರಿಜಿಸ್ಟ್ರೇಷನ್ ಅನ್ನು ತಿರಸ್ಕಾರ ಮಾಡುವುದರಲ್ಲಿ ಅರ್ಥವಿದೆ. ಬಹುಶ: ಇದನ್ನು clarify ಮಾಡಿ ಈ ಹಿನ್ನೆಲೆಯಲ್ಲಿ ಇವತ್ತು ಏನು ಸೆಕ್ಷನ್ 3 ಸ್ವಾಗತಾರ್ಹವಾಗಿರುವಂತಹದ್ದಾಗಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸೆಕ್ಷನ್ 19 ಬಗ್ಗೆ ಹೇಳುವುದಾದರೆ, ಅದರಲ್ಲಿ ಸ್ವಲ್ಪ application of mind ಇಟ್ಟುಕೊಂಡು ಇದರ ಬಗ್ಗೆ ಬೆಳಕನ್ನು ಚೆಲ್ಲಿ. ಇಲ್ಲವೆಂದರೆ ಏನಾಗುತ್ತದೆ ಎಂದರೆ ರಿಜಿಸ್ಟ್ರೇಷನ್‌ನಲ್ಲಿ ಅಟೆಂಡ್ ಮಾಡಿದ್ದೇನೆಂದು ಹೇಳಿ ಯಾವುದಾದರೊಂದು certificate ತೆಗೆದುಕೊಂಡು ಬನ್ನಿ, ಅದನ್ನು ತೆಗೆದುಕೊಂಡು ಬರುವುದಕ್ಕೆ ಯಾರಿಗಾದರೂ ಸಹ conference ಏರ್ಪಡಿಸಿರುವವರಿಗೆ 500, 1000 ರೂಪಾಯಿಗಳೋ 5000, 1000 ಸಾವಿರ ರೂಪಾಯಿಗಳ ಲಂಚವನ್ನು ಕೊಟ್ಟು . . ಅದು fake certificate ಕೂಡ ಇರಬಹುದು. ಇದು ಎಲ್ಲೋ ಒಂದು ಕಡೆ ತಪ್ಪು ದಾರಿಗೆ ಎಳೆಯುವಂತಹದ್ದಕ್ಕೆ, ಭ್ರಷ್ಟಾಚಾರಕ್ಕೆ ಮತ್ತೊಂದಕ್ಕೆ ಕಾರಣವಾಗುವಂತಹ ಅವಕಾಶ ಸೆಕ್ಷನ್ 19 ರಲ್ಲಿ ಇದೆ, ಇದರ ಬಗ್ಗೆ ಸ್ವಲ್ಪ ಸರ್ಕಾರ ಗಂಭೀರವಾಗಿ ಯೋಚನೆ ಮಾಡಬೇಕೆಂದು ಹೇಳಲಿಕ್ಕೆ ಬಯಸುತ್ತೇನೆ.

**ಮುಂದು**. . .

(432) 24.03.17 SPR-BNS 12.40

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಕೆ.ಬಿ.ಶಾಣಪ್ಪ(ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೆ, ನಾನು ಪ್ರಸ್ತುತ ವಿಧೇಯಕವನ್ನು ಬೆಂಬಲಿಸುತ್ತೇನೆ. ಇದಕ್ಕೆ ಕಾರಣವೇನೆಂದರೆ, ಈ ಮೊದಲು ಕೆಲವು ತೊಡಕುಗಳ ಮಧ್ಯೆಯೇ ವೈದ್ಯರುಗಳು ಅಭ್ಯಾಸ ಮಾಡುತ್ತಿರುವಂತಹವರು ತಮ್ಮ ವೃತ್ತಿಯೇ ನಿಂತು ಹೋಗುವ ಪರಿಸ್ಥಿತಿಯಿದೆ ಎಂದು ಬಹಳ ಜನರಿಗೆ ಅಂಜಿಕೆಯುಂಟಾಗಿತ್ತು. ಪ್ರಸ್ತುತ ವಿಧೇಯಕದ ಪುಟ ಸಂಖ್ಯೆ 2 ರಲ್ಲಿ '(1) ನೇ ಉಪ ಪ್ರಕರಣದಲ್ಲಿ ನಿರ್ದಿಷ್ಟಪಡಿಸಲಾದ ಅಂಥ ವಿಧಾನದಲ್ಲಿ ನವೀಕರಣ ಶುಲ್ಕವನ್ನು ಪಾವತಿಸಿದ ಮೇಲೆ ಹುತ್ತು ಮುಂದುವರಿಕೆ ವೈದ್ಯಕೀಯ ಶಿಕ್ಷಣ ಕಾರ್ಯಕ್ರಮದಲ್ಲಿ ಭಾಗವಹಿಸುವುದಕ್ಕೆ ಒಳಪಟ್ಟು, ಹಾಗೆ ತೆಗೆದುಹಾಕಲಾದ ಹೆಸರನ್ನು ರಿಜಿಸ್ಟರ್‌ನಲ್ಲಿ ಪುನ: ನಮೂದಿಸಬಹುದು' ಎಂಬುದಾಗಿ ಹೇಳಿದ್ದೀರಿ. ವೈದ್ಯಕೀಯ ಶಿಕ್ಷಣಕ್ಕೂ, ಬೇರೆ ಶಿಕ್ಷಣಕ್ಕೂ ಬಹಳ ವ್ಯತ್ಯಾಸಗಳಿವೆ. ಬೇಕಾದಷ್ಟು faculties we have come across in our life. ಗಣಿತಶಾಸ್ತ್ರ, ತತ್ವಶಾಸ್ತ್ರ ಹಾಗೂ ಬೇರೆ ಇನ್ನಾವುದೇ ವಿಷಯಗಳನ್ನು ಓದಬಹುದು. ಆದರೆ, ವೈದ್ಯಕೀಯ ಶಿಕ್ಷಣವನ್ನು ಉತ್ತೀರ್ಣಗೊಳಿಸದಂತಹ ವ್ಯಕ್ತಿಗೆ ಸಮಾಜದಲ್ಲಿ ತನ್ನದೇ ಆದಂತಹ ಒಂದು ಗುರುತು ಇದೆ. ಸಮಾಜಕ್ಕೆ ಇಂಜಿನಿಯರಿಂಗ್ ಪದವಿ ಓದಿದ ವ್ಯಕ್ತಿಯ ಅವಶ್ಯಕತೆ ಅಷ್ಟಾಗಿ ಬೇಕಾಗಿಲ್ಲ. ಅವನನ್ನು ಎಲ್ಲಿಗೆ ಬೇಕಾದರೂ ಹೋಗು ಎನ್ನುತ್ತಾರೆ. ಸಮಾಜದಲ್ಲಿ ಪ್ರತಿಯೊಂದು ಕ್ಷಣದಲ್ಲಿಯೂ ಸಹ ವೈದ್ಯಕೀಯ ಶಿಕ್ಷಣ ಓದಿದ ವ್ಯಕ್ತಿಯ ಪ್ರಾಮುಖ್ಯತೆ

ಇದೆ. ಅಂತಹ ಪ್ರಾಮುಖ್ಯತೆ ಈ ವೃತ್ತಿಗೆ ಇರುವಾಗ, he should be very perfect in his profession. ಇಂಜಿನಿಯರಿಂಗ್ ಪದವಿಯನ್ನು ಓದಿದ ವ್ಯಕ್ತಿಯು ನಕ್ಷೆಯನ್ನು ಹಾಕಿ ಕಟ್ಟಡಗಳನ್ನು ಕಟ್ಟಿಸುವಂತಹ ವೃತ್ತಿ ಇದಲ್ಲ. ಇದು ಬಹಳ ಪ್ರಾಮುಖ್ಯತೆಯುಳ್ಳ ವೃತ್ತಿಯಾಗಿದೆ. ನಮ್ಮ ಶರೀರದಂತಹ ಕಟ್ಟಡವನ್ನು ನೋಡಿ, ಅದು ಪುನ: ಪರಿಪಕ್ವವಾಗಿ ನಡೆಯುವಂತಹ ಕೆಲಸವನ್ನು ಮಾಡುವುದಕ್ಕಾಗಿಯೇ ವೈದ್ಯರುಗಳಿರುವುದು. ಅದಕ್ಕಾಗಿಯೇ ನೀವು ವಿಧೇಯಕದಲ್ಲಿ ಬದಲಾವಣೆಯನ್ನು ತೆಗೆದುಕೊಂಡು ಬಂದಿದ್ದೀರಿ ಎಂಬುದು ನನ್ನನಿಸಿಕೆಯಾಗಿದೆ. ಆ ನಿಟ್ಟಿನಲ್ಲಿ ವೈದ್ಯರುಗಳು ಎಂ.ಬಿ.ಬಿ.ಎಸ್. ಉತ್ತೀರ್ಣಗೊಂಡ ನಂತರ ಕೂಡಲೇ ಪ್ರಮಾಣ ವಚನವನ್ನು ಮಾಡುತ್ತಾರೆ. ಸದರಿ ಪ್ರಮಾಣ ವಚನದಲ್ಲಿ ಪ್ರತಿಯೊಬ್ಬ ವ್ಯಕ್ತಿಯ ಜೀವನವನ್ನು ಉಳಿಸುವುದಕ್ಕೆ ಅವಶ್ಯಕವಾದ, ತನ್ನ ಸ್ವಾರ್ಥವನ್ನು ಬಿಟ್ಟು ಪರಮಾರ್ಥದ ಚಿಂತೆಯಲ್ಲಿ ನಾನು ದುಡಿಯುತ್ತೇನೆ ಎಂಬುದಾಗಿ ಹೇಳುತ್ತಾರೆ. ಇಂತಹ ವೃತ್ತಿಯನ್ನು ನಾವು ಬಹಳ ಎತ್ತರದ ಸ್ಥಾನದಿಂದ ನೋಡುತ್ತೇವೆ. ತಾವು ಪ್ರಸ್ತುತ ವಿಧೇಯಕದಲ್ಲಿ ತಂದಿರುವಂತಹ ಬದಲಾವಣೆ, ತಿದ್ದುಪಡಿಗಳು, it has to be really welcomed. ಅವುಗಳನ್ನು ನಾವು ಸ್ವಾಗತ ಮಾಡುತ್ತೇವೆ. ಆದರೆ, ಹಳೆಯ ವೈದ್ಯರುಗಳು ತಮ್ಮ ತಮ್ಮ ಶಕ್ತಿಗಳಿಗನುಗುಣವಾಗಿ ಎಲ್ಲಿಯೋ ಒಂದು ಕಡೆ ತಮ್ಮ ವೃತ್ತಿಯನ್ನು ಅಭ್ಯಾಸ ಮಾಡುತ್ತಿರುತ್ತಾರೆ. ಎಲ್ಲಾ ವೈದ್ಯರುಗಳು ಎಂ.ಎಸ್., ಪಿ.ಹೆಚ್.ಡಿ.ಯನ್ನು ಮಾಡಬೇಕೆಂಬ ನಿಯಮವಿಲ್ಲ. ತಮ್ಮ ವೃತ್ತಿ ಜೀವನದಲ್ಲಿ ಸಮಯ, ಅವಕಾಶ ದೊರೆತಾಗ ಅವುಗಳನ್ನು ಓದಿಕೊಂಡಿರುತ್ತಾರೆ. ಕೆಲವರು Registered Medical Practitioners (RMP) ಆಗಿದ್ದು, ವೈದ್ಯಕೀಯ ವೃತ್ತಿಯನ್ನು ಅಭ್ಯಾಸ ಮಾಡಿಕೊಂಡಿರುತ್ತಾರೆ. ಎಂ.ಬಿ.ಬಿ.ಎಸ್.ನ್ನು ಪೂರ್ಣಗೊಳಿಸಿರುವವರು ತಮ್ಮದೇ ಆದ ರೀತಿಯಲ್ಲಿ ಸೇವೆಯನ್ನು ಮಾಡುತ್ತಿರುತ್ತಾರೆ. ಆದ್ದರಿಂದ ಅಂತಹವರುಗಳ ಬಗ್ಗೆಯೂ ಸಹ ತಮ್ಮ ಕಾಳಜಿಯನ್ನು ತೋರಿಸಿ, ಪ್ರಸ್ತುತ ವಿಧೇಯಕವನ್ನು ಅಂಗೀಕಾರ ಮಾಡಿಕೊಡಿ ಎಂದು ನಾನು ಕೇಳುತ್ತೇನೆ.

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಕರ್ನಾಟಕ ವೈದ್ಯಕೀಯ ನೋಂದಣಿ (ತಿದ್ದುಪಡಿ) ವಿಧೇಯಕ, 2017 ನ್ನು ಸ್ವಾಗತ ಮಾಡುತ್ತಾ, ಸಾಕಷ್ಟು ವಿಷಯಗಳ ಬಗ್ಗೆ ಮಾನ್ಯ ಸದಸ್ಯರುಗಳು ಬೆಳಕನ್ನು ಚೆಲ್ಲಿದ್ದಾರೆ. ನಮ್ಮ ರಾಜ್ಯದಲ್ಲಿ ಒಟ್ಟು ಎಷ್ಟು ಜನ ವೈದ್ಯರಿದ್ದಾರೆ?

**ಸಭಾಪತಿಯವರು:-** ಈ ವಿಚಾರ ಈಗ ಬೇಡ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ:-** ಮಾನ್ಯ ಸಭಾಪತಿಯವರೆ, ಈ ಅಂಶದ ಬಗ್ಗೆ ಮಾನ್ಯ ಸಚಿವರು ಉತ್ತರವನ್ನು ಕೊಡಲಿ. ಇದಕ್ಕೆ ಕಾರಣವೇನೆಂದು ನಾನು ಹೇಳುತ್ತೇನೆ. ಮಾನ್ಯ ಸದಸ್ಯರಾದ ಶ್ರೀ ವಿ.ಎಸ್.ಉಗ್ರಪ್ಪರವರು ಮಾತನಾಡುವಂತಹ ಸಂದರ್ಭದಲ್ಲಿ ಒಂದು ವಿಷಯವನ್ನು ಉಲ್ಲೇಖ ಮಾಡಿದರು. ವೈದ್ಯರುಗಳು ತಮ್ಮ ನೋಂದಣಿಯನ್ನು ನವೀಕರಿಸುವಂತಹ ಸಂದರ್ಭದಲ್ಲಿ, general practitioners ಗೆ Continuing Medical Education Programme (CME) ಮಾಡುವುದಕ್ಕೆ ಅವಕಾಶವಿದೆಯೇ? ಮಾನ್ಯ ಸಚಿವರು ಈ ಅಂಶಗಳನ್ನು ದಯವಿಟ್ಟು ಗಮನಿಸಬೇಕು. ಸರ್ಕಾರವು ವೈದ್ಯರುಗಳು CME ಮಾಡುವುದರ ಬಗ್ಗೆ ತನ್ನ ಧೋರಣೆಯನ್ನು ಸ್ಪಷ್ಟಪಡಿಸಬೇಕು ಎನ್ನುವುದು ನನ್ನ ಉದ್ದೇಶವಾಗಿದೆ.

ಎರಡನೇಯ ವಿಚಾರವೆಂದರೆ, CME ಮಾಡುವುದನ್ನೆ ಮುಂದಿಟ್ಟುಕೊಂಡು ದುರ್ಬಳಕೆ ಮಾಡುವಂತಹ ಕೆಲಸವಾಗಬಾರದು ಎನ್ನುವುದೂ ಸಹ ನಮ್ಮ ಉದ್ದೇಶವಾಗಿದೆ. CME ಬಗ್ಗೆ, ವೈದ್ಯರುಗಳ ಬಗ್ಗೆ ತಾವು ಸ್ಪಷ್ಟೀಕರಣ ಕೊಡಬೇಕು. ರಾಜ್ಯದಲ್ಲಿ ಒಟ್ಟು ಎಷ್ಟು ಜನ ವೈದ್ಯರಿದ್ದಾರೆ? ಅವರುಗಳಿಗೆ CME ಮಾಡುವುದಕ್ಕೆ ಸರ್ಕಾರ ಏನು ವ್ಯವಸ್ಥೆಯನ್ನು ಮಾಡುತ್ತದೆ? ಈ ಎರಡೂ ಅಂಶಗಳ ಬಗ್ಗೆ ಉತ್ತರಿಸಬೇಕೆಂದು ತಮ್ಮ ಮೂಲಕ ನಾನು ಸರ್ಕಾರವನ್ನು ಕೇಳುವುದಕ್ಕೆ ಬಯಸುತ್ತೇನೆ.

ಮತ್ತೊಂದು ವಿಚಾರವೇನೆಂದರೆ, ವ್ಯಕ್ತಿಯೊಬ್ಬ ವೈದ್ಯನಾಗಿರುತ್ತಾನೆ, he is not a registered medical practitioner or his registration is not renewed, in such an event, during emergency, whether can he practice? ಇದರ ಬಗ್ಗೆಯೂ ಸಹ ಸರ್ಕಾರ ಸ್ಪಷ್ಟೀಕರಣವನ್ನು ಕೊಡಬೇಕೆಂದು ಕೇಳುತ್ತೇನೆ.

**ಡಾ॥ ಶರಣಪ್ರಕಾಶ್ ಆರ್.ಪಾಟೀಲ್ (ವೈದ್ಯಕೀಯ ಶಿಕ್ಷಣ ಸಚಿವರು):-** ಮಾನ್ಯ ಸಭಾಪತಿಯವರೆ, ಈಗ ನನಗೆ ಸಂತೋಷವಾಗುತ್ತಿದೆ ಏಕೆಂದರೆ, ನಾವು ಇಲ್ಲಿ ಸಾರ್ವಜನಿಕ ಹಿತಾಸಕ್ತಿಯ ಮೇರೆಗೆ ತಂದಿರುವಂತಹ ವಿಧೇಯಕದ ಮೇಲೆ ನಮ್ಮ ಇಷ್ಟೊಂದು ಜನ ಸದಸ್ಯರುಗಳು ಆಸಕ್ತಿ ವಹಿಸಿ, ಚರ್ಚೆಯಲ್ಲಿ ಪಾಲ್ಗೊಂಡು, ತಮ್ಮ ಸಲಹೆ-ಸೂಚನೆಗಳನ್ನು ಕೊಟ್ಟಿದ್ದಾರೆ. ಮೊದಲನೆಯದಾಗಿ ನಾನು ಅವರೆಲ್ಲರಿಗೂ ಅಭಿನಂದಿಸುತ್ತೇನೆ. ವಿಶೇಷವಾಗಿ ಮಾನ್ಯ ಸದಸ್ಯರಾದ ಶ್ರೀ ಕೆ.ಟಿ.ಶ್ರೀಕಂಠೇಗೌಡರಿಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಏಕೆಂದರೆ, ಅವರು ಒಂದು ಮಾತನ್ನು ಹೇಳಿದ್ದಾರೆ. ಪ್ರಸ್ತುತ ಅವರು ಸದನದಲ್ಲಿಲ್ಲ. ಅದೇನೆಂದರೆ, ಈ ವಿಧೇಯಕದ ಬಗ್ಗೆ ಮುಂಚಿತವಾಗಿಯೇ ತಿಳಿಸಬೇಕಾಗಿತ್ತು ಎಂಬುದಾಗಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೇಳಿದರು. ತಮಗೂ ಗೊತ್ತಿರುವ ವಿಚಾರವೇನೆಂದರೆ, ನಾನು ನಿನ್ನೆಯ ದಿವಸ ಬಂದು ವಿನಂತಿಯನ್ನು ಮಾಡಿದ್ದೇನೆ. ಪ್ರಸ್ತುತ ವಿಧೇಯಕವನ್ನು ನಾನು ಇವತ್ತಿನ ದಿವಸದ ಕಾರ್ಯಕಲಾಪಗಳ ಪಟ್ಟಿಯಲ್ಲಿ ಸೇರಿಸಲು ಬಹಳ ಪ್ರಯತ್ನವನ್ನು ಪಟ್ಟೆನು. ಆದರೆ, ಯಾವುದೋ ಒಂದು ಸಣ್ಣ ತೊಂದರೆಯಿಂದಾಗಿ ಆ ಮುದ್ರಣಾಲಯದಲ್ಲಿ ನಿನ್ನೆಯ ದಿವಸ ಕೆಲಸ ಪೂರ್ಣಗೊಳ್ಳಲಿಲ್ಲ. ಇಲ್ಲವೆಂದರೆ, I would have see to it that the Bill would reach the Members of this House. ಮಾನ್ಯ ಸದಸ್ಯರುಗಳಿಗೆ ರಾತ್ರಿಯಾದರೂ ಸರಿ ವಿಧೇಯಕದ ಪ್ರತಿಗಳನ್ನು ಒದಗಿಸಬೇಕೆಂದು ನಮ್ಮ ಶಾಖೆಯ ಎಲ್ಲಾ ಸಿಬ್ಬಂದಿ ವರ್ಗದವರು ಬಹಳ ಪ್ರಯತ್ನಗಳನ್ನು ಪಟ್ಟರು. ನಿನ್ನೆಯ ದಿವಸ ಮುದ್ರಣಾಲಯದಲ್ಲಿ ಕೆಲಸವಾಗಲಿಲ್ಲ. ಅದು ಇವತ್ತು ಬೆಳಿಗ್ಗೆ ಪೂರ್ಣಗೊಂಡಿದೆ. ಅದಕ್ಕಾಗಿ ನಾನು ಈ ಸದನದಲ್ಲಿ ವಿಷಾದವನ್ನು ವ್ಯಕ್ತಪಡಿಸುತ್ತೇನೆ.

ಮಾನ್ಯ ಶ್ರೀ ಕೆ.ಟಿ.ಶ್ರೀಕಂಠೇಗೌಡರು 'six credit hours' ಸ್ವಲ್ಪ ಜಾಸ್ತಿಯಾಗುತ್ತದೆ ಹಾಗೂ ನೋಂದಣಿಯನ್ನು ನವೀಕರಿಸುವುದು ಐದು ವರ್ಷಕ್ಕಿದ್ದರೂ ಪರವಾಗಿಲ್ಲ ಎಂಬುದಾಗಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಮಾನ್ಯ ಸದಸ್ಯರುಗಳಾದ ಶ್ರೀ ಬಸನಗೌಡ ಆರ್.ಪಾಟೀಲ್ (ಯತ್ನಾಳ್), ಶ್ರೀ ಶರಣಪ್ಪ ಮಟ್ಟೂರ, ಶ್ರೀ ರಿಜ್ವಾನ್ ಅರ್ಷದ್, ಶ್ರೀ ಆರ್.ಪ್ರಸನ್ನ ಕುಮಾರ್ ರವರುಗಳು ವಿಧೇಯಕವನ್ನು ಸ್ವಾಗತ ಮಾಡಿದ್ದಾರೆ. ಅವರುಗಳಿಗೆ ಧನ್ಯವಾದಗಳನ್ನು ಹೇಳಬಯಸುತ್ತೇನೆ. ಶ್ರೀ ವಿ.ಎಸ್.ಉಗ್ರಪ್ಪ ರವರು ವಿಧೇಯಕದ ಒಂದು ಭಾಗವನ್ನು ಸ್ವಾಗತ ಮಾಡಿ, ಮತ್ತೊಂದು ಭಾಗದಲ್ಲಿ ತಮ್ಮ apprehension raise ಮಾಡಿದ್ದಾರೆ.

ನಾನು ಇಲ್ಲಿ ಒಂದು ವಿಚಾರವನ್ನು ಸ್ಪಷ್ಟಪಡಿಸುವುದಕ್ಕೆ ಇಚ್ಛಿಸುತ್ತೇನೆ. ಅದೇನೆಂದರೆ, ಇಲ್ಲಿ General Practitioners ಗಳಾಗಲೀ, Specialists ಗಳಾಗಲೀ, Super Specialists ಗಳಾಗಲೀ ಯಾರೇ ಆಗಲೀ, ಇವತ್ತಿನ ದಿವಸ General Practitioners ಗಳಿಗೆಯೇ ಪ್ರಸ್ತುತ ವಿಧೇಯಕದ ಬಹಳ ಅವಶ್ಯಕತೆಯಿದೆ. Specialists and Super Specialistsರವರುಗಳು ತಮ್ಮ ತಮ್ಮ ವಿಭಾಗಗಳ conferences.. , ನಮ್ಮ ಸ್ನೇಹಿತರುಗಳು ಈ ವಿಷಯವನ್ನು ಇಲ್ಲಿ ಪ್ರಸ್ತಾಪ ಮಾಡಿದ್ದಾರೆ. ಅದೇನೆಂದರೆ, ಅಷ್ಟೊಂದು ಸಂಖ್ಯೆಯಲ್ಲಿ conferences ನಡೆಯುತ್ತವೆಯೇ? ಎಂಬುದಾಗಿರುತ್ತದೆ. ಬಹಳಷ್ಟು conferences ನಡೆಯುತ್ತವೆ. ಅದಕ್ಕೆ ಏನೂ ತೊಂದರೆಯಿಲ್ಲ. ಬೇಕಾದಲ್ಲಿ ಇದಕ್ಕೆ ಸಂಬಂಧಪಟ್ಟ ಅಂಕಿ ಅಂಶಗಳನ್ನು ನಾನು ಒದಗಿಸುತ್ತೇನೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

Number of CMEs ಮತ್ತು CME ಗಳನ್ನು ಆಯೋಜಿಸುವ ಜವಾಬ್ದಾರಿಗಳನ್ನು ತೆಗೆದುಕೊಳ್ಳುತ್ತೀರಾ ಎಂಬುದಾಗಿಯೂ ಸಹ ಕೇಳಿದ್ದಾರೆ. Invariably CMEs are conducted. Then General practitioners can attend any CME, any workshop or any conference ಇದರಲ್ಲಿ ಯಾವುದೇ ರೀತಿಯ ನಿರ್ಬಂಧಗಳಿಲ್ಲ. ಅವರುಗಳಿಗೆ ಸಂಬಂಧಪಟ್ಟ ವಿಷಯಗಳಿಗೇ ಮಾತ್ರವೇ ಹೋಗಬೇಕೆಂಬ ನಿಯಮವಿಲ್ಲ. One can attend any of the scientific sessions, medical conferences, workshops, CMEs, seminars. ಯಾವುದೇ ರೀತಿಯ ಕಾರ್ಯಕ್ರಮಗಳಿರಬಹುದು. ಇದಕ್ಕಾಗಿ ನಾನು ಸದನಕ್ಕೆ ಒಂದು ಭರವಸೆಯನ್ನು ಕೊಡಬಯಸುತ್ತೇನೆ, ಅದೇನೆಂದರೆ, sufficient number of scientific sessions are being held. ಅಂತಹ ಕಾರ್ಯಕ್ರಮಗಳು ಆಗದೇ ಇದ್ದಿದ್ದರೆ, I would not have brought this Bill. It would not be a necessity. ಅಲ್ಲಿ ಆಗದೇ ಇರುವಂತಹ ಕಾರ್ಯಕ್ರಮಗಳಿಗೆ ನಾನು ಇಲ್ಲಿ ಸೃಷ್ಟಿ ಮಾಡುವಂತಹ ಉದ್ದೇಶವೇ ಇರಲಿಲ್ಲ. ಭ್ರಷ್ಟಾಚಾರದ ಪ್ರಶ್ನೆಯೆ ಇಲ್ಲಿ ಉದ್ಭವಿಸುವುದಿಲ್ಲ. ಏಕೆಂದರೆ, ಅಲ್ಲಿಂದ ಯಾವುದೇ ರೀತಿಯಲ್ಲಿ ನಕಲು ಪ್ರಮಾಣ ಪತ್ರವನ್ನು ತರುವುದಕ್ಕಾಗುವುದಿಲ್ಲ. ಏಕೆಂದರೆ, scientific sessions ನಡೆದಾಗ there will be lot of exposure, ಅಲ್ಲಿ ನೋಂದಣಿಗಳಾಗುತ್ತವೆ. There will be scientific sessions. ಹಾಗಾಗಿ ಯಾರೂ ಸುಮ್ಮನೇ ಕಾರ್ಯಕ್ರಮಗಳಿಗೆ ಹೋಗದೇ ಕಾರ್ಯಕ್ರಮದಲ್ಲಿ ಭಾಗವಹಿಸಿರುವುದಾಗಿ ನಕಲು ಪ್ರಮಾಣ ಪತ್ರವನ್ನು ಕೊಡುವುದಕ್ಕಾಗುವುದಿಲ್ಲ. That practice is not there as far as my knowledge is concerned. ಈ ರೀತಿಯ ಆಂತಕವನ್ನು ಪಡುವ ಅವಶ್ಯಕತೆಯಿಲ್ಲ. ಈ ರೀತಿಯಾಗಿ ಯಾವುದೇ ಪ್ರಸಂಗಗಳಾಗುವುದಿಲ್ಲ. ಆದರೆ, ಅವರ apprehension ಏನೆಂದರೆ, whether General Practitioners can attend any of the scientific sessions? General Practitioners can attend any of the scientific sessions, medical conferences, workshops, seminars, CMEs. I assure you ಇವತ್ತಿನ ದಿವಸ ಒಂದು ವೇಳೆ ಆ ರೀತಿಯ ಕೊರತೆಗಳೆನಾದರೂ ಇದ್ದರೆ, Karnataka Medical Council ನ ವತಿಯಿಂದ ಅಗತ್ಯವಾಗಿರುವಂತಹ ಎಲ್ಲಾ CME ಗಳನ್ನು ಆಯೋಜಿಸುವುದಕ್ಕೆ ಎಲ್ಲಾ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ರೀತಿಯ ವ್ಯವಸ್ಥೆಗಳನ್ನು ನಾನು ಮಾಡುತ್ತೇನೆ. This is my assurance to the House. Because in future, ಯಾವುದೇ ಕಾರ್ಯಕ್ರಮಗಳಿಲ್ಲದೇ ಈ ರೀತಿಯಾಗಿ ಒಂದು ಭೂತವನ್ನು ಸೃಷ್ಟಿ ಮಾಡುತ್ತಿದ್ದಾರೆ ಎನ್ನುವಂತಹ apprehension ಯಾರ ಮೇಲೂ ಇರಬಾರದು ಎನ್ನುವ ಕಾರಣಕ್ಕಾಗಿ I am assuring this House and I will give appropriate direction to the Karnataka Medical Council.

ಮಾನ್ಯ ಸದಸ್ಯರಾದ ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ ರವರು ಕೇಳಿರುವಂತೆ ಇಲ್ಲಿಯವರೆಗೆ ನಮ್ಮ ರಾಜ್ಯದಲ್ಲಿ 1,16,000 ಜನ ವೈದ್ಯರುಗಳು ನೋಂದಣಿ ಮಾಡಿದ್ದಾರೆ. ಆ ಪೈಕಿ 20,000 ವೈದ್ಯರುಗಳು ರಾಜ್ಯವನ್ನು ಬಿಟ್ಟುಹೋಗಿದ್ದಾರೆ. 10,000 ವೈದ್ಯರುಗಳು ವಿದೇಶಕ್ಕೆ ಹೋಗಿದ್ದಾರೆ. ಹೀಗಾಗಿ ನಮ್ಮಲ್ಲಿನ ಒಟ್ಟು ನೋಂದಣಿ ಸುಮಾರು ಒಂದು ಲಕ್ಷದಷ್ಟಿರುತ್ತದೆ. ಆ ಪೈಕಿ ಕೆಲವು ವೈದ್ಯರುಗಳು ಹೊರ ರಾಜ್ಯಗಳಿಂದ ಬಂದು ಇಲ್ಲಿ ಶಿಕ್ಷಣವನ್ನು ಪೂರ್ಣಗೊಳಿಸಿ, ತಮ್ಮ ತಮ್ಮ ರಾಜ್ಯಗಳಿಗೆ ಹಿಂದಿರುಗಿರುತ್ತಾರೆ. ಕೆಲವು ವೈದ್ಯರುಗಳು ವಿದೇಶಕ್ಕೆ ತೆರಳಿರುತ್ತಾರೆ ಹಾಗೂ ಇನ್ನೂ ಕೆಲವರು ತೀರಿಕೊಂಡಿರುತ್ತಾರೆ. ಹೀಗಾಗಿ ಬಹಳ ಪ್ರಮುಖವಾದ ವಿಚಾರವೇನೆಂದರೆ, ನಮ್ಮ register should be a live register, ಒಂದು ಬಾರಿ ಶಾಶ್ವತವಾಗಿ ನೋಂದಣಿ ಮಾಡಿಸಿದರೆ, that will be a dead register. That will not be updated. That will become redundant. Whenever there is any emergency and whenever we come across such instances, ಯಾವುದೇ ಸಂದರ್ಭದಲ್ಲಿ ಒಬ್ಬ ವೈದ್ಯರ ಬಗ್ಗೆ ಹೇಳಬೇಕೆಂದರೆ, ಅವರ ಬಗ್ಗೆ ನಮಗೆ ಗೊತ್ತಿರುವುದಿಲ್ಲ. We are modernising it. Totally online ಆಗಿದೆ. ಬೆರಳ ತುದಿಯ ಮೇಲೆ all the information will be available with biometric and nobody can be impersonated. ಈ ಬಗ್ಗೆ ನಮಗೆ ವಿಧಾನಸಭೆಯಲ್ಲಿ ಆಧಾರ್ ಕಾರ್ಡ್‌ನ್ನು ಕಡ್ಡಾಯವಾಗಿ ಲಿಂಕ್‌ಮಾಡಿ ಎಂಬ ಒಂದು ಒಳ್ಳೆಯ ಸಲಹೆಯನ್ನು ಕೊಟ್ಟಿದ್ದಾರೆ and I have agreed for it. I will give a direction to the KMC to link the information with respective Aadhar cards. ಹೀಗಾಗಿ ಇದರಲ್ಲಿ ಏನೂ . . .

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ:–** ಮಾನ್ಯ ಸಭಾಪತಿಯವರೆ, online registration ಮಾಡುತ್ತೀರಲ್ಲವೇ?

**ಡಾ॥ ಶರಣಪ್ರಕಾಶ್ ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೆ, ಹೌದು ಮಾಡುತ್ತೇವೆ. ಪ್ರಸ್ತುತ ಬೆಂಗಳೂರು ನಗರದ ಜೊತೆಗೆ ಬೇರೆ ಬೇರೆ ಪ್ರದೇಶಗಳಲ್ಲಿಯೂ ಸಹ provide ಮಾಡಿದ್ದಾರೆ. I will give a direction to the KMC to provide this facility as far as possible. ಏಕೆಂದರೆ, ಈಗ ಬೇರೆ ಬೇರೆ ಕಡೆ ನೋಂದಣಿ ಮಾಡಿಸುತ್ತಿದ್ದಾರೆ.

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ:–** ಮಾನ್ಯ ಸಭಾಪತಿಯವರೆ, ಇದರಿಂದಾಗಿ ದುರ್ಬಳಕೆಯೂ ತಪ್ಪುತ್ತದೆ.

**ಡಾ॥ ಶರಣಪ್ರಕಾಶ್ ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೆ, ದುರ್ಬಳಕೆ ಆಗುವುದಿಲ್ಲ. I am trying to eliminate all the exploitations. ದುರ್ಬಳಕೆ ಆಗಲಾರದ ಹಾಗೆ we will take all precautions. We are open for suggestions. Even though KMC is an independent body, Government has got every right to give them directions in public interest and they have to abide by it. Whatever apprehensions the Members have expressed, I will protect such interests. ಈ ವಿಧೇಯಕವು ಮೂಲತ: ಮಾನ್ಯ ಸದಸ್ಯರು ಒಂದು apprehension ಹೇಳಿದರು.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೆ, ಆರು ಪ್ರಶಂಸಾರ್ಹ ಗಂಟೆಗಳಿಗೆ ....

**ಡಾ॥ ಶರಣಪ್ರಕಾಶ್ ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೆ, ನಾನು ಮಾನ್ಯ ಶ್ರೀಕಂಠೇಗೌಡರಿಗೆ ಒಂದು ಆಶ್ವಾಸನೆಯನ್ನು ಕೊಡಬಯಸುತ್ತೇನೆ. ಆರು ಪ್ರಶಂಸಾರ್ಹ ಗಂಟೆಗಳು ಮಾಡುವುದಕ್ಕೆ ಎಷ್ಟು CMEs, seminars ಮಾಡಬೇಕೋ ಅಷ್ಟನ್ನು ಕಡ್ಡಾಯವಾಗಿ ಮಾಡತಕ್ಕಂತಹ ವ್ಯವಸ್ಥೆಯನ್ನು ಮಾಡುತ್ತೇವೆ.

(ಮುಂದು) . . .

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(433) 24.03.2017 12.50 MGN-BNS

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಸನ್ಮಾನ್ಯ ಸಭಾಪತಿಯವರೇ, ಒಂದು ತಾಲ್ಲೂಕಿನಲ್ಲಿ ಸುಮಾರು 15 – 20 ಡಿಗ್ರಿ ಕಾಲೇಜ್‌ಗಳಿರುತ್ತವೆ. Compulsory Seminars ನ್ನು ನಾವು conduct ಮಾಡುತ್ತಿರುತ್ತೇವೆ. ಆದರೆ ಮೆಡಿಕಲ್ ಕಾಲೇಜ್‌ಗಳ ಸಂಖ್ಯೆ ಎಷ್ಟಿದೆ? ನೀವು ಎಲ್ಲಿ conferences ಮಾಡುತ್ತೀರಿ? ಅವುಗಳನ್ನು ಹೇಗೆ ಮಾಡುವುದಕ್ಕಾಗುತ್ತದೆ? ಅದು ಕಷ್ಟವಾಗುತ್ತದೆ, it is very difficult ಎನ್ನುವ ವಿಚಾರವನ್ನು ನಾನು ಹೇಳುತ್ತಿದ್ದೇನೆ.

**ಶ್ರೀ ವಿ.ಎಸ್.ಉಗ್ರಪ್ಪ(ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ಸೆಕ್ಷನ್ 3 ರಲ್ಲಿ ಹೇಗೆ revenue division wise ಮಾಡಿದ್ದಾರೆ, ಅದೇರೀತಿ ಈ ವಿಚಾರದಲ್ಲಿ ಕೂಡ ವರ್ಷದಲ್ಲಿ ಎರಡು ಬಾರಿ revenue division wise ಏನಾದರೂ ಪ್ರೋಗ್ರಾಮ್‌ಗಳನ್ನು ಸರ್ಕಾರ ಅಥವಾ ಮೆಡಿಕಲ್ ಕೌನ್ಸಿಲ್‌ನಿಂದ ನಡೆಸಬೇಕಾಗುತ್ತದೆ. ಏಕೆಂದರೆ ಮಾನ್ಯ ಸಚಿವರು ಬಹಳಷ್ಟು conferences ನಡೆಯುತ್ತವೆ ಎಂದು ಹೇಳುತ್ತಿದ್ದಾರೆ, ಆದರೆ ನನಗೆ ಸುಮಾರು 100ಕ್ಕೂ ಹೆಚ್ಚು ಜನ ವೈದ್ಯ ವೃತ್ತಿಯಲ್ಲಿರುವಂತಹ ಬಹಳ ಆತ್ಮೀಯ ಸ್ನೇಹಿತರಿದ್ದಾರೆ. ಆ conferences ನಲ್ಲಿ ಅವರನ್ನು allow ಮಾಡಬೇಕಾದರೆ ಅವರು ತಮ್ಮ subject ನ್ನು mention ಮಾಡಬೇಕಾಗುತ್ತದೆ. General Practitioners ಗೆ ಅಲ್ಲಿ ಪ್ರವೇಶ ಸಿಗುವುದಿಲ್ಲ. ಇದನ್ನು ತಾವು ದಯಮಾಡಿ ಗಮನಿಸಬೇಕಾಗುತ್ತದೆ. ಹಾಗಾದರೆ 2016ನೇ ಇಸವಿಯಲ್ಲಿ General Physicians ಅಂದರೆ, ಎಂ.ಬಿ.ಬಿ.ಎಸ್. ವೈದ್ಯರಿಗೆ ಯಾವ conference ನ್ನು ನಡೆಸಲಾಗಿದೆ ಎಂದು ದಯಮಾಡಿ ತಿಳಿಸಿ. ಹಾಗಾಗಿ ಸರ್ಕಾರ ಜವಾಬ್ದಾರಿ ತೆಗೆದುಕೊಂಡು division wise ಈ ರೀತಿ ಮಾಡುವುದಕ್ಕೆ provide ಮಾಡುವುದು ಸೂಕ್ತವೆನಿಸುತ್ತದೆ.

**ಶ್ರೀ ಎಸ್.ವಿ.ಸಂಕನೂರ:–** ಸನ್ಮಾನ್ಯ ಸಭಾಪತಿಯವರೇ, ವರ್ಷಕ್ಕೆ 6 credit hours ಬಹಳವಾಗುತ್ತದೆ. ಇದು ಸಾಧ್ಯವೇ ಇಲ್ಲ. ಏಕೆಂದರೆ, ಒಂದು ವರ್ಷದಲ್ಲಿ 6 credit hours

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಎಂದರೆ, 2 ತಿಂಗಳಿಗೊಮ್ಮೆ ಹೋಗಬೇಕಲ್ಲವೆ? How is it practically possible? ಇದು ಒಳ್ಳೆಯದಲ್ಲ, ಅದನ್ನು ಕಡಿಮೆ ಮಾಡಿ.

**ಶ್ರೀ ಶರಣಪ್ರಕಾಶ ಆರ್.ಪಾಟೀಲ್:–** ಮಾನ್ಯ ಉಗ್ರಪ್ಪನವರೇನು apprehension ವ್ಯಕ್ತಪಡಿಸಿದ್ದಾರೆ, ಆ ಬಗ್ಗೆ ಮಾನ್ಯ ಶ್ರೀಕಂಠೇಗೌಡರು ಸಹ ತಿಳಿಸಿದ್ದಾರೆ. ಈ ಬಗ್ಗೆ ನಾನು Karnataka Medical Council (KMC) ಗೆ ನಿರ್ದೇಶನವನ್ನು ಕೊಡುತ್ತೇನೆ. ಅವರು ಕಡ್ಡಾಯವಾಗಿ revenue division wise ಇಷ್ಟು ಎಂದು provision ಮಾಡಿಕೊಂಡ ಮೇಲೆ ಅದರಂತೆ ನಡೆಸಬೇಕು, ಇಲ್ಲವೆಂದರೆ, ಅದನ್ನು KMC ನಡೆಸಬೇಕು ಎನ್ನುವ ನಿರ್ದೇಶನವನ್ನು ನಾನು ಕೊಡುತ್ತೇನೆ. ಮಾನ್ಯ ಎಸ್.ವ್ಹಿ.ಸಂಕನೂರ ಅವರು ವರ್ಷಕ್ಕೆ 'six credit hours' ಕಷ್ಟವಾಗುತ್ತದೆ ಎನ್ನುವಂತಹ ವಿಚಾರವನ್ನೇನು ತಿಳಿಸಿದ್ದಾರೆ, ...

**Sri S.V.SANKANUR:-** One credit hour is equal to four hours. Therefore, six credit hours means it is 24 hours.

**ಶ್ರೀ ಶರಣಪ್ರಕಾಶ ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, four hours ಎಂದರೆ, minimum that much ಒಂದು conference ನಡೆದಾಗ minimum ಅಷ್ಟು ಇದ್ದೇ ಇರುತ್ತದೆ. ಒಂದು ವರ್ಷದಲ್ಲಿ 6 credit hours ಎಂದರೆ, ಅದೇನೂ ಹೆಚ್ಚೆನಿಸುವುದಿಲ್ಲ. Medical practitioners will invariably attend it. ಕನಿಷ್ಟಪಕ್ಷ ನಾಲ್ಕೈದನ್ನು ಅವರು attend ಮಾಡಿಯೇ ಮಾಡುತ್ತಾರೆ, ಒಂದೆರಡು extra ಇದೆ ಅಷ್ಟೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

"ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2017ರ ಕರ್ನಾಟಕ ವೈದ್ಯಕೀಯ ನೋಂದಣಿ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

<u>ಪ್ರಸ್ತಾವ ಅಂಗೀಕರಿಸಲ್ಪಟ್ಟಿತು</u>

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು**

**ಖಂಡ 2 ಮತ್ತು 3**

**ಸಭಾಪತಿಯವರು:–** "ಖಂಡ 2 ಮತ್ತು 3 ಈ ವಿಧೇಯಕದ ಅಂಗವಾಗಿರುತ್ತದೆ."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಖಂಡ 2 ಮತ್ತು 3ನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಖಂಡ 1 ಇತ್ಯಾದಿ**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಪ್ರಸ್ತಾವದ ಅಂಗೀಕಾರ**

**ಶ್ರೀ ಶರಣಪ್ರಕಾಶ ಆರ್.ಪಾಟೀಲ್(ವೈದ್ಯಕೀಯ ಶಿಕ್ಷಣ ಸಚಿವರು):–** ಮಾನ್ಯ ಸಭಾಪತಿಯವರೇ, "ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2017ರ ಕರ್ನಾಟಕ ವೈದ್ಯಕೀಯ ನೋಂದಣಿ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

"ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2017ರ ಕರ್ನಾಟಕ ವೈದ್ಯಕೀಯ ನೋಂದಣಿ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಆ) ಕರ್ನಾಟಕ ವೃತ್ತಿ ಶಿಕ್ಷಣ ಸಂಸ್ಥೆಗಳ (ಪ್ರವೇಶ ನಿಯಂತ್ರಣ ಮತ್ತು ಶುಲ್ಕ ನಿಗದಿ) (ತಿದ್ದುಪಡಿ) ವಿಧೇಯಕ, 2017**

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ಬಸವರಾಜ ರಾಯರೆಡ್ಡಿ(ಉನ್ನತ ಶಿಕ್ಷಣ ಸಚಿವರು):–** ಮಾನ್ಯ ಸಭಾಪತಿಯವರೇ, 2017ರ ಕರ್ನಾಟಕ ವೃತ್ತಿ ಶಿಕ್ಷಣ ಸಂಸ್ಥೆಗಳ (ಪ್ರವೇಶ ನಿಯಂತ್ರಣ ಮತ್ತು ಶುಲ್ಕ ನಿಗದಿ) (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

**ಶ್ರೀ ಬಸವರಾಜ ರಾಯರೆಡ್ಡಿ(ಉನ್ನತ ಶಿಕ್ಷಣ ಸಚಿವರು):–** ಮಾನ್ಯ ಸಭಾಪತಿಯವರೇ, ಈ ವಿಧೇಯಕ ವೈದ್ಯಕೀಯ ಮತ್ತು ದಂತ ವೈದ್ಯಕೀಯ ಶಿಕ್ಷಣಕ್ಕೆ ಸಂಬಂಧಿಸಿದ್ದಾಗಿರುವುದರಿಂದ ನನ್ನ ಪರವಾಗಿ ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ವಿವರಣೆ ನೀಡಲಿದ್ದಾರೆ.

**ಸಭಾಪತಿಯವರು:–** ಆಗಲಿ, ಇಬ್ಬರಲ್ಲಿ ಯಾರಾದರೊಬ್ಬರು ಸಚಿವರು ವಿವರಣೆ ಕೊಡಬಹುದಾಗಿದೆ.

**ಡಾ:ಶರಣಪ್ರಕಾಶ ಆರ್.ಪಾಟೀಲ್(ವೈದ್ಯಕೀಯ ಶಿಕ್ಷಣ ಸಚಿವರು):–** ಮಾನ್ಯ ಸಭಾಪತಿಯವರೇ, ಇದು ಬಹಳ ಮಹತ್ವವಾಗಿರುವಂತಹ ವಿಧೇಯಕವಾಗಿದ್ದು, ಈ ವಿಧೇಯಕವನ್ನು urgent ಆಗಿ ತರುವ ಅಗತ್ಯತೆ ಏನಿದೆ ಎಂದರೆ, counselling ಆಗಬೇಕಾಗಿದೆ. ಈಗಾಗಲೇ registration ಆಗುತ್ತಿದೆ. ತಕ್ಷಣವೇ ಈಗ counselling ನಡೆಯಲಿರುವುದರಿಂದ ಇದು ಸ್ವಲ್ಪ urgency ಇದೆ. ಇದರ ಬಗ್ಗೆ ನಾನು ಸಂಕ್ಷಿಪ್ತವಾಗಿ ವಿವರಣೆ ನೀಡಬಯಸುತ್ತೇನೆ. ತಮಗೆಲ್ಲರಿಗೂ ಗೊತ್ತಿರುವ ಪ್ರಕಾರ ರಾಜ್ಯದಲ್ಲಿ 2006ರಲ್ಲಿ ನಾವು The Karnataka Professional Educational Institutions (Regulation of Admission and Determination of Fee) Act, 2006 ನ್ನು ತಂದಿದ್ದೇವೆ. ನಮ್ಮ ರಾಜ್ಯದಲ್ಲಿ ವೈದ್ಯಕೀಯ ಶಿಕ್ಷಣವನ್ನು ಯಾವ ರೀತಿ ನಿಯಂತ್ರಣ ಮಾಡಬೇಕು, regulate ಮಾಡಬೇಕು ಎನ್ನುವಂತಹ ಉದ್ದೇಶದಿಂದ ಅದನ್ನು ಮಾಡಿದ್ದೆವು. ಆದರೆ ಬಹಳ ವರ್ಷಗಳ ಕಾಲ ಅದನ್ನು ಇಂಪ್ಲಿಮೆಂಟ್ ಮಾಡುವುದಕ್ಕೆ ನಮಗೆ ಸಾಧ್ಯವಾಗಲಿಲ್ಲ. 2006ರ ಕಾಯಿದೆಯನ್ನು ನಾವು abeyance ನಲ್ಲಿ ಇಟ್ಟು, consensual

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

agreement ಮುಖಾಂತರ ನಾವು admissions ಮಾಡಿಕೊಂಡು ಬಂದಿದ್ದೇವೆ. 2015ರಲ್ಲಿ ಇದೇ ಸದನದಲ್ಲಿ ಕೂಡ ನಾವು ಆ Act of 2006 ನ್ನು ಕೆಲವು ತಿದ್ದುಪಡಿಗಳೊಂದಿಗೆ ಅನುಷ್ಠಾನಗೊಳಿಸಿದ್ದೇವೆ.

**Dr. SHARANPRAKASH R. PATIL:** I will tell that also. ಈಗPG ಗೆ seat sharing ಎಂದು ಹೇಳಿದೆ, UG ಗೂ ಅಷ್ಟೆ ಹೇಳಿದೆ For PG, in COMED-K group, they are giving 33% of the seats to the State quota. The Minority institutions are giving 20% of the seat to the State quota. Deemed Universities ಕೊಡುತ್ತಾ ಇರಲಿಲ್ಲ. Now I have convinced them to give 25% and negotiations are going on. ಅವರು 25% ಕೊಡಲು ತಯಾರಾಗಿದ್ದಾರೆ. ಆದರೆ ಅದು ಇನ್ನು ಆಗಿಲ್ಲ.

**ಶ್ರೀ ಬಸವರಾಜ ರಾಯರೆಡ್ಡಿ(ಉನ್ನತ ಶಿಕ್ಷಣ ಸಚಿವರು)**:- ನೋಡಿ discussions, negotiations ಎಲ್ಲಾ ಆಗಬೇಕಾಗುತ್ತದೆ.

**ಡಾ: ಶರಣಪ್ರಕಾಶ್.ಆರ್.ಪಾಟೀಲ್**:- ಏಕೆಂದರೆ ಅದು 25% Apart from this, from all quota of institutions, I have reserved 30% for Karnataka students. Apart from the State quota, ಅವರು institution quota ದಲ್ಲಿಯೂ ಕೂಡಾ 30% for Karnataka students ಎಂದು ಮಾಡಿದ್ದೇವೆ. As such, the COMED-K is giving me 63% of the seats and in minority institutions (20 + 30), it is 50%. In COMED-K, I have already reserved 30% of the seats. ಈಗ ಇನ್ನು 25% ಕೊಟ್ಟರೆ that will also become 55%. You tell me, how am I behind other states. ಅವರು ಕೇರಳದಲ್ಲಿ ಹೀಗೆ ಇದೆ ಎಂದು ಹೇಳಿದರು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಕ್ಯಾಪ್ಟನ್ ಗಣೇಶ ಕಾರ್ಣಿಕ್:-** ಕರ್ನಾಟಕ ರಾಜ್ಯದಲ್ಲಿ post-graduationಗೆ ಎಷ್ಟು admission reserve ಆಗಿದೆ ಎಂದು ಕೇಳಿದ್ದೇನೆ.

**Dr. SHARANPRAKASH R. PATIL:** I am trying to make up 50%. This is a very complicated issue. ನಾವು ಒಂದು ಮಾಡಲು ಹೋದರೆ ಅದು ಇನ್ನೊಂದು ಆಗುತ್ತದೆ. Therefore, whatever best is in the interest of the students and in the interest of the State to maintain order and to maintain transparency, I have done everything. This is the best I could do. I can take over the whole thing and do but the only thing is I am worried about the Concession Fees. If the State tells, we don't want concession, ಎಲ್ಲವನ್ನು uniform ಮಾಡಿ ಎಂದರೆ, I am the happiest person. I want to do that. But I feel my State is not mature enough for that.

(Contd.)

(439) YL-AK 24.03.2017 1.50

**Dr. SHARANPRAKASH R. PATIL(contd.):**

Totally ಮಾಡಬೇಕೆಂಬುದಕ್ಕೆ ನಮ್ಮವರ್‍ಯಾರು agree ಆಗುತ್ತಿಲ್ಲ. I am for it. You see, merit and merit should be the only criteria. That is my intent. But ನಮಗೆ concession ಬೇಡ... concession ಬೇಡ. If I give over the concession, everybody will start portraying me as if I am against them. So whatever is best within the given circumstances, I have done my best in the interest... Except for the NRI management quota, I am doing counselling for all other seats on merit basis.

**ಸಭಾಪತಿಯವರು:-** ಪ್ರಶ್ನೆ ಏನೆಂದರೆ, ...

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೆ, ಒಂದು ನಿಮಿಷ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:–** ಮಾತನಾಡುವುದು ಇನ್ನು ಇದೆಯೇ?

**ಶ್ರೀ ವಿ.ಎಸ್.ಉಗ್ರಪ್ಪ:–** ಹೌದು ಮಾನ್ಯ ಸಭಾಪತಿಯವರೆ, ನನಗೆ ಉತ್ತರ ಕೊಟ್ಟಿದ್ದಾರೆ. ದಯವಿಟ್ಟು ಅವಕಾಶ ಕೊಡಿ. ಈಗ ತೆಗೆದುಕೊಂಡಿರತಕ್ಕಂಥ ಪ್ರಶ್ನೆಗಳಲ್ಲಿ ವೈದ್ಯಕೀಯ ಸಚಿವರ ಕಾಳಜಿಯನ್ನು ಅರ್ಥಮಾಡಿಕೊಳ್ಳುತ್ತೇನೆ.

**ಸಭಾಪತಿಯವರು:–** ನೇರವಾಗಿ ನಿಮ್ಮ ಪ್ರಶ್ನೆಯ ಬಗ್ಗೆ ಬನ್ನಿ. ಪೀಠಿಕೆಗಳು ಬೇಡ.

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಯವರೆ, ಈಗ ತೆಗೆದುಕೊಂಡಿರತಕ್ಕಂಥ ಪ್ರಶ್ನೆಗಳಲ್ಲಿಯೇ, ಎರಡನೆಯದಾಗಿ 2006 ಕಾಯ್ದೆಯ validity ಯನ್ನು ಯಾರಾದರೂ ಚಾಲೆಂಜ್ ಮಾಡಿದ್ದಾರೆಯೇ? ಯಾವುದಾದರೂ ಸರ್ವೋಚ್ಚ ನ್ಯಾಯಾಲಯ ಮತ್ತು ಉಚ್ಚ ನ್ಯಾಯಾಲಯ unconstitutional ಎಂದು declare ಯಾಗಿದೆಯೇ. As far as my knowledge goes, there is no such order by the Supreme Court or by the High Court. This is one thing. Secondly, yes I am well aware of the provisions of Article 141 of the Constitution. Any law laid down by the Hon'ble Supreme Court of India is applicable to each and every citizen of this country which I know. ಆದ್ದರಿಂದ, ಈ Inamdar, Islamic Academy ಕೇಸ್‌ನಲ್ಲಾಗಿರುವಂತಹ provisions ಇದೆ. ಆದರೆ, ನಾನು ಸರ್ಕಾರವನ್ನು ಕೇಳುವುದಕ್ಕೆ ಬಯಸುತ್ತೇನೆ. ನಿನ್ನೆಯವರೆಗೂ aided or unaided private colleges ಇರತಕ್ಕಂಥದ್ದು, ಬೇರೆ ಬೇರೆ considerations ನಲ್ಲಿ ಇವತ್ತು deemed university ಎಂದು declare ಯಾದರೆ, ನಮಗೆ apply ಆಗುವುದಿಲ್ಲವೆಂದು ಹೇಳುತ್ತಾರೆ. Have you made any efforts to bring these deemed universities under the control of State Government? Have you made any efforts? ಏಕೆಂದರೆ land ಕೊಡುತ್ತೇವೆ. Other facilities ಕೊಟ್ಟಿದ್ದೇವೆ. U.G.C.ಏನಿದೆ... ಇನ್ನೊಂದು ವಿಚಾರವೇನೆಂದರೆ ಶಿಕ್ಷಣವೆಂಬುದು ರಾಜ್ಯ ಹಾಗೂ ಕೇಂದ್ರದ ಪಟ್ಟಿಯಲ್ಲಿದೆ. They need not have a central enactment. Even the State has powers to bring an amendment or legislation. ಇದನ್ನು ನಾನು ಹೇಳುತ್ತಿರುವಂತಹದ್ದು ಅಳಿಯ ಅಲ್ಲ ಮಗಳ ಗಂಡ ಎನ್ನುವ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ರೀತಿಯಲ್ಲಿ ಶುಲ್ಕವು ನಡೆಯುತ್ತಿದೆ ಎನ್ನುವುದನ್ನು ನಾನು ಹೇಳಿದ್ದೆ. ಇದು ನನ್ನ ಎರಡನೇಯ ಪ್ರಶ್ನೆ. 100%...

**ಸಭಾಪತಿಯವರು:-** ಆಯ್ತು, ಎಷ್ಟು ಸಾರಿ ಹೇಳುತ್ತೀರಿ. ಉತ್ತರವನ್ನು ಕೊಡುವುದಕ್ಕೆ ಬಿಡಿ. Repeat ಮಾಡತ್ತೀರಾ?

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೆ, ಒಂದು ನಿಮಿಷ ಇಡೀ ಭಾರತಕ್ಕೆ 100% 2013ನಲ್ಲಿ ತಂದರೆ ಹೇಗೆ judicial scrutiny ನಿಲ್ಲುತ್ತದೆ. ನಿಮಗೆ judicial scrutiny ನಿಲ್ಲಬೇಕೆನ್ನುವ ಹಾಗೆ ಇದ್ದರೆ, ನಮ್ಮ ಸರ್ಕಾರಕ್ಕೆ 50% N.E.E.T. (National Eligibility cum Entrance Test) ಸಿಗತಕ್ಕಂಥದ್ದು, eligibility clause ನಲ್ಲಿ ತರಬೇಕೇ ಹೊರತು. ಇಲ್ಲಿ ಕೇಂದ್ರ ಸರ್ಕಾರ ಅಥವಾ N.E.E.T. ನ allocation ನಲ್ಲಿಯೂ ಸಹ ಕರ್ನಾಟಕದವರಿಗೆ 100% ಎಂದರೆ, ಇದು judicial scrutiny ನಿಲ್ಲುವುದಕ್ಕಾಗುವುದಿಲ್ಲ. ಹೇಗೆ ಕೇರಳ ರಾಜ್ಯದವರು ಮಾಡಿಕೊಂಡಿರುವ ವ್ಯವಸ್ಥೆ ನಿಲ್ಲಬಹುದು. ಏಕೆಂದರೆ ಅವರು 50% ಗೆ confine ಆಗಿದ್ದಾರೆ. ಅದಕ್ಕಾಗಿ ನಾನು ಹೇಳುವುದು ನಮ್ಮ ರಾಜ್ಯದ ಮಕ್ಕಳ ಹಿತದೃಷ್ಟಿಯಿಂದ, ನಮ್ಮ ರಾಜ್ಯದ ಮಕ್ಕಳಿಗೆ ಹೆಚ್ಚು ಪ್ರಾಧಾನ್ಯತೆ ಸಿಗಬೇಕು, ಕಡಿಮೆ ವೆಚ್ಚದಲ್ಲಿ ಶಿಕ್ಷಣವೂ ಸಿಗಬೇಕಾದರೆ ದಯಮಾಡಿ ಇದರ ಬಗ್ಗೆ ಚಿಂತನೆ ಮಾಡಿ. ನೀವು ತಂದಿರತಕ್ಕಂಥ ವಿಧೇಯಕಕ್ಕೆ ನನ್ನ ವಿರೋಧವಿಲ್ಲ. ಆದರೆ, ನಾನು ಹೇಳುವುದೇನೆಂದರೆ ಈ ಮೀಸಲಾತಿಯಲ್ಲಿರತಕ್ಕಂಥ redefine ಮಾಡದೇ ಇದ್ದರೆ certainly I will tell you, Karnataka people will lose some seats.

**ಡಾ॥ ಶರಣ ಪ್ರಕಾಶ್ ಪಾಟೀಲ್:-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು ಎತ್ತಿರತಕ್ಕಂಥ ಕಳಕಳಿ ನನಗೆ ಅರ್ಥವಾಗುತ್ತದೆ. I am not averse for his suggestions. See what I have told is, I have done my best. It was not possible. But in the Lower House also I have considered yesterday. I want this to happen. I want to do this. ಅದಕ್ಕಾಗಿ ಈ ವಿಧೇಯಕವೂ ಅಂಗೀಕಾರವಾಗಲಿ, I will call a meeting of all my senior colleagues who have experience in this. ಅದಕ್ಕೆ ಅವರನ್ನು ಕರೆದು ಮುಂದೆ amendment ತಂದು ನಮ್ಮ ಮಕ್ಕಳಿಗೆ ಏನಾದರೂ ಮಾಡುವುದಕ್ಕೆ we will examine that and do it while

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

making further amendments. And I agree with the views expressed by the Hon'ble Member.

**ಸಭಾಪತಿಯವರುಃ–** ಪ್ರಸ್ತಾವ ಏನೆಂದರೆ;

**"ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2017ರ ಕರ್ನಾಟಕ ವೃತ್ತಿ ಶಿಕ್ಷಣ ಸಂಸ್ಥೆಗಳ (ಪ್ರವೇಶ ನಿಯಂತ್ರಣ ಮತ್ತು ಶುಲ್ಕ ನಿಗದಿ) (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು."**

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು**

**ಖಂಡ 2 ರಿಂದ 8ರವರೆಗೆ**

**ಸಭಾಪತಿಯವರುಃ–** "ಖಂಡ 2 ರಿಂದ 8 ರವರೆಗೆ ಎರಡೂ ಸೇರಿದಂತೆ ವಿಧೇಯಕದ ಅಂಗವಾಗಿರುತ್ತದೆ."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಖಂಡ 2 ರಿಂದ 8 ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು.)**

**ಖಂಡ 1 ಇತ್ಯಾದಿ**

**ಸಭಾಪತಿಯವರುಃ–** ಪ್ರಸ್ತಾವ ಏನೆಂದರೆ;

**"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."**

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು.)**

**ಪ್ರಸ್ತಾವದ ಅಂಗೀಕಾರ**

**ಶ್ರೀ ಬಸವರಾಜ ರಾಯರೆಡ್ಡಿ(ಉನ್ನತ ಶಿಕ್ಷಣ ಸಚಿವರು):–** ಮಾನ್ಯ ಸಭಾಪತಿಯವರೆ, ವಿಧಾನಸಭೆಯಿಂದ ಅಂಗೀಕೃತವಾದ ರೂಪಲ್ಲಿರುವ 2017ರ ಕರ್ನಾಟಕ ವೃತ್ತಿ ಶಿಕ್ಷಣ ಸಂಸ್ಥೆಗಳ (ಪ್ರವೇಶ ನಿಯಂತ್ರಣ ಮತ್ತು ಶುಲ್ಕ ನಿಗದಿ) (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

.

**ಸಭಾಪತಿಯವರುಃ–** ಪ್ರಸ್ತಾವ ಏನೆಂದರೆ;

**"ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2017ರ ಕರ್ನಾಟಕ ವೃತ್ತಿ ಶಿಕ್ಷಣ ಸಂಸ್ಥೆಗಳ (ಪ್ರವೇಶ ನಿಯಂತ್ರಣ ಮತ್ತು ಶುಲ್ಕ ನಿಗದಿ) (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು."**

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

**ಇ) ಕರ್ನಾಟಕ ಭೂ ಕಂದಾಯ(ಎರಡನೇ ತಿದ್ದುಪಡಿ) ವಿಧೇಯಕ, 2017**

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ಕಾಗೋಡು ತಿಮ್ಮಪ್ಪ (ಕಂದಾಯ ಸಚಿವರು):–** ಮಾನ್ಯ ಸಭಾಪತಿಯವರೆ, ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2017ರ ಕರ್ನಾಟಕ ಭೂ ಕಂದಾಯ (ಎರಡನೇ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

**ಶ್ರೀ ಕಾಗೋಡು ತಿಮ್ಮಪ್ಪ(ಕಂದಾಯ ಸಚಿವರು):–** ಮಾನ್ಯ ಸಭಾಪತಿಯವರೆ, ಈ ವಿಧೇಯಕಕ್ಕೆ ಒಂದು ಸಣ್ಣ ತಿದ್ದುಪಡಿಯನ್ನು ಏನು ತಂದಿದ್ದೇವೆಂದರೆ, ನಗರ ಪ್ರದೇಶಗಳಲ್ಲಿ ಸರ್ಕಾರಿ ಜಮೀನಿನಲ್ಲಿ 20X30 ವಿಸ್ತೀರ್ಣದಲ್ಲಿ ಮಂಜೂರಾತಿಯಿಲ್ಲದೇ ಯಾರು ಮನೆಯನ್ನು ಕಟ್ಟಿಕೊಂಡಿದ್ದಾರೆ ಅಂಥವರಿಗೆ ಹಕ್ಕುಪತ್ರ ಕೊಡುವುದಕ್ಕಾಗಿ ಅವಕಾಶ ಮಾಡಿಕೊಟ್ಟಿದ್ದೇವೆ. ಆದರೆ, ನಗರ ಸಭೆಯ ಅಂಚಿನಿಂದ ಬೆಂಗಳೂರು ಆದರೆ 18 ಕಿಲೋ ಮೀಟರ್, ಬೇರೆ ಬೇರೆ ಕಡೆಯಾದರೆ ಬೇರೆ ರೀತಿಯಲ್ಲಿದೆ. ಅದು buffer zone ನಲ್ಲಿ ನಗರ ಪ್ರದೇಶದಲ್ಲಿಯಾಗಲಿ ಅಥವಾ ಗ್ರಾಮಾಂತರ ಪ್ರದೇಶದಲ್ಲಿ ಮಂಜೂರಾತಿ ಕೊಡುವುದಕ್ಕೆ ಅವಕಾಶವಿರಲಿಲ್ಲ. ಈಗ buffer zone ನಲ್ಲಿ 30X40 ಅಡಿ ವಿಸ್ತೀರ್ಣದ ನಿವೇಶನವನ್ನು ಮಂಜೂರು ಮಾಡಿ ಅವರಿಗೆ ಹಕ್ಕು ಪತ್ರ ಕೊಡುವುದಕ್ಕೆ ಒಂದು ಅವಕಾಶ ಕಲ್ಪಿಸಿಕೊಟ್ಟಿದ್ದಾರೆ. ಏಕೆಂದರೆ ಈಗಾಗಲೇ ಅವಕಾಶವು ಜಾರಿಯಲ್ಲಿದೆ. ಇದೇ ಸಂದರ್ಭದಲ್ಲಿ ಮಂಜೂರಾತಿಯಿಲ್ಲದವರಿಗೂ ಕೂಡ ಕೊಟ್ಟು ಬಿಡೋಣ ಎನ್ನುವ ಉದ್ದೇಶದಿಂದ ಈ ತಿದ್ದುಪಡಿ ತಂದಿದ್ದಾರೆ. ದಯಮಾಡಿ ಈ ವಿಧೇಯಕವನ್ನು ಪಾಸ್ ಮಾಡಿಕೊಡಿ.

**ಮುಂದು) . . .**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(440) 24-03-2017 (02-00)BSD-RN

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮೊದಲು buffer zone ನಲ್ಲಿ 20 ಥ 30 ಅಳತೆ ಜಾಗವನ್ನು ಕೊಡುತ್ತಿದ್ದು, ಈಗ ಅದನ್ನು 30 ಥ 40 ಮಾಡಿದ್ದಾರೆ. ಸಾಮಾನ್ಯವಾಗಿ ಇದು ನಗರಸಭೆ, ಪುರಸಭೆ ಮತ್ತು ಪಟ್ಟಣ ಪಂಚಾಯಿತಿ ವ್ಯಾಪ್ತಿಯಿಂದ ಹೊರಗಿರುವ ಪ್ರದೇಶವಾಗಿದೆ. ಈಗಲೂ ಕೂಡ ಅದು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿಯೇ ಇದೆ. ಆದರೆ ನಿರ್ದಿಷ್ಟ ಪ್ರದೇಶ ನಗರ ಸಭೆ ವ್ಯಾಪ್ತಿಗೆ ಬರಬಹುದೆಂದು 20 ಥ 30 ಸೀಮಿತ ಮಾಡಿ ಮಾಡುತ್ತಿದ್ದಾರೆ. ಅದೇ ಗ್ರಾಮದ ಅದೇ ಪಂಚಾಯಿತಿ ವ್ಯಾಪ್ತಿಯಲ್ಲಿ ಈ ಪ್ರದೇಶವನ್ನು ಬಿಟ್ಟು ಉಳಿದಿರುವ ಪ್ರದೇಶದಲ್ಲಿ ಹಳೆಯ ರೀತಿ 50 ಥ 80 ಕೊಡುತ್ತಿದ್ದಾರೆ. ಈಗ ಇದನ್ನು ಗ್ರಾಮ ಪಂಚಾಯಿತಿ ಎಂದು ಪರಿಗಣಿಸಲಾಗಿದೆ. ಇದು ಹೇಗೂ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿದ್ದು, ಈಗಲೇ 5 ಸೆಂಟ್ಸ್, 9 ಸೆಂಟ್ಸ್ ಬಳಕೆ ಮಾಡಿಕೊಂಡು ಬೇಲಿ ಹಾಕಿಕೊಂಡವರೂ ಇದ್ದಾರೆ. ಭೂಮಿ ಲಭ್ಯವಿರುವವರಿಗೆ ಮೊದಲಿನಂತೆ ಮಾಡಲಿ, ಕಡಿಮೆ ಭೂಮಿ ಇರುವ ಕಡೆ 30 ಥ 40 ಕೊಡಲಿ. ಇದೊಂದು ಬಡವರ ಪರವಾಗಿ ತಂದಿರುವ ಯೋಜನೆಯಾದ್ದರಿಂದ ಸರ್ಕಾರವನ್ನು ನಾನು ಅಭಿನಂದನೆ ಮಾಡುತ್ತೇನೆ. ಭೂಪ್ರದೇಶ ಇರುವಲ್ಲಿ ಸ್ವಲ್ಪ ಜಾಸ್ತಿ ಕೊಡುವ ಯೋಚನೆ ಮಾಡಬೇಕೆಂದು ನನ್ನ ವಿನಂತಿ.

**ಶ್ರೀ ಕಾಗೋಡು ತಿಮ್ಮಪ್ಪ:-** ಮಾನ್ಯ ಸಭಾಪತಿಯವರೇ, ಗ್ರಾಮಾಂತರ ಪ್ರದೇಶದ ಜನರಿಗೆ ಕೊಡುವ 94-ಸಿ ನಲ್ಲಿ exclude ಮಾಡಿದ್ದಾರೆ. ಆದ್ದರಿಂದ 94-ಸಿಸಿ ನಲ್ಲಿ ಕೊಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೇವೆ. ಹಾಗಾಗಿ 94-ಸಿ ಮುಖಾಂತರ ಕೊಡಲು buffer zone ನಲ್ಲಿ ಅವಕಾಶ ಇರುವುದಿಲ್ಲ. ಏಕೆಂದರೆ ಸ್ವಲ್ಪ ವಿಸ್ತೀರ್ಣ ಜಾಸ್ತಿ ಮಾಡಿದ್ದೇವೆ. ಇನ್ನೂ ಹೆಚ್ಚಿನ ವಿಸ್ತೀರ್ಣಕ್ಕೆ ಅವಕಾಶ ಮಾಡಿಕೊಟ್ಟರೆ ಜನರು ತಪ್ಪು ದಾರಿಗೆ ಹೋಗಿ ಏನೆಲ್ಲಾ ಮಾಡಿಬಿಡುತ್ತಾರೆ. ಆದ್ದರಿಂದ ನಿರ್ಬಂದ ಇರಲಿ ಎಂದು 30 ಥ 40 ಸೀಮಿತ ಮಾಡಿ ಕೊಡುವ ಕೆಲಸ ಮಾಡುತ್ತಿದ್ದೇವೆ.

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈ 94-ಸಿಸಿ ಪುರಸಭೆ ಮತ್ತು ಪಟ್ಟಣ ಪಂಚಾಯತ್ ವ್ಯಾಪ್ತಿಯ ಪ್ರದೇಶಗಳಲ್ಲಿ ಕೊಡುವುದಾಗಿದ್ದು, 94-ಸಿ ನಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ಕೊಡುವುದಾಗಿದೆ. ಇವತ್ತು 94-ಸಿ ನಲ್ಲಿ ಅರ್ಜಿಯನ್ನು ಹಾಕಿದ್ದು, 94-ಸಿಸಿ ನಲ್ಲಿ ಪುರಸಭೆ ಮತ್ತು ಪಟ್ಟಣ ಪಂಚಾಯತ್‌ಗೆ ಬರುತ್ತಿದ್ದು, ಅರ್ಜಿ ಕೊಟ್ಟಿರುವುದು 94-ಸಿ ಆಗಿದ್ದು, ಇದರಲ್ಲಿಯೇ ಪರಿಗಣಿಸಬೇಕಾಗುತ್ತದೆ. ಇಲ್ಲದಿದ್ದರೆ ಹೊಸ ಅರ್ಜಿ ಕರೆಯುವ ಅವಕಾಶ ಕಲ್ಪಿಸಿಕೊಡಬೇಕಾಗುತ್ತದೆ. ಆದ್ದರಿಂದ ವಾಸ್ತವಾಂಶದಂತೆ ಯಾವ ಅಡಿಯಲ್ಲಿ ಅರ್ಜಿ ಸಲ್ಲಿಸಿದ್ದಾರೋ,

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಅದರಲ್ಲಿಯೇ ಖಾಯಂ ಮಾಡುವುದು ಒಳ್ಳೆಯದು. ಇಲ್ಲದಿದ್ದರೆ ನಗರ ಸಭೆ, ಪುರಸಭೆ ವ್ಯಾಪ್ತಿಯಲ್ಲಿರುವುದನ್ನು ಗ್ರಾಮಾಂತರ ಪ್ರದೇಶದ ಹೊಸ ಅರ್ಜಿ ತೆಗೆದುಕೊಂಡು ಖಾಯಂ ಮಾಡಬೇಕಾಗುತ್ತದೆ.

**ಶ್ರೀ ಕಾಗೋಡು ತಿಮ್ಮಪ್ಪ:-** ಮಾನ್ಯ ಸದಸ್ಯರ ಸಂಶಯ ನನಗೆ ಅರ್ಥವಾಗಿದ್ದು, 94-ಸಿ ಪ್ರಕಾರ ಗ್ರಾಮಾಂತರ ಪ್ರದೇಶಕ್ಕೆ ಮಂಜೂರು ಮಾಡಬಹುದಾಗಿದ್ದು, ಅಲ್ಲಿಯೇ buffer zone ಅನ್ನು exclude ಮಾಡಿದ್ದಾರೆ. ಅದನ್ನು ಇಲ್ಲಿ ತರಬೇಕಾದ ಅಗತ್ಯ ಇಲ್ಲ. ಆದ್ದರಿಂದ ಹೊಸದಾಗಿ ಮೂರು ತಿಂಗಳ ಕಾಲಾವಕಾಶ ಕೊಟ್ಟು ಅರ್ಜಿ ಕೊಡುವುದಕ್ಕೆ ಅವಕಾಶ ಕೊಡುತ್ತೇನೆ.

**ಶ್ರೀ ಬಸನಗೌಡ ಆರ್. ಪಾಟೀಲ್ (ಯತ್ನಾಳ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ವಿಧೇಯಕದ ಪ್ರದೇಶಗಳು ಎಂಬಲ್ಲಿ 'ಕರ್ನಾಟಕ ಪೌರನಿಗಮಗಳ ಅಧಿನಿಯಮ, 1976ರ ಉಪಬಂಧಗಳಡಿಯಲ್ಲಿ ಬರುವ ಬೆಳಗಾವಿ, ಗುಲ್ಬರ್ಗಾ, ಹುಬ್ಬಳ್ಳಿ-ಧಾರವಾಡ, ಮಂಗಳೂರು ಮತ್ತು ಮೈಸೂರ' ಎಂದು ಹೇಳಿದ್ದಾರೆ. ಆದರೆ ಹೊಸದಾಗಿ ರಚನೆಯಾದ ವಿಜಯಪುರ ಮಹಾನಗರಪಾಲಿಕೆ, ತುಮಕೂರು ಅಥವಾ ಶಿವಮೊಗ್ಗ ಮಹಾನಗರ ಪಾಲಿಕೆಗಳನ್ನು ಈ ವ್ಯಾಪ್ತಿಯಲ್ಲಿ ಸೇರಿಸಬೇಕಾಗುತ್ತದೆ. ಇಲ್ಲದಿದ್ದರೆ ಪುರಸಭೆ ವ್ಯಾಪ್ತಿಯಲ್ಲಿ ಕೇವಲ 5 ಕಿ.ಮೀ ಮಾತ್ರ ಸಿಗುತ್ತದೆ. ದಯವಿಟ್ಟು ಮಾನ್ಯ ಸಚಿವರು ಗಮನಿಸಬೇಕೆಂದು ವಿನಂತಿ.

**ಶ್ರೀ ಕಾಗೋಡು ತಿಮ್ಮಪ್ಪ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರ ಕಳಕಳಿ ನನಗೆ ಅರ್ಥವಾಗಿದ್ದು, ಇದರಲ್ಲಿ ಸ್ವಲ್ಪ ಕಾನೂನು ಪ್ರಶ್ನೆ ಉದ್ಭವವಾಗುತ್ತದೆ. ಈಗ ಪುನಃ ಒಂದು ಸುತ್ತೋಲೆಯನ್ನು ಹೊರಡಿಸುತ್ತಿದ್ದು, ಹಿಂದೆ ಅರ್ಜಿ ಕೊಡುವಾಗ ಯಾವ ಕಾನೂನಿನಲ್ಲಿ ಅವಕಾಶ ಇತ್ತೋ, ಅದೇ ಇರಬೇಕು ಎಂದು ಹೈಕೋರ್ಟ್‌ನಲ್ಲಿ ಒಂದು ತೀರ್ಮಾನವಾಗಿದೆ. ಅದರ ಆಧಾರದಲ್ಲಿ ಸುತ್ತೋಲೆಯನ್ನು ಸರ್ಕಾರದಿಂದ ಕಳುಹಿಸುತ್ತಿದ್ದೇನೆ. ಹೊಸದಾಗಿ ಆದರೆ ಮತ್ತೆ ಕಾನೂನನ್ನು ತಿದ್ದುಪಡಿ ಮಾಡಬೇಕಾಗುತ್ತದೆ. ಅಂತಹ ಸನ್ನಿವೇಶ ಬಂದರೆ ತಿದ್ದುಪಡಿ ಮಾಡೋಣ.

**ಶ್ರೀ ಹೆಚ್.ಎಂ. ರೇವಣ್ಣ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಆ ಜಾಗಗಳಲ್ಲಿ 30 x 40 ಅಳತೆ ಜಾಗ ಕೊಡುತ್ತಿದ್ದು, ಆದರೆ ಸುಮಾರು 30-40 ವರ್ಷಗಳಿಂದ adverse possession ನಲ್ಲಿ ಆ ಜಾಗದಲ್ಲಿರುತ್ತಾರೆ. ಈ ಹೆಚ್ಚುವರಿ ಜಾಗ ಏನು ಮಾಡುವುದು? ಈ ಜಾಗವೂ ಅವರ possession ನಲ್ಲಿ ಇದ್ದರೆ ಏನು ಮಾಡುವುದು?

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ವಿ.ಎಸ್. ಉಗ್ರಪ್ಪ (ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, Transfer of Property Act ಪ್ರಕಾರ ...... ಮಾನ್ಯ ಸಭಾಪತಿಯವರೇ, ಇದು settled law. 12 ವರ್ಷ ಯಾವುದಾದರೂ ಖಾಸಗಿ ಸ್ವತ್ತಿನಲ್ಲಿ ಅನಧಿಕೃತವಾಗಿ ಇದ್ದಾಗ he will be entitled for title. ಸರ್ಕಾರಿ ಜಮೀನಿನಲ್ಲಿ 30 ವರ್ಷ ಇದ್ದರೆ they can claim adverse possession by filing a suit declaring that they are the owners. ಇದು ಕಾನೂನಿನಲ್ಲಿ ಇದೆ. ಸುಪ್ರೀಂಕೋರ್ಟ್ ತೀರ್ಪುಗಳು ಇವೆ. Transfer of Property Act ನಲ್ಲಿಯೂ ಇದೆ.

**ಶ್ರೀ ಶರಣಪ್ಪ ಮಟ್ಟೂರ:–** ಅದು ಇದೆ, subject to condition... provision ಆಗಿ ಇದೆ.

**ಶ್ರೀ ಎಂ.ಆರ್. ಸೀತಾರಾಂ:–** ಸುಪ್ರೀಂಕೋರ್ಟ್ ತೀರ್ಪಿನಿಂದ 30 ವರ್ಷ ಸರ್ಕಾರಿ ಜಮೀನಿನಲ್ಲಿ ಇದ್ದರೆ ಅವರಿಗೆ ರೈಟ್ಸ್ ಬರುತ್ತದೆ. It is derive from Judgment of Supreme Court. Act ಇಲ್ಲ.

**ಶ್ರೀ ವಿ.ಎಸ್. ಉಗ್ರಪ್ಪ:–** ಇದೆ, ಮಾನ್ಯ ಸಭಾಪತಿಯವರೇ, ಸಂವಿಧಾನದ ಅಡಿಯಲ್ಲಿ ರೂಪುಗೊಂಡಿರುವ Transfer of Property Act ನಲ್ಲಿ ಪ್ರಾವಿಜನ್ ಇದೆ. ಸುಪ್ರೀಂಕೋರ್ಟ್ ಅದರ ಮೇಲೆ interpret ಮಾಡಿ ತೀರ್ಪುಗಳನ್ನು ಕೊಟ್ಟಿದೆ. ಈ ಹಿನ್ನೆಲೆಯಲ್ಲಿ ಸರಿಯೋ–ತಪ್ಪೋ 30 ಥ 40 ಅಳತೆ ಜಾಗವನ್ನು ರೆಗ್ಯುಲರೈಸ್ ಮಾಡುತ್ತಾರೆ. ಉದಾಹರಣೆಗೆ ಕೊರಟಗೆರೆ ನಗರ ಪಂಚಾಯಿತಿಯು ಮಾನ್ಯ ಗೃಹ ಸಚಿವರ ಕ್ಷೇತ್ರವಾಗಿದೆ. ಅಲ್ಲಿ ಜಯಮಂಗಲಿ ನದಿ ಮತ್ತು ಟೌನ್ ಮಧ್ಯೆಯ outskirts ನಲ್ಲಿ ಮನೆ ಕಟ್ಟಿಕೊಂಡಿದ್ದಾರೆ, ಬಣವೆಯನ್ನು ಹಾಕಿಕೊಂಡಿದ್ದಾರೆ ಮತ್ತು ಎಮ್ಮೆ–ಹಸು–ಎತ್ತುಗಳನ್ನು ಕಾಲು–ಅರ್ಧ ಎಕರೆಗಳಲ್ಲಿ ಕಟ್ಟಿಕೊಂಡು ಇದ್ದಾರೆ. Now you are going to regularize 30 X 40 site only. ಉಳಿದ ಜಮೀನನ್ನು as a matter of right if they are going to file a suit for declaration, declaring that they are in adverse possession and they will be entitled. ಆ ಭೂಮಿಯನ್ನು ಕೋರ್ಟಿಗೆ ಹೋಗಲಿ ಎಂದು ಬಿಡುತ್ತಾರೆಯೋ? ಅಥವಾ ಆ ಭೂಮಿಯನ್ನು ಸರ್ಕಾರ confiscate ಮಾಡಿಕೊಂಡು ಬೇರೆಯವರಿಗೆ ಅಲಾಟ್ ಮಾಡುತ್ತಾರೆಯೇ? ಇದನ್ನು ಏನು ಮಾಡುತ್ತಾರೆ? ಏಕೆಂದರೆ ರಾಜ್ಯದ ಜನತೆಗೆ ಕ್ಲಿಯರ್ ಸಂದೇಶ ಹೋಗಬೇಕು. 94–ಸಿಸಿ ಮಾಡುವ ಸಂದರ್ಭದಲ್ಲಿ ಸರ್ಕಾರ ಏನು ಮಾಡುತ್ತದೆ ಎಂದು ಬೆಳಕು ಚೆಲ್ಲುವುದು ಸೂಕ್ತ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕಾಗೋಡು ತಿಮ್ಮಪ್ಪ:-** ಮಾನ್ಯ ಸಭಾಪತಿಯವರೇ, ಮಾನ್ಯ ರೇವಣ್ಣನವರು 30 x 40 ಜಾಗ ಕೊಟ್ಟು, ಅಲ್ಲಿ 40 x 50 ಅಳತೆಯ ಜಾಗದಲ್ಲಿ ಮನೆ ಕಟ್ಟಿಕೊಂಡಿದ್ದರೆ ಏನು ಮಾಡುತ್ತಾರೆ ಎಂದು ಕೇಳಿದ್ದಾರೆ. ಅದನ್ನು ಒಡೆದು ಹಾಕುತ್ತೇವೆ. ಇದನ್ನು execute ಮಾಡುವವರಿಗೆ ಬಿಟ್ಟು ಬಿಡುತ್ತೇವೆ.

**ಶ್ರೀ ಹೆಚ್.ಎಂ. ರೇವಣ್ಣ:-** ಯಾವ ಕಡೆ ಒಡೆಯುತ್ತಾರೆ?

**ಶ್ರೀ ಕಾಗೋಡು ತಿಮ್ಮಪ್ಪ:-** ಈ ವಿಚಾರದಲ್ಲಿ too much ಮಾಡುವುದಕ್ಕೆ ಹೋಗಬಾರದು. ಸ್ವಲ್ಪ ಬೀಳಬೇಕು. ತೀರಾ ಮಾಡುವುದಕ್ಕೆ ಹೋದರೆ ಸಾವಿರ ಇರುತ್ತವೆ. ಒಂದು principle ಮೇಲೆ ಮಾಡಿದಾಗ ಅದನ್ನು ಉಳಿಸಿಕೊಂಡು ಹೋಗಬೇಕು. ನನಗೇನೂ ವಿರೋಧ ಇಲ್ಲ. ಈಗಾಗಲೇ ಮಾಡಿಕೊಂಡಿರುತ್ತಾರೆ. ಇದಕ್ಕೆ ಕೆಲವು ಕಾರಣಗಳು ಇವೆ. ಉದಾಹರಣೆಗೆ, ಮಾನ್ಯ ಉಗ್ರಪ್ಪನವರು ಹೇಳಿದಂತೆ 50 ಸಾವಿರ ಜನಸಂಖ್ಯೆಗಿಂತ ಕಡಿಮೆ ಇರುವ ನಗರ ಪ್ರದೇಶದಲ್ಲಿ ಕೊಡುವುದಕ್ಕೆ ಏನೂ ತೊಂದರೆ ಇರುವುದಿಲ್ಲ. ನಮ್ಮ ಸಾಗರವು ಈ ಕಾನೂನು ಬಂದಾಗ ಪುರಸಭೆಯಾಗಿತ್ತು.

(ಮುಂದು)

**(441) 24-03-2017 SK-RN 2.10**

(ಸಭಾಪತಿಯವರ ಉಪಸ್ಥಿತಿ)

**ಶ್ರೀ ಕಾಗೋಡು ತಿಮ್ಮಪ್ಪ(ಮುಂದು...**

ಆಗ ಅಲ್ಲಿಯವರೆಗೆ ನಾವು ಗ್ರಾಮೀಣ ಪ್ರದೇಶದ ಜನರಿಗೆ ಬಗರ್‌ಹುಕುಂನಲ್ಲಿ ಮಂಜೂರು ಮಾಡಿ ಹಕ್ಕುಪತ್ರವನ್ನು ಕೊಟ್ಟಿದ್ದೇವೆ. ಈ ಐವತ್ತು ಸಾವಿರಕ್ಕಿಂತ ಜಾಸ್ತಿಯಾದರೆ, ಇವು ಬರುತ್ತವೆ. Buffer zone ಬಿಡಬೇಕೆನ್ನುವ ಅಗತ್ಯವಿದೆ. ಈಗ ತಾವೆಲ್ಲಾ ಆಡಳಿತ ಪಕ್ಷದಲ್ಲಿದ್ದೀರಿ. ನೀವುಗಳೆಲ್ಲಾ ಮನಸ್ಸು ಮಾಡಿದರೆ ತೆಗೆದು ಹಾಕೋಣ ಅದಕ್ಕೇನು ನನಗೆ. ಅದಕ್ಕೊಸ್ಕರ ಈ ಕಾನೂನು ಅವರಿಗೆ ಇರಲಿ ಎಂದು ತಂದಿದ್ದೇವೆ.

(ಗೊಂದಲ)

**ಶ್ರೀ ಕಾಗೋಡು ತಿಮ್ಮಪ್ಪ (ಕಂದಾಯ ಸಚಿವರು):-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಉಗ್ರಪ್ಪನವರು ಇನ್ನೊಂದು ಹೇಳಿದ್ದಾರೆ. ಸರ್ಕಾರಿ ಜಮೀನು 30 ವರ್ಷ ಮೇಲೆ ಏನಾದರೂ ಇದ್ದರೆ,

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅವರಿಗೆ adverse possession ಬರುತ್ತದೆ. ನಮ್ಮ ಕಂದಾಯ ಇಲಾಖೆಯಲ್ಲಿ ಆ ಕಾನೂನು ಇಲ್ಲ. ಕಾನೂನು ಇಲ್ಲದೇ ನಾವು ಮಾಡುವುದಕ್ಕೆ ಬರುವುದಿಲ್ಲ.

**ಸಭಾಪತಿಯವರು:-** ಬೇಗ ಕೇಳಿ ಮತ್ತು ಏನು ವಿಷಯ ಎಂದು ಹೇಳಿ.

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ:-** ಸನ್ಮಾನ್ಯ ಸಭಾಪತಿಯವರೇ, ಗ್ರಾಮಾಂತರ ಪ್ರದೇಶದಲ್ಲಿ ಇವತ್ತು ಕೂಡ ಸರ್ಕಾರಿ ಜಮೀನುಗಳಲ್ಲಿ ಅಥವಾ ಖಾಸಗಿ ಜಾಗದಲ್ಲಿ ಅಕ್ರಮ-ಸಕ್ರಮವಾಗಿ ಕಟ್ಟಿರತಕ್ಕಂತಹ ಮನೆಗಳನ್ನು ಅನಧಿಕೃತವಾಗಿ ಸಕ್ರಮ ಮಾಡುವಂತಹ ಅವಕಾಶವಿದೆಯೇ? ಖಾಸಗಿ ಜಮೀನಿನಲ್ಲಿ ಯಾರೋ ಒಬ್ಬರು 10-20 ಮನೆಗಳನ್ನು ಒಂದು ಕಡೆ ಕಟ್ಟಡ ಕಟ್ಟಿದಾಗಲೂ, ಅಲ್ಲಿ ಕೂಡ ಅಕ್ರಮ-ಸಕ್ರಮ ಅನ್ವಯಿಸುತ್ತದೆಯೇ ಹೇಗೆ? ...

**ಸಭಾಪತಿಯವರು:-** ಖಾಸಗಿ ಜಮೀನಿನಲ್ಲಿ ಕಟ್ಟಿದರೂ ಅನ್ವಯಿಸುತ್ತದೆಯೇ ಹೇಗೆ ಎಂದು ಕೇಳುತ್ತಾರೆ.

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ:-** ಸನ್ಮಾನ್ಯ ಸಭಾಪತಿಯವರೇ, ಕಂದಾಯ ಭೂಮಿಯಲ್ಲಿ ಯಾರಾದರೂ 10-20 ಮನೆಗಳನ್ನು ...

(ಗೊಂದಲ)

**ಶ್ರೀ ಕಾಗೋಡು ತಿಮ್ಮಪ್ಪ (ಕಂದಾಯ ಸಚಿವರು):-** ಸನ್ಮಾನ್ಯ ಸಭಾಪತಿಯವರೇ,.... ಖಾಸಗಿಯವರಿಗೆ ಬರುವುದಿಲ್ಲ.

**ಸಭಾಪತಿಯವರು:-** ಬರುವುದಿಲ್ಲ, ಅದು ಹೇಗೆ ಬರುತ್ತದೆ.

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ:-** ಸನ್ಮಾನ್ಯ ಸಭಾಪತಿಯವರೇ, ನಮ್ಮ ಜಮೀನಿನಲ್ಲಿ ಇನ್ನು ಯಾರಾದರೂ 20 ಮನೆಗಳನ್ನು ಕಟ್ಟಿದರೆ ಅದನ್ನು entry ಮಾಡಿಕೊಡುತ್ತೀರಾ?

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕಾಗೋಡು ತಿಮ್ಮಪ್ಪ (ಕಂದಾಯ ಸಚಿವರು):–** ಸನ್ಮಾನ್ಯ ಸಭಾಪತಿಯವರೇ, ಇದು ಕಂದಾಯ ಇಲಾಖೆಯ ಜಮೀನಿಗೆ ಈ ಕಾನೂನು ತಂದಂತಹದು. ಸರ್ಕಾರಿ ಜಮೀನು ಖಾಸಗಿಯವರಿಗೆ ಬರುವುದಿಲ್ಲ.

(ಗೊಂದಲ)

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ:–** ಸನ್ಮಾನ್ಯ ಸಭಾಪತಿಯವರೇ, ಗ್ರಾಮ ಪಂಚಾಯಿತಿಯಿಂದ ನಮೂನೆ–11ಬಿ ಎನ್ನುವ ಉತಾರಗಳನ್ನು ಕೊಡುತ್ತಿದ್ದಾರೆ.

**ಶ್ರೀ ಕಾಗೋಡು ತಿಮ್ಮಪ್ಪ (ಕಂದಾಯ ಸಚಿವರು):–** ಸನ್ಮಾನ್ಯ ಸಭಾಪತಿಯವರೇ, ಹೌದು.

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ:–** ಸನ್ಮಾನ್ಯ ಸಭಾಪತಿಯವರೇ, ಅದು ಖಾಸಗಿ ಜಮೀನಿನಲ್ಲಿ ಅಥವಾ ಕಂದಾಯ ಭೂಮಿಯಲ್ಲಿ ಯಾರಾದರೂ ಮನೆಯನ್ನು ಕಟ್ಟಿದಾಗ, ಅವರಿಗೂ ಕೂಡ ಉತಾರ ಕೊಡಬಹುದು.

**ಸಭಾಪತಿಯವರು:–** ಖಾಸಗಿ ಕಂದಾಯ ಭೂಮಿಯಲ್ಲಿ.

**ಶ್ರೀ ಕಾಗೋಡು ತಿಮ್ಮಪ್ಪ (ಕಂದಾಯ ಸಚಿವರು):–** ಸನ್ಮಾನ್ಯ ಸಭಾಪತಿಯವರೇ, ಗ್ರಾಮ ಪಂಚಾಯಿತಿ ಅಥವಾ ನಗರ ಪಂಚಾಯಿತಿ ವ್ಯಾಪ್ತಿಯಲ್ಲಿರಬಹುದು. ಯಾವುದೇ ಕಟ್ಟಡ ಕಟ್ಟಲಿ ಅಥವಾ layout ಆಗಲಿ ಅನುಮತಿಯನ್ನು ತೆಗೆದುಕೊಳ್ಳಬೇಕು.

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ:–** ಸನ್ಮಾನ್ಯ ಸಭಾಪತಿಯವರೇ, ಅನುಮತಿ ಇಲ್ಲದೇ ಖಾಸಗಿ ಜಮೀನಿನಲ್ಲಿ ಕಟ್ಟಿರುವಂತಹದು.

**ಶ್ರೀ ವಿ.ಎಸ್. ಉಗ್ರಪ್ಪ:–** ಸನ್ಮಾನ್ಯ ಸಭಾಪತಿಯವರೇ, ಇಲ್ಲ ಎಂದರೆ ಸರ್ಕಾರ acquire ಮಾಡಿಕೊಂಡು regularize ಮಾಡಬೇಕಾಗುತ್ತದೆ. ಇಲ್ಲ ಎನ್ನುವುದಾಗಿದ್ದರೆ adverse possession ಗೆ suit ಹಾಕಿ, ..... 12 ವರ್ಷದ ಮೇಲೇ ಏನಾದರೂ ಇದ್ದರೆ, adverse possession ಬರುತ್ತೆ, Suit ಹಾಕಬೇಕಾಗುತ್ತದೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕಾಗೋಡು ತಿಮ್ಮಪ್ಪ (ಕಂದಾಯ ಸಚಿವರು):–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಉಗ್ರಪ್ಪನವರು adverse possession ಎಂದು ಹೇಳುತ್ತಾರೆಯಲ್ಲಾ, ನಾನು ಬರುವುದಿಲ್ಲ ಎಂದು ಹೇಳುತ್ತೇನೆ, ಏಕೆಂದರೆ ನಮ್ಮ ಸಾಗರ ಪಟ್ಟಣದ ಪುರಸಭೆಯ ಜಾಗದಲ್ಲಿ 30–40 ಮನೆಗಳನ್ನು ಕಟ್ಟಿಕೊಂಡಿದ್ದರು. ಅವರಿಗೆ ಹಕ್ಕುಪತ್ರ ಇರಲಿಲ್ಲ. ನಾನು ಅದನ್ನು ಸರ್ಕಾರದ ಗಮನಕ್ಕೆ ತಂದು, ಸಚಿವ ಸಂಪುಟದಲ್ಲಿ ಅದನ್ನು ಮಂಜೂರು ಮಾಡಿ ಕ್ರಯಪತ್ರಗಳನ್ನು ಕೊಡಿಸಿದ್ದೇನೆ. ಅನೇಕ ಕಡೆ ಇದನ್ನು ಮಾಡಬೇಕೆಂದು ಹೇಳುತ್ತಿದ್ದೇನೆ. ನೀವು ಹೇಳುವ ಪ್ರಕಾರ ಎಲ್ಲಿಯಾದರೂ ಇದ್ದರೆ ಅದನ್ನು ನಮ್ಮ ಗಮನಕ್ಕೆ ತೆಗೆದುಕೊಂಡು ಬನ್ನಿ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

"ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2017 ರ ಕರ್ನಾಟಕ ಭೂ ಕಂದಾಯ (ಎರಡನೇ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು**

**ಖಂಡ 2**

**ಸಭಾಪತಿಯವರು:–** ಖಂಡ 2 ಈ ವಿಧೇಯಕದ ಅಂಗವಾಗಿರುತ್ತದೆ

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಖಂಡ 2 ನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಖಂಡ 1 ಇತ್ಯಾದಿ**

**ಸಭಾಪತಿಯವರು:** ಪ್ರಸ್ತಾವ ಏನೆಂದರೆ;

"ಮೊದಲನೆಯ ಖಂಡ, ದೀರ್ಘ, ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಮೊದಲನೆಯ ಖಂಡ, ದೀರ್ಘ, ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು.)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಸ್ತಾವದ ಅಂಗೀಕಾರ**

**ಶ್ರೀ ಕಾಗೋಡು ತಿಮ್ಮಪ್ಪ (ಕಂದಾಯ ಸಚಿವರು):–** ಮಾನ್ಯ ಸಭಾಪತಿಯವರೇ, ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2017ರ ಕರ್ನಾಟಕ ಭೂ ಕಂದಾಯ (ಎರಡನೇ ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:** ಪ್ರಸ್ತಾವ ಏನೆಂದರೆ;

"ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2017ರ ಕರ್ನಾಟಕ ಭೂ ಕಂದಾಯ (ಎರಡನೇ ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

**ಈ) ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿ (ತಿದ್ದುಪಡಿ) ವಿಧೇಯಕ, 2017**

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ಸಂತೋಷ್ ಲಾಡ್ (ಕಾರ್ಮಿಕ ಸಚಿವರು):–** ಸನ್ಮಾನ್ಯ ಸಭಾಪತಿಯವರೇ, "ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2017ರ ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

**ಶ್ರೀ ಸಂತೋಷ್ ಲಾಡ್ (ಕಾರ್ಮಿಕ ಸಚಿವರು):–** ಸನ್ಮಾನ್ಯ ಸಭಾಪತಿಯವರೇ, ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿ (ತಿದ್ದುಪಡಿ) ವಿಧೇಯಕದಲ್ಲಿ ಏನಿದೆ Karnataka Labour Welfare Fund (Amendment) Bill ಅದರಲ್ಲಿ ವಿಶೇಷವಾಗಿ *Karnataka Labour Welfare Fund Act, 1965, in section 7A, in sub-section (2), for words "six rupees, twelve rupees and six rupees", the words "twenty rupees, forty rupees and twenty rupees" shall be substituted.* ಮಾಡತಕ್ಕಂತಹ ಉದ್ದೇಶ ಏನಿದೆ ಈ Karnataka Labour Welfare Fund Act, 1965 ಬಂದಾಗಿನಿಂದ ಇಲ್ಲಿಯವರೆಗೆ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮೊದಲು ಇದರಲ್ಲಿ ಮೂರು ತರಹ contribution ಇರುತ್ತಾ ಇದೆ. ಇದರಲ್ಲಿ employee, employer ಹಾಗೂ Government, ಪ್ರಾರಂಭದಲ್ಲಿ ಒಂದು ರೂಪಾಯಿ employee, ಎರಡು ರೂಪಾಯಿ employer, ಒಂದು ರೂಪಾಯಿ ಸರ್ಕಾರ ಕೊಡುವಂತಹದು. ಆದಾದ ನಂತರ ಮೂರು-ಆರು-ಮೂರಾಯಿತು. ಆದಾದ ನಂತರ ಆರು-ಹನ್ನೆರೆಡು-ಆರು 2011 ನೇ ಸಾಲಿನಲ್ಲಿ ಆಗಿತ್ತು. ನಾವು ಈ ಬಾರಿಗೆ ಇಪ್ಪತ್ತು-ನಲವತ್ತು-ಇಪ್ಪತ್ತು ಸುಮಾರು proposed amendment to section 7A ನಲ್ಲಿ employeeಗೆ ಇಪ್ಪತ್ತು ರೂಪಾಯಿಗಳು ಕೊಡಬೇಕು, employerಗೆ ನಲವತ್ತು ರೂಪಾಯಿಗಳು ಕೊಡಬೇಕು. ಸರ್ಕಾರ ಇಪ್ಪತ್ತು ರೂಪಾಯಿಗಳನ್ನು ಕೊಡಬೇಕು ಎಂದು ಈ ಬಿಲ್‌ನ್ನು ತಿದ್ದುಪಡಿಗೆ ತರುತ್ತಿದ್ದೇವೆ. ಇದರಲ್ಲಿ ಕೊನೆಯದಾಗಿ revision 2011 ರಲ್ಲಿ ಆಗಿತ್ತು. ನಮ್ಮಲ್ಲಿ ಈಗ ಸುಮಾರು 33 ಲಕ್ಷಕ್ಕೂ ಹೆಚ್ಚು employee ಗಳಿದ್ದಾರೆ. ಆ ಕಾರಣಕ್ಕಾಗಿ estimated contribution ಸುಮಾರು 26 ಕೋಟಿ ರೂಪಾಯಿಗಳಾಗುವುದಕ್ಕೆ ಸಾಧ್ಯತೆಯಿದೆ. In view of this proposed amendment, ನಮ್ಮ ಸರ್ಕಾರಕ್ಕೆ ಹೆಚ್ಚುವರಿ ಅನುದಾನ ಸುಮಾರು ನಾಲ್ಕು ಕೋಟಿ ಆರವತ್ತೆರಡು ಲಕ್ಷ ರೂಪಾಯಿಗಳಾಗುತ್ತದೆ. Finance Department concurrence ಕೂಡ ನಾವು ತೆಗೆದುಕೊಂಡಿದ್ದೇವೆ. ಅದಕ್ಕಾಗಿ ಈ ಒಂದು ತಿದ್ದುಪಡಿಯನ್ನು ತರುತ್ತಿದ್ದೇವೆ.

**ಶ್ರೀ ವಿ.ಎಸ್. ಉಗ್ರಪ್ಪ:-** ಮಾನ್ಯ ಸಭಾಪತಿಯವರೇ, ಈ quantum ಬಗ್ಗೆ ನೋಡಿ welfare fundಗೆ ಪಾಪ ದಿನ ದುಡಿಯುವವನ ಹತ್ತಿರ double ತೆಗೆದುಕೊಳ್ಳುತ್ತೇವೆ. ಯಾರಿಗೆ ಲಾಭ ಸಿಗುತ್ತೆ especially to employer, ಅವನ ಹತ್ತಿರ ಕಡಿಮೆ ತೆಗೆದುಕೊಳ್ಳುತ್ತೇವೆ. Last ratio ನಲ್ಲಿ provision ನೋಡಿ, ಇಲ್ಲಿ employee, employer and Government, employer ಗೆ six, employee ಗೆ twelve... ಸ್ವಲ್ಪ ಗಮನಿಸಿ, ನೀವು ತಿದ್ದುಪಡಿ ತರುತ್ತಿರುವುದು ಈ ಅಂಶಗಳಿಗಾಗಿಯೇ...

**ಸಭಾಪತಿಯವರು:-** ಕನ್ನಡದಲ್ಲಿ ಸರಿಯಿದೆ, ಇಂಗ್ಲೀಷ್‌ನಲ್ಲಿ ತಪ್ಪಿದೆ ಅಂತೆ. ಮಾನ್ಯ ಸಚಿವರೇ ಕನ್ನಡದಲ್ಲಿ ಮತ್ತು ಇಂಗ್ಲೀಷ್‌ನ version ನಲ್ಲಿ ಏನಾದರೂ ತಪ್ಪಿದ್ದರೆ, ದಯವಿಟ್ಟು ಅದನ್ನು ಗಮನಿಸಿ. ನಿಮ್ಮ ಅಧಿಕಾರಿಗಳನ್ನು ಕೇಳಿ. ಕನ್ನಡದಲ್ಲಿ ಸರಿಯಿದೆ ಎನ್ನುತ್ತಾರೆ. ಒಂದು ನಿಮಿಷ ಮಾನ್ಯ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಉಗ್ರಪ್ಪನವರೇ, ನೀವು ಇಂಗ್ಲೀಷ್ ಪ್ರತಿ ನೋಡಿ ಹೇಳುತ್ತಿದ್ದೀರಾ. ಅವರು ಕನ್ನಡ ಪ್ರತಿ ನೋಡಿ ಸರಿಯಿದೆ ಎಂದು ಹೇಳುತ್ತಾರೆ. ಎರಡಕ್ಕೂ ವ್ಯತ್ಯಾಸವೇನಾದರೂ ಇದ್ದರೆ..

**ಶ್ರೀ ವಿ.ಎಸ್. ಉಗ್ರಪ್ಪ:-** ಸನ್ಮಾನ್ಯ ಸಭಾಪತಿಯವರೇ, ಇಂಗ್ಲೀಷ್ ನೋಡಿ ಬಿಡಿ.

**ಸಭಾಪತಿಯವರು:-** ಈಗ ಸರ್ಕಾರ ಕನ್ನಡ ಒಪ್ಪುತ್ತಾರೋ ಅಥವಾ ಇಂಗ್ಲೀಷ್ ಒಪ್ಪುತ್ತಾರೋ ಎನ್ನುವುದನ್ನು ಸರ್ಕಾರ ಹೇಳಬೇಕು.

**ಶ್ರೀ ವಿ.ಎಸ್. ಉಗ್ರಪ್ಪ:-** ಸನ್ಮಾನ್ಯ ಸಭಾಪತಿಯವರೇ, ಕೊನೆಯಲ್ಲಿ ಇದೆ ನೋಡಿ existing provision ನಲ್ಲಿ ನೋಡಿ.

**ಶ್ರೀ ಅರುಣ ಶಾಹಪೂರ:-** ಸನ್ಮಾನ್ಯ ಸಭಾಪತಿಯವರೇ, ಎರಡೂ ಒಂದೇ ಇದೆ. ನಿಯೋಜಕ ಎಂದರೆ ಇಲ್ಲಿ employer, ನಿಯೋಜಿತ ಎಂದರೆ employee. ಸರಿ ಇದೆ ಸಾರ್. ಇದು ಎರಡೂ ಒಂದೇ ಇದೆ. ಅದು ಬದಲಾವಣೆಯಾಗಬೇಕು. ಅವರು ಹೇಳಿರುವುದು ಸರಿಯಿದೆ.

**ಶ್ರೀ ವಿ.ಎಸ್. ಉಗ್ರಪ್ಪ:-** ಸನ್ಮಾನ್ಯ ಸಭಾಪತಿಯವರೇ, *(1) in respect of every employee in an establishment there shall be paid contribution to the Board comprising the employer's contribution, employee's contribution and State Government's contribution,...* ಮೊದಲನೆಯದಾಗಿ, employer's contribution, clause(2) ನಲ್ಲಿ ನೋಡಿ.

(ಮುಂದು...)

442/24.03.2017/2.20/hv.vk **(ಸಭಾಪತಿಯವರ ಉಪಸ್ಥಿತಿ)**

**ಶ್ರೀ ವಿ.ಎಸ್.ಉಗ್ರಪ್ಪ(ಮುಂದುವರೆದದ್ದು):** That refers to employer, Rs.12 ರೂಪಾಯಿ employee, Rs.6 Government. ಭರಿಸುತ್ತದೆ. ಬಹುಶಃ ಇದು ಅದಲು-ಬದಲು ಆಗಬೇಕೆನ್ನುವುದು ನನ್ನ ಸಲಹೆಯಾಗಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಸಂತೋಷ್ ಲಾಡ್(ಕಾರ್ಮಿಕ ಸಚಿವರು)ಃ-** ಸನ್ಮಾನ್ಯ ಸಭಾಪತಿಯವರೇ, ಇಂಗ್ಲೀಷ್ ಭಾಷೆಯಲ್ಲಿ ತಪ್ಪಾಗಿ ಅಚ್ಚಾಗಿದೆ. ಅದನ್ನು ಸರಿಪಡಿಸುತ್ತೇವೆ. ಕನ್ನಡದಲ್ಲಿ ಸರಿಯಾಗಿದೆ. ಅದರನ್ವಯ ವಿಧೇಯಕವನ್ನು ತಾವು ಸದನದ ಮತಕ್ಕೆ ಹಾಕಬಹುದು.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್(ವಿರೋಧ ಪಕ್ಷದ ಮುಖ್ಯ ಸಚೇತಕರು)ಃ-** ಸನ್ಮಾನ್ಯ ಸಭಾಪತಿಯವರೇ, ಕನ್ನಡ ಮತ್ತು ಇಂಗ್ಲೀಷ್ ಎರಡೂ ಭಾಷೆಗಳಲ್ಲಿ ವಿಧೇಯಕ ಸರಿಯಾಗಿ ಅಚ್ಚಾಗಿದೆ. ಆದರೆ, ಕಾರ್ಮಿಕರ ಕಲ್ಯಾಣ ನಿಧಿಗೆ ಕಾರ್ಮಿಕನ ಕೊಡುಗೆ ಎಷ್ಟು, ಸರ್ಕಾರ ಮತ್ತು ನಿಯೋಜಕನ ಕೊಡುಗೆ ಎಷ್ಟು ಎನ್ನುವುದನ್ನು ಮಾನ್ಯ ಸಚಿವರು ಸ್ಪಷ್ಟಪಡಿಸಬೇಕಾಗಿದೆ. ಮೊದಲು ಕಾರ್ಮಿಕ ಶೇಕಡಾ 50ರಷ್ಟು ಮತ್ತು ಉಳಿದ ಶೇಕಡಾ 50ರಷ್ಟು ಭಾಗವನ್ನು ಸರ್ಕಾರ ಮತ್ತು ನಿಯೋಜಕ ಕೊಡಬೇಕೆಂದು ಇತ್ತು.

ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಉಗ್ರಪ್ಪನವರು, 'ಕಾರ್ಮಿಕ ದುಡಿಯುವುದರಿಂದ ನಿಯೋಜಕನಿಗೆ ಲಾಭ ಬರುತ್ತದೆ. ಆದ್ದರಿಂದ ಕಾರ್ಮಿಕರ ಮೇಲೆ ಹೆಚ್ಚು ಹೊರೆ ಆಗದಿರುವ ರೀತಿಯಲ್ಲಿ ಸರ್ಕಾರ ಮತ್ತು ನಿಯೋಜಕ ಸೇರಿಕೊಂಡು ಶೇಕಡಾ 50ರಷ್ಟು ಕೊಡಬೇಕೆಂದು ಬದಲಾವಣೆ ಮಾಡಿ, ಕಾರ್ಮಿಕ ಶೇಕಡಾ 20ರಷ್ಟು, ನಿಯೋಜಕ ಶೇಕಡಾ 40ರಷ್ಟು ಮತ್ತು ಸರ್ಕಾರ ಶೇಕಡಾ 40ರಷ್ಟು ಪಾಲನ್ನು ಕೊಡಬೇಕೆನ್ನುವ ರೀತಿಯಲ್ಲಿ ತಿದ್ದುಪಡಿ ಮಾಡಿ' ಎನ್ನುವ ಸಲಹೆಯನ್ನು ನೀಡಿದ್ದಾರೆ. ಮಾನ್ಯ ಸಚಿವರು ಸುಮ್ಮನೆ, 'ಕನ್ನಡದಲ್ಲಿ ಅಚ್ಚಾಗಿರುವ ವಿಧೇಯಕ ಸರಿಯಿದೆ, ಇಂಗ್ಲೀಷ್‌ನಲ್ಲಿ ಅಚ್ಚಾಗಿರುವುದು ಸರಿಯಿಲ್ಲ' ಎಂದು ಹೇಳುವುದು ಬೇಡ. ಕಾರ್ಮಿಕರ ಕಲ್ಯಾಣ ನಿಧಿಗೆ, ಕಾರ್ಮಿಕ ಶೇಕಡಾ 20ರಷ್ಟನ್ನು, ನಿಯೋಜಕ ಶೇಕಡಾ 40ರಷ್ಟನ್ನು ಮತ್ತು ಸರ್ಕಾರ ಶೇಕಡಾ 40ರಷ್ಟು ಪಾಲನ್ನು ಕೊಡಬೇಕೆನ್ನುವುದನ್ನು ಸರ್ಕಾರ ಒಪ್ಪಿಕೊಂಡರೆ ಕಾರ್ಮಿಕರಿಗೆ ಅನುಕೂಲ ಮಾಡಿಕೊಟ್ಟಂತಾಗುತ್ತದೆ. ಮಾನ್ಯ ಸಚಿವರು ತಂದಿರುವ ತಿದ್ದುಪಡಿಯನ್ನು ನಾವು ಸ್ವಾಗತಿಸುತ್ತೇವೆ. ಆದರೆ, ಇದರಲ್ಲಿ ಕಾರ್ಮಿಕನ ಮೇಲೆ ಹೊರೆ ಹೆಚ್ಚಾಗುತ್ತಿದೆ. ಕಾರ್ಮಿಕ ಶೇಕಡಾ 20ರಷ್ಟು, ನಿಯೋಜಕ ಶೇಕಡಾ 40ರಷ್ಟು ಮತ್ತು ಸರ್ಕಾರ ಶೇಕಡಾ 40ರಷ್ಟು ಕೊಡಬೇಕೆನ್ನುವ ರೀತಿಯಲ್ಲಿ ತಿದ್ದುಪಡಿ ಮಾಡಲಾಗುತ್ತದೆಯೇ ಎನ್ನುವುದು ನನ್ನ ಪ್ರಶ್ನೆಯಾಗಿದೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಸಂತೋಷ್ ಲಾಡ್:–** ಸನ್ಮಾನ್ಯ ಸಭಾಪತಿಯವರೇ, ಈಗ ತಂದಿರುವ ತಿದ್ದುಪಡಿಯಲ್ಲಿ ಕಾರ್ಮಿಕ 20 ರೂಪಾಯಿಗಳನ್ನು ಕೊಡುತ್ತಾನೆ, ನಿಯೋಜಕ 40 ರೂಪಾಯಿಗಳನ್ನು ಕೊಡುತ್ತಾನೆ, ಸರ್ಕಾರ 20 ರೂಪಾಯಿಗಳನ್ನು ಕೊಡಬೇಕೆನ್ನುವ ರೀತಿಯಲ್ಲಿ ತಿದ್ದುಪಡಿ ಮಾಡುತ್ತಿದ್ದೇವೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

"ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2017ರ ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿ(ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ಖಂಡಖಂಡವಾಗಿ ವಿಧೆಯಕವನ್ನು ಪರ್ಯಾಲೋಚಿಸುವುದು**

**ಖಂಡ 2**

**ಸಭಾಪತಿಯವರು:–** ಖಂಡ 2 ವಿಧೇಯಕದ ಅಂಗವಾಗಿರುತ್ತದೆ.

**(ಖಂಡ 2ನ್ನು ವಿಧೇಯಕಕ್ಕೆ ಸೇರಿಸಲಾಯಿತು)**

**ಖಂಡ 1 ಇತ್ಯಾದಿ**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

" ಮೊದಲನೆ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ, ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಮೊದಲನೆ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು.)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಸ್ತಾವದ ಅಂಗೀಕಾರ**

**ಶ್ರೀ ಸಂತೋಷ್ ಲಾಡ್(ಕಾರ್ಮಿಕ ಸಚಿವರು):–** ಸನ್ಮಾನ್ಯ ಸಭಾಪತಿಯವರೇ, ವಿಧಾನ ಸಭೆಯಿಂದ ಅಂಗೀಕಾರವಾದ ರೂಪದಲ್ಲಿರುವ 2017ರ ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

> "ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2017ರ ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿ(ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

**ಉ) ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ(ತಿದ್ದುಪಡಿ) ವಿಧೇಯಕ, 2017**

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ಬಸವರಾಜ ರಾಯರೆಡ್ಡಿ(ಉನ್ನತ ಶಿಕ್ಷಣ ಸಚಿವರು):–** ಸನ್ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ತಿದ್ದುಪಡಿಗಳೊಂದಿಗೆ ಅಂಗೀಕಾರವಾದ ರೂಪದಲ್ಲಿರುವ 2017ರ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

**ಶ್ರೀ ಬಸವರಾಜ ರಾಯರೆಡ್ಡಿ(ಉನ್ನತ ಶಿಕ್ಷಣ ಸಚಿವರು):–** ಸನ್ಮಾನ್ಯ ಸಭಾಪತಿಯವರೇ, ತಮ್ಮೆಲ್ಲರಿಗೂ ತಿಳಿದಿರುವಂತೆ ಈಗ ಪ್ರತಿಯೊಂದು ವಿಶ್ವವಿದ್ಯಾಲಯಕ್ಕೂ ತನ್ನದೇ ಆಗಿರುವ ಕಾಯಿದೆ ಇದೆ. There is no comprehensive Act. ಕರ್ನಾಟಕ ರಾಜ್ಯದಲ್ಲಿರುವ ಎಲ್ಲ ವಿಶ್ವವಿದ್ಯಾಲಯಗಳ ಕುಲಪತಿಗಳ ಸೇವಾವಧಿ 67 ವರ್ಷಗಳಾಗಿವೆ. ಈ ಆಕ್ಟ್ ಮಾಡುವ ಸಂದರ್ಭದಲ್ಲಿ ಬೇರೆ ಬೇರೆ ವಿಶ್ವವಿದ್ಯಾಲಯಗಳಲ್ಲಿನ ಕುಲಪತಿಗಳ ನಿವೃತ್ತಿಯ ವಯಸ್ಸು 67 ವರ್ಷಗಳಾಗಿದ್ದರೂ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಕುಲಪತಿಗಳ ನಿವೃತ್ತಿಯ ವಯಸ್ಸು 65 ವರ್ಷಗಳಾಗಿವೆ. Karnataka Higher Education Council ನಲ್ಲಿ ಈ ವಿಚಾರವನ್ನು ಪ್ರಸ್ತಾಪ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಿದಾಗ, Karnataka Higher Education Council Committee ಯಲ್ಲಿ ಇದರ ಬಗ್ಗೆ ತೀರ್ಮಾನ ಮಾಡಿ, ಈ ವಿಶ್ವವಿದ್ಯಾಲಯದ ಕುಲಪತಿಗಳ ನಿವೃತ್ತಿಯ ವಯಸ್ಸನ್ನು 65 ವರ್ಷಗಳಿಗೆ ಬದಲಾಗಿ 67 ವರ್ಷಗಳೆಂದು ತಿದ್ದುಪಡಿ ಮಾಡಬೇಕೆಂದು ತೀರ್ಮಾನ ಮಾಡಿರುವ ಹಿನ್ನಲೆಯಲ್ಲಿ ಈ ವಿಧೇಯಕವನ್ನು ತರಲಾಗಿದೆ.

**ಸಭಾಪತಿಯವರುಃ–** ಎಲ್ಲ ವಿಶ್ವವಿದ್ಯಾಲಯಗಳ ಕುಲಪತಿಗಳ ನಿವೃತ್ತಿ ವಯಸ್ಸು 67 ಆಗಿರುವುದರಿಂದ ಈ ವಿಶ್ವವಿದ್ಯಾಲಯದ ಕುಲಪತಿಗಳ ನಿವೃತ್ತಿ ವಯಸ್ಸನ್ನು ಸಹ 65 ವರ್ಷದಿಂದ 67 ವರ್ಷಕ್ಕೆ ಹೆಚ್ಚಿಸುವ ತಿದ್ದುಪಡಿಯನ್ನು ತಂದಿದ್ದಾರೆ. ಇದರ ಬಗ್ಗೆ ಏನು ಚರ್ಚೆ ಮಾಡುವುದಕ್ಕೆ ಸಾಧ್ಯ ಎನ್ನುವುದು ನನಗೆ ಅರ್ಥವಾಗುತ್ತಿಲ್ಲ.

**ಶ್ರೀ ಅರುಣ ಶಹಾಪುರಃ–** ಸನ್ಮಾನ್ಯ ಸಭಾಪತಿಯವರೇ, ಮುಖ್ಯವಾಗಿರುವ ಅಂಶ ಅಲ್ಲೇ ಇದೆ.

**ಶ್ರೀ ಬಸವರಾಜ ರಾಯರೆಡ್ಡಿಃ–** [XXX]. . . ನಾನು ಇನ್ನೂ ಕಂಪ್ಲೀಟ್ ಮಾಡಿಲ್ಲ.

**ಶ್ರೀ ಅರುಣ ಶಹಾಪುರಃ–** ಸನ್ಮಾನ್ಯ ಸಭಾಪತಿಯವರೇ, ಅವರು [XXX]. ಎಂದು ಸಂಬೋಧಿಸುವುದು ಸರಿಯಲ್ಲ.

**ಶ್ರೀ ಬಸವರಾಜ ರಾಯರೆಡ್ಡಿಃ–** ಸನ್ಮಾನ್ಯ ಸಭಾಪತಿಯವರೇ, ಇದರಲ್ಲಿ ಮತ್ತೊಂದು ತಿದ್ದುಪಡಿಯಿದೆ. 'ಕುಲಪತಿಗಳು ನಾಲ್ಕು ವರ್ಷಗಳ ಅವಧಿಯವರೆಗೆ ಪದಧಾರಣ ಮಾಡತಕ್ಕದ್ದು ಮತ್ತು ಮರು ನೇಮಕಗೊಳ್ಳಲು ಅರ್ಹರಾಗಿರತಕ್ಕದ್ದಲ್ಲ' ಎಂದು ಇದೆ. ಮೂಲ ಆಕ್ಟ್‌ನಲ್ಲಿ ಇಂಗ್ಲೀಷ್ ಭಾಷೆಯಲ್ಲಿ ಇದರ ವ್ಯಾಖ್ಯಾನ ಸರಿ ಇದೆ. ಕನ್ನಡ ಭಾಷೆಯಲ್ಲಿನ ವ್ಯಾಖ್ಯಾನ ಸರಿಯಿಲ್ಲ. ಇಂಗ್ಲೀಷ್ ಭಾಷೆಯಲ್ಲಿ 'ಮರು ನೇಮಕಾತಿ ಆಗಬಾರದು' ಎಂದು ಇದೆ. ಕನ್ನಡದಲ್ಲಿ 'ಮರು ನೇಮಕಗೊಳ್ಳಲು ಅರ್ಹರಾಗಿರತಕ್ಕದ್ದಲ್ಲ' ಎಂದು ಇದೆ. ಅದನ್ನು ತಿದ್ದುಪಡಿ ಮಾಡಿದ್ದೇವೆ. ಎಲ್ಲ ವಿಶ್ವವಿದ್ಯಾಲಯಗಳ ಕುಲಪತಿಗಳು 67 ವರ್ಷಕ್ಕೆ ನಿವೃತ್ತರಾಗುತ್ತಿರುವುದರಿಂದ ಈ ವಿಶ್ವವಿದ್ಯಾಲಯದ ಕುಲಪತಿಗಳು ಸಹ 67 ವರ್ಷಕ್ಕೇ ನಿವೃತ್ತಿ ಹೊಂದಬೇಕೆನ್ನುವ ದೃಷ್ಟಿಯಿಂದ ಈ ವಿಧೇಯಕವನ್ನು ತರಲಾಗಿದೆ. ಅದಕ್ಕೆ ಸದನವು ಅನುಮೋದನೆ ನೀಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

**ಶ್ರೀ ಅರುಣ ಶಹಾಪುರಃ–** ಸನ್ಮಾನ್ಯ ಸಭಾಪತಿಯವರೇ, ನಾನು ಮಾತನಾಡಲು ಎದ್ದು ನಿಂತಾಗ, ಮಾನ್ಯ ಸಚಿವರು [XXX]. ಎಂದು ಸಂಬೋಧನೆ ಮಾಡಿರುವುದನ್ನು ತಾವು ಕಡತದಿಂದ ತೆಗೆದು

---

[XXX] ಸಭಾಪತಿಯವರ ಆಜ್ಞಾನುಸಾರ ಕಡತದಿಂದ ತೆಗೆದು ಹಾಕಲಾಗಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹಾಕಬೇಕೆನ್ನುವುದು ನನ್ನ ಮನವಿಯಾಗಿದೆ. That is not in good. ಸದನದಲ್ಲಿ ಈ ರೀತಿ ಮಾತನಾಡುವುದು ಸರಿಯಲ್ಲ.

**ಸಭಾಪತಿಯವರುಃ–** ಮಾನ್ಯ ಮಂತ್ರಿಗಳು [XXX]. ಎಂದು ಸಂಬೋಧನೆ ಮಾಡಿರುವುದು ಕಡತದಲ್ಲಿ ದಾಖಲಾಗಿದ್ದರೆ ಅದನ್ನು ಕಡತದಿಂದ ತೆಗೆಯಲಾಗುವುದು. ಆ ರೀತಿ ಸಂಬೋಧನೆ ಮಾಡುವುದು ತಪ್ಪು.

**ಶ್ರೀ ಕೆ.ಸಿ.ಕೊಂಡಯ್ಯಃ–** ಸನ್ಮಾನ್ಯ ಸಭಾಪತಿಯವರೇ, 'ಎ' ಯಿಂದ 'ಬಿ' ವರೆಗೆ ಎಲ್ಲವನ್ನೂ ತೆಗೆಸಿ ಹಾಕೋಣ ಬಿಡಿ.

**ಶ್ರೀ ಅರುಣ ಶಹಾಪುರಃ–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಕೊಂಡಯ್ಯನವರು ಹಿರಿಯರು ಈ ವಿಚಾರವನ್ನು ಇಷ್ಟು ಲಘುವಾಗಿ ತೆಗೆದುಕೊಳ್ಳುವುದು ಬೇಡ. ನಾವು ಕಿರಿಯ ಸದಸ್ಯರು ನಮಗೆ ಇದು ಮಾರ್ಗದರ್ಶನವಾಗಬಾರದು. ನಾವು ಸಹ ಅದೇ ರೀತಿ ಮಾತನಾಡುವುದಕ್ಕೆ ಪ್ರಾರಂಭ ಮಾಡಿದರೆ, ಇದು ಎಲ್ಲಿಗೆ ಹೋಗಿ ನಿಲ್ಲುತ್ತದೆ ಎನ್ನುವುದನ್ನು ಅವರು ಆಲೋಚಿಸಬೇಕು.

**ಶ್ರೀ ಬಸವರಾಜ ರಾಯರೆಡ್ಡಿಃ–** ಸನ್ಮಾನ್ಯ ಸಭಾಪತಿಯವರೇ, ನಾನು ಅವರ ಬಗ್ಗೆ ಅಗೌರವದಿಂದ ಮಾತನಾಡಲಿಲ್ಲ.

**ಸಭಾಪತಿಯವರುಃ–** ಮಾನ್ಯ ಅರುಣ ಶಹಾಪುರರವರೇ, ಕುಲಪತಿಗಳ ನಿವೃತ್ತಿಯ ವಯಸ್ಸನ್ನು 65 ರಿಂದ 67 ವರ್ಷಕ್ಕೆ ಹೆಚ್ಚು ಮಾಡಿರುವುದರ ಬಗ್ಗೆ ತಮ್ಮ ಅಭಿಪ್ರಾಯವನ್ನು ತಿಳಿಸಿ. What is your point?

**ಶ್ರೀ ಅರುಣ ಶಹಾಪುರಃ–** ಸನ್ಮಾನ್ಯ ಸಭಾಪತಿಯವರೇ, ಈಗ ತರುತ್ತಿರುವ ತಿದ್ದುಪಡಿಯನ್ನು ಇವತ್ತಿನಿಂದ ಅನ್ವಯವಾಗುವಂತೆ ಮಾಡುತ್ತಾರೋ ಅಥವಾ ಈಗಾಗಲೇ ಸೇವೆಯಲ್ಲಿರುವವರಿಗೆ ಅನ್ವಯವಾಗುವಂತೆ ತಿದ್ದುಪಡಿ ಮಾಡಲಾಗುತ್ತಿದೆಯೇ ಎನ್ನುವುದನ್ನು ಮಾನ್ಯ ಸಚಿವರು

---

[XXX] ಸಭಾಪತಿಯವರ ಆಜ್ಞಾನುಸಾರ ಕಡತದಿಂದ ತೆಗೆದು ಹಾಕಲಾಗಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸ್ಪಷ್ಟಪಡಿಸಬೇಕಾಗಿದೆ. ಬಹಳ ಸಂದರ್ಭಗಳಲ್ಲಿ ಒಂದೊಂದು ವಿಶ್ವವಿದ್ಯಾಲಯಗಳಲ್ಲಿ ಒಂದೊಂದು ರೀತಿ ಆಗಿದೆ. ಕುಲಪತಿಗಳ ನಿವೃತ್ತಿ ವಯಸ್ಸನ್ನು 65 ರಿಂದ 67 ವರ್ಷಕ್ಕೆ ಹೆಚ್ಚಿಸುವುದು ಈಗಿನಿಂದ ನೇಮಕಾತಿ ಆಗುವವರಿಗೂ ಅನ್ವಯವಾಗುವಂತೆ ಇರಬೇಕೇ ಹೊರತು ಈಗ ಇರುವವರಿಗೆ ಅನುಕೂಲ ಮಾಡುತ್ತಿದ್ದೇವೆ ಎನ್ನುವಂತೆ ಆಗಬಾರದು. ಆದ್ದರಿಂದ ನಾನು ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಈ ಕಾನೂನು ತಿದ್ದುಪಡಿಯಾದ ನಂತರ ನೇಮಕಾತಿ ಆಗುವಂತಹ ಕುಲಪತಿಗಳಿಗೂ ಸಹ ಇದು ಅನ್ವಯವಾಗುತ್ತದೆ ಎನ್ನುವ ರೀತಿಯಲ್ಲಿ ಇದನ್ನು ಜಾರಿಗೆ ತರಬೇಕಾಗುತ್ತದೆ. ಇಲ್ಲದಿದ್ದರೆ ಹಾಲಿ ಇರುವಂತಹ ಕುಲಪತಿಗಳಿಗೆ ಮಾತ್ರ ಲಾಭ ಮಾಡುವುದಕ್ಕೆ ಈ ತಿದ್ದುಪಡಿಯನ್ನು ತರಲಾಗಿದೆ ಎನ್ನುವ ರೀತಿಯಲ್ಲಿ ಆಗಬಾರದು.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್(ವಿರೋಧ ಪಕ್ಷದ ಮುಖ್ಯ ಸಚೇತಕರು):-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಉನ್ನತ ಶಿಕ್ಷಣ ಸಚಿವರು ಹಿಂದೆ ಈ ಸದನದಲ್ಲಿ 'ಎಲ್ಲ ವಿಶ್ವವಿದ್ಯಾಲಯಗಳಿಗೂ ಅನ್ವಯವಾಗುವಂತಹ ಏಕರೂಪದ ಕಾನೂನು ನಮ್ಮಲ್ಲಿ ಇಲ್ಲ' ಎಂದು ಗಟ್ಟಿಯಾಗಿ ಹೇಳಿದ್ದರು. ಈ ರೀತಿ ಸಣ್ಣಪುಟ್ಟ ತಿದ್ದುಪಡಿಗಳನ್ನು ತರುವುದಕ್ಕೆ ಬದಲಾಗಿ, ಎಲ್ಲ ವಿಶ್ವವಿದ್ಯಾಲಯಗಳಿಗೆ ಸಮಾನವಾಗಿ ಅನ್ವಯವಾಗುವಂತಹ ಏಕರೂಪದ ಕಾಯಿದೆಯನ್ನು ಜಾರಿಗೆ ತಂದರೆ, ಈ ರೀತಿ ಪದೇಪದೇ ಸಣ್ಣಪುಟ್ಟ ತಿದ್ದುಪಡಿಗಳನ್ನು ತರುವಂತಹ ಅಗತ್ಯವೇ ಇರುವುದಿಲ್ಲ. ಏಕರೂಪ ಕಾಯಿದೆಯನ್ನು ಯಾವಾಗ ಜಾರಿಗೆ ತರಲಾಗುತ್ತದೆ ಎನ್ನುವುದು ನನ್ನ ಪ್ರಶ್ನೆಯಾಗಿದೆ.

ಮಾನ್ಯ ಅರುಣ ಶಹಾಪುರ್‌ರವರು ಹೇಳಿದಂತೆ ಈ ತಿದ್ದುಪಡಿಯನ್ನು ತರುವ ಮೂಲಕ ಯಾರಿಗೋ ಒಬ್ಬರಿಗೆ ಅನುಕೂಲ ಮಾಡಿಕೊಡುತ್ತಿದ್ದಾರೆ ಎನ್ನುವಂತಹ ಊಹಾಪೋಹಗಳುಂಟಾಗಬಾರದು. ಈ ತಿದ್ದುಪಡಿಯನ್ನು ಹೊಸದಾಗಿ ನೇಮಕಾತಿ ಆಗುವವರಿಗೂ ಅನ್ವಯ ಮಾಡಲಾಗುತ್ತದೆಯೇ, ಈಗ ಇರುವವರಿಗೂ ಅನ್ವಯಿಸಲಾಗುತ್ತದೆಯೇ ಅಥವಾ ತಪ್ಪಾಗಿರುವುದನ್ನು ತಿದ್ದಿಕೊಳ್ಳುವ ಉದ್ದೇಶದಿಂದ ಈ ತಿದ್ದುಪಡಿಯನ್ನು ತರಲಾಗುತ್ತಿದೆಯೇ ಎನ್ನುವ ಪ್ರಶ್ನೆಗಳಿಗೆ ಉತ್ತರ ಸಿಗಬೇಕಾದರೆ, ಎಲ್ಲ ವಿಶ್ವವಿದ್ಯಾಲಯಗಳಿಗೂ ಅನ್ವಯವಾಗುವ ಸಮಗ್ರ ತಿದ್ದುಪಡಿ ವಿಧೇಯಕವನ್ನು ತಂದರೆ, ಈ ರೀತಿಯ ಗೊಂದಲಗಳು ಇರುವುದಿಲ್ಲ. ಈ ಸಲಹೆಯನ್ನು ಮಾನ್ಯ ಸಚಿವರು ಪರಿಗಣಿಸಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಟಿ.ಶ್ರೀಕಂಠೇಗೌಡ(ಶಿಕ್ಷಕರ ಕ್ಷೇತ್ರ):–** ಸನ್ಮಾನ್ಯ ಸಭಾಪತಿಯವರೇ, ಈಗಾಗಲೇ ಉಳಿದೆಲ್ಲ ವಿಶ್ವವಿದ್ಯಾಲಯಗಳಲ್ಲಿ ಕುಲಪತಿಗಳ ನಿವೃತ್ತಿ ವಯಸ್ಸನ್ನು 67 ವರ್ಷ ಎಂದು ನಿಗದಿಪಡಿಸಲಾಗಿದೆ. ಅದೇ ನಿಯಮವನ್ನು ಸಂಸ್ಕೃತ ವಿಶ್ವವಿದ್ಯಾಲಯಕ್ಕೂ ಅನ್ವಯಿಸುವುದಕ್ಕೆ ಈ ತಿದ್ದುಪಡಿಯನ್ನು ತರಲಾಗುತ್ತಿದೆ. ಇದು ಸರಿಯಾದಂತಹ ಕ್ರಮವಾಗಿದೆ. ಬೇರೆ ಎಲ್ಲ ವಿಶ್ವವಿದ್ಯಾಲಯಗಳಲ್ಲಿರುವ ಕುಲಪತಿಗಳ ನಿವೃತ್ತಿಗೆ 67 ವರ್ಷಗಳ ಸೇವಾವಧಿಯ ಅವಕಾಶವನ್ನು ಕಲ್ಪಿಸಿಕೊಟ್ಟಿರುವಾಗ ಈ ವಿಶ್ವವಿದ್ಯಾಲಯಕ್ಕೂ ಆ ಅವಕಾಶವನ್ನು ಕಲ್ಪಿಸಿಕೊಡಲು ಹೊರಟಿರುವ ಸರ್ಕಾರದ ನಿಲುವನ್ನು ನಾನು ಸ್ವಾಗತಿಸುತ್ತೇನೆ.

(ಮುಂದುವರೆದಿದೆ)

(443) 24.03.2017 ಟಿ.ಸಿ.ಹೆಚ್/ವಿ.ಕೆ, 2.30 **(ಸಭಾಪತಿಯವರ ಉಪಸ್ಥಿತಿ)**

**ಸಭಾಪತಿಯವರು:–** ಆದರೆ ಒಂದು ಕಂಡಿಷನ್, ಮಾನ್ಯ ಸದಸ್ಯರಾದಂತಹ ಶ್ರೀ ವಿ.ಎಸ್.ಉಗ್ರಪ್ಪನವರು ಸಂಸ್ಕೃತದಲ್ಲಿ ಮಾತನಾಡಬೇಕು.

**ಶ್ರೀ ಭಾನುಪ್ರಕಾಶ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದಂತಹ ಶ್ರೀ ವಿ.ಎಸ್.ಉಗ್ರಪ್ಪನವರು ಸಂಸ್ಕೃತದಲ್ಲೇ quote ಮಾಡಬೇಕು.

**ಸಭಾಪತಿಯವರು:–** ಹೌದು ಅವರು ಸಂಸ್ಕೃತದಲ್ಲಿ ಮಾತನಾಡುತ್ತಾರೆ.

**ಶ್ರೀ ವಿ.ಎಸ್.ಉಗ್ರಪ್ಪ (ನಾಮ ನಿರ್ದೇಶನ ಹೊಂದಿದವರು):–** ಮಾನ್ಯ ಸಭಾಪತಿಯವರೇ, ಸಂಸ್ಕೃತದಲ್ಲಿ ಮಾತನಾಡುವವರು ಅಲ್ಲಿ ಇದ್ದಾರೆ. ಇದರ ಪ್ರಯತ್ನ ಹೇಗೆ ಅಂದರೆ...

**ಸಭಾಪತಿಯವರು:–** ಅವರು ಸಂಸ್ಕೃತದಲ್ಲಿ ಮಾತನಾಡಿದರೆ ಯಾರಿಗೂ ಅರ್ಥವಾಗುವುದಿಲ್ಲ. ಬಾಸ್, ಬಾಸ್ ಅನ್ನುತ್ತಾರೆ.

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಯವರೇ, ಇದು ಹೇಗೆ ಅಂದರೆ (ಗೊಂದಲ) "ಭವ್ಯಂ, ಭವತಿಜ, ಭವ್ಯಂ, ವಿನಾಪಿ ಯತ್ನೆಲಾ ಕರತಲ, ಗತಂ ಅಪಿ ನಶ್ಯೇಯಿ ಭವ್ಯ ವಿತಿಯೆತ ನಾಸ್ತಿ" ಎಂದು ಹೇಳಿದ್ದಾರೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಭಾನುಪ್ರಕಾಶ(ವಿಧಾನ ಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, "ತತನ ಬವಾನ್ ಸಂಸ್ಕೃತಂ ಪಟಿತವಂತಹ, ತದರ್ಥೆ ಸಂಸ್ಕೃತಮೇವೆ ವಕ್ತಮೇಯಿತಿ"

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೆ, ಧನ್ಯವಾದಗಳು.

**ಸಭಾಪತಿಯವರು:-** ಅದು ನಮಗೆ ಗೊತ್ತಿಲ್ಲ.

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೇ, ಏನು ಪ್ರಯತ್ನ ಮಾಡಿದರೂ ಆಗುವುದೇ ಆಗುತ್ತದೆ ಎನ್ನುವಂಥದ್ದು ಅದರ ಪೂರ್ಣ ಅರ್ಥ ಅಷ್ಟೇ.

**ಸಭಾಪತಿಯವರು:-** ನೀವು ಇಡೀ ವಿಶ್ವವಿದ್ಯಾನಿಲಯದ ಬಗ್ಗೆ ಮಾತನಾಡುವುದಕ್ಕೆ ಬಿಡುವುದಿಲ್ಲ ನಾನು, ನಿವೃತ್ತಿ ವಯಸ್ಸಿನ ಬಗ್ಗೆ 67 ಮತ್ತು 65 ನ್ನು ಮಾತ್ರ ಮಾತನಾಡುವುದು ಅಷ್ಟೇ.

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೇ, ಇಲ್ಲ, ಇಲ್ಲ, Supreme Court has already laid down a law. Indians average lifespan is 65 years, ಇದನ್ನು ನಾನು ಹೇಳುತ್ತಿಲ್ಲ, Supreme Court ಹೇಳುತ್ತಿರುವುದು. So, any way ಈಗ...

**ಸಭಾಪತಿಯವರು:-** ಕರ್ನಾಟಕದಲ್ಲಿ 67 ವಯಸ್ಸಿನವರೆಗೆ ಬದುಕುತ್ತೇವೆಂದು ಇಚ್ಛೆಪಟ್ಟಿದ್ದಾರೆ.

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೇ, ಸರ್ಕಾರಿ ನೌಕರರಿಗೆ ನಿವೃತ್ತಿಯ ವಯಸ್ಸು 58 ವರ್ಷ ಇತ್ತು. ಈಗ ಅವರ ನಿವೃತ್ತಿಯ ವಯಸ್ಸನ್ನು 60 ವರ್ಷ ಮಾಡಿದ್ದಾರೆ. ಈ ಪ್ರೊಫೆಸರ್‌ಗಳಿಗೆ ನಿವೃತ್ತಿಯ ವಯಸ್ಸು 65 ವರ್ಷವಿತ್ತು. ಈಗ ಅವರ ನಿವೃತ್ತಿಯ ವಯಸ್ಸು 70 ವರ್ಷದವರೆವಿಗೂ ತೆಗೆದುಕೊಂಡು ಹೋಗಿದ್ದಾರೆ. ಇದರಲ್ಲಿ ವೈಜ್ಞಾನಿಕವಾಗಿ ಯಾವ logic ಇದೆಯೋ ಗೊತ್ತಿಲ್ಲ. ಬಹುಶಃ ಇದರ ಬಗ್ಗೆ ಇವರು ವೈಜ್ಞಾನಿಕವಾಗಿ ಆ ಕಾರಣಗಳು ಏನು ಅನ್ನುವುದನ್ನು ಇವರು explain ಮಾಡುವುದು ಸೂಕ್ತ ಎಂದು ಹೇಳುತ್ತೇನೆ.

**ಸಭಾಪತಿಯವರು:-** ನೀವು ಈಗ ಮೂಲಭೂತ ಪ್ರಶ್ನೆಗೆ ಬಂದಿದ್ದೀರಾ. ಕಾರಣವೇನೆಂದರೆ ಮಾನ್ಯ ಸಚಿವರ ವಯಸ್ಸು ಎಷ್ಟು ಎಂದು ಈಗ ಕೇಳುತ್ತೀರಾ, ಹಾಗೆಲ್ಲಾ ಕೇಳುವ ಹಾಗಿಲ್ಲ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೇ, ಇಲ್ಲ, enhance ಮಾಡುತ್ತಿರಬೇಕಾದರೆ, ನಮ್ಮಂಥವರಿಗೆ ಕೆಲವರು ಹೇಳುತ್ತಾರೆ, 60 ವರ್ಷ ಆದ ಮೇಲೆ ಅರುಳೋ, ಮರಳೋ ಎಂದು ಹೇಳುತ್ತಾರೆ. ಬಹುಶಃ ಈಗ ಯಾರಿಗೂ ಅರಳೋ, ಮರಳೋ ಆಗುವುದಿಲ್ಲವೆಂದು ತಿಳಿದುಕೊಂಡಿದ್ದೇನೆ.

**(ಗೊಂದಲ)**

**ಸಭಾಪತಿಯವರು:-** ಈಗ ಸಮಯವಾಯಿತು, ತಾವು ಬೇಗ ಮಾತನಾಡಿ ಮುಗಿಸುವುದು.

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೇ, ನೋಡಿ Section 12(B) ನಲ್ಲಿ ಇದರಲ್ಲಿ ಏಕೆ "The Vice Chancellor may by writing under his hand address to the Chancellor and after giving two months notice resign to his office." ನಾಳೆ ಬೆಳಿಗ್ಗೆ Vice Chancellor ರಾಜ್ಯಸಭೆಗೆ ನಿಲ್ಲಬೇಕು ಅಥವಾ ಪಾರ್ಲಿಮೆಂಟಿಗೆ ನಿಲ್ಲಬೇಕು, Why this two months notice?

**Mr. CHAIRMAN:-** Resignation instantaneous ಆಗಬೇಕೆಂದು.

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೇ, ನಾನು ಉದಾಹರಣೆ ಕೊಡುತ್ತಿದ್ದೇನೆ, Yes, tomorrow Ruling Party is going to select somebody as a candidate for Rajya Sabha. ಅವರು ಅಲ್ಲಿ ಅಭ್ಯರ್ಥಿಯಾದರೆ, Office of Profit" ಬರುತ್ತದೆ. Then one has to file a Election Petition to declare.

**Mr. CHAIRMAN:-** Instantaneous ಆಗಬೇಕೆಂದು ನೀವು ಹೇಳುವುದು ಅಷ್ಟೇ. ಆ ಎರಡು ತಿಂಗಳು ಬೇಡವೆಂದು.

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೇ, So, ಅದಕ್ಕೆ ನನಗೆ ಈ ಎರಡು ತಿಂಗಳಿನ ಕಾರಣವೇನು, I think this is not necessary. ಇದು ಒಂದು. ಕೊನೆಯದಾಗಿ, Section 57 ನಲ್ಲಿ ಈ ಹೆಸರು ಬದಲಾವಣೆ ಮಾಡುತ್ತಿದ್ದಾರೆ. ಏತಕ್ಕೆ ಇವರಿಗೆ ಇಷ್ಟೊಂದು interest ಈ ರೀತಿ. ನೋಡಿ Controller of State Accounts ಅದರ ಬದಲು, the words "Principal Director, Karnataka State Audit and Accounts

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

Department" ಎಂದು ಹೇಳಿ. ಮೊದಲು ಇರುವ ಹೆಸರಿಗೂ, ಈಗ ಇರುವ ಹೆಸರನ್ನು ಬದಲಾವಣೆ ಮಾಡುವುದಕ್ಕೆ ಕಾರಣವೇನು? ಇದರಲ್ಲೇನಾದರೂ variations ಇದೆಯೆ? ಈ ಮೂರನ್ನು clarify ಮಾಡಬೇಕು.

**ಸಭಾಪತಿಯವರು:-** ಮಾನ್ಯ ಸಚಿವರು ಹೇಳುತ್ತಾರೆ.

**ಶ್ರೀ ಬಸವರಾಜ ರಾಯರೆಡ್ಡಿ (ಉನ್ನತ ಶಿಕ್ಷಣ ಸಚಿವರು):-** ಮಾನ್ಯ ಸಭಾಪತಿಯವರೇ, ಅವರು ಸಂಸ್ಕೃತ ಪಂಡಿತರು, ಕಾನೂನು ಪಂಡಿತರು ಮತ್ತು ಎಲ್ಲಾ ಪಂಡಿತರು. ನಾನು ಮತ್ತು ಮಾನ್ಯ ಸದಸ್ಯರಾದಂತಹ ಶ್ರೀ ವಿ.ಎಸ್. ಉಗ್ರಪ್ಪನವರು ಒಟ್ಟಿಗೆ ಓದಿದವರು. ಮಾನ್ಯ ಸಭಾಪತಿಯವರೆ, ನನಗೂ ಒಂದು ಸಂಸ್ಕೃತ ಗೊತ್ತಿದೆ. "ವಸಂತ ಮಾಸೆ ಕಾಕಾಕಹ ಪಿಕಪಿಕಹ" ಎಂದು ಹೇಳಿ. ಈಗ ಮಾನ್ಯ ಸದಸ್ಯರಾದಂತಹ ಶ್ರೀ ವಿ.ಎಸ್. ಉಗ್ರಪ್ಪನವರ ಎದುರಿಗೆ ವಸಂತ ಮಾಸ ಬಂದಾಗ, ಅವರು ಕೋಗಿಲೆಯಾಗಿ ಅವರು ಹಾಡುತ್ತಲೇ ಇದ್ದಾರೆ, ಕೋಗಿಲೆ ಮತ್ತು ಕಾಗೆ ಒಂದೇ ತರಹ ಕಾಣದೆ ಇದ್ದರೂ, ನೀವು ವಸಂತ ಮಾಸದಲ್ಲಿ ಹಾಡುತ್ತಿದ್ದೀರಾ, ನೀವು ಹಾಡುವಂತಹ ಸಂದರ್ಭದಲ್ಲಿ ನಾನು ಏನನ್ನು ಹಾಡಲಿ. ಅದಕ್ಕೆ ಇಂತಹ ವಿದ್ವಾಂಸರ ಜೊತೆಗೆ ಮಾತನಾಡುವುದು ಬಹಳ ಕಷ್ಟ. ಆದರೂ ಕೂಡ ಒಂದು ಮಾತನ್ನು ಹೇಳುತ್ತೇನೆ. ಮಾನ್ಯ ಸದಸ್ಯರಾದಂತಹ ಕ್ಯಾಪ್ಟನ್ ಗಣೇಶ್ ಕಾರ್ಣಿಕ್‌ರವರು ಹೇಳಿದ್ದಾರೆ. ಈಗಾಗಲೇ ನಮ್ಮ ಸರ್ಕಾರ "Karnataka Comprehensive University Act" ತರಬೇಕೆಂದು ಒಪ್ಪಿಕೊಂಡಿದೆ. ಏಕೆಂದರೆ, ತಮಗೂ ಗೊತ್ತಿದೆ, ತಾವೂ ಕೂಡ ಉನ್ನತ ಶಿಕ್ಷಣ ಮಂತ್ರಿಗಳಾಗಿ ಕೆಲಸ ಮಾಡಿದಂತಹವರು. ಈಗಿರುವಂತಹ ವಿಶ್ವವಿದ್ಯಾನಿಲಯಗಳಲ್ಲಿ, ಪ್ರತಿ ವಿಶ್ವವಿದ್ಯಾನಿಲಯಲದಲ್ಲಿ ಒಂದೊಂದು ಕಾಯ್ದೆ ಇರುವುದರಿಂದ ಬಹಳ ಸಮಸ್ಯೆಗಳು ಇವೆ ಮತ್ತು ಸರ್ಕಾರಕ್ಕೆ Vice Chancellor ಮೇಲೆ action ತೆಗೆದುಕೊಳ್ಳವುದಕ್ಕೆ ಆಗುವುದಿಲ್ಲ. ಅದೆಲ್ಲಾ ಬಹಳ ದೊಡ್ಡ ಕಥೆ, ಅದು ಇರಲಿ. ಸಧ್ಯಕ್ಕೆ ಅವುಗಳೆಲ್ಲವನ್ನು ನಿಯಂತ್ರಣಕ್ಕೆ ತರುವುದಕ್ಕಾಗಿಯೇ comprehensive Act ಅನ್ನ ತರುತ್ತಿದ್ದೇವೆ. ಈಗಾಗಲೇ Act final ಆಗಿದೆ. Higher Education Council Committee ಯಲ್ಲಿ final ಆಗಿದೆ. University Reforms Committee ಯಲ್ಲಿ final ಆಗಿದೆ. Parliamentary Affairs Department ನವರು clear ಮಾಡಿದ್ದಾರೆ. ಈಗ ಅದು ಕಾನೂನು ಇಲಾಖೆಯಲ್ಲಿ ಇದೆ. ಈಗ Law Department ನಲ್ಲಿ scrutiny ಆಗುತ್ತಿದೆ. ಬಹುತೇಕ ಇದನ್ನು ಈ ಅಧಿವೇಶನದಲ್ಲಿ ತರುವುದಕ್ಕೆ ಆಗುವುದಿಲ್ಲ,

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಏಕೆಂದರೆ, Law Department clearance ಸಿಗಬೇಕಾಗಿತ್ತು. ಮುಂದಿನ ಅಧಿವೇಶನದಲ್ಲಿ ಖಂಡಿತವಾಗಿ comprehensive Act ತಂದಾಗ, ಈ ಗೊಂದಲಗಳಿಗೆ ತೆರೆಯನ್ನು ಎಳೆಯುತ್ತೇವೆ. ಮತ್ತೆ ತಾವು ಹೇಳಿದ್ದೀರಲ್ಲ ಯಾವುದೋ ಒಬ್ಬ ವ್ಯಕ್ತಿಗೆ ತಾವು ಅನುಕೂಲ ಮಾಡುವ ಸಲುವಾಗಿ, ಈ ವಯಸ್ಸಿನ ಮಿತಿಯನ್ನು ಏರಿಸುತ್ತಿದ್ದೀರಾ ಎಂದು ಹೇಳುತ್ತಿದ್ದೀರಿ. ಅದು ಖಂಡಿತವಾಗಿ ಇಲ್ಲ, ಯಾರಿಗೋ ಅನುಕೂಲ ಮಾಡಿಕೊಡಬೇಕೆಂಬ ಉದ್ದೇಶ ಸರ್ಕಾರದ ಮುಂದೆ ಇಲ್ಲ. ನಮ್ಮ ಉದ್ದೇಶ ಎಲ್ಲಾ ವಿಶ್ವವಿದ್ಯಾನಿಲಯಗಳಲ್ಲಿ ಏಕರೂಪವಾಗಿ 67 ವರ್ಷ ವಯಸ್ಸು ಇದ್ದಾಗ ಮತ್ತು ಒಂದು ವಿಶ್ವವಿದ್ಯಾನಿಲಯಕ್ಕ 65 ವರ್ಷ ವಯಸ್ಸು ಎಂದು ಇದ್ದಾಗ, ಇದು ಸರಿ ಕಾಣುವುದಿಲ್ಲ, ಎನ್ನುವಂತಹ ದೃಷ್ಟಿಕೋನದಿಂದ ಮಾಡಿದ್ದೇವೆ. ಮಾನ್ಯ ಸದಸ್ಯರಾದಂತಹ ಶ್ರೀ ವಿ.ಎಸ್.ಉಗ್ರಪ್ಪನವರು ಸಾಮಾಜಿಕ ಹೋರಾಟ ಪರವಾಗಿ ಇರುವಂತಹವರು. ಒಬ್ಬರಿಗೊಂದು, ಇನ್ನೊಬ್ಬರಿಗೆ ಒಂದು ಅಂದರೆ ಹೇಗೆ? ಸಂಸ್ಕೃತಕ್ಕೆ ಸಾಮಾಜಿಕ ನ್ಯಾಯ ಸಿಗಲಿ ಎನ್ನುವಂತಹ ದೃಷ್ಟಿಕೋನದಿಂದ ಎಲ್ಲರಿಗೂ ಸಮಾನತೆ ಸಿಗಲಿ ಎನ್ನುವಂಥ ಸದುದ್ದೇಶದಿಂದ ಸರ್ಕಾರ ತಂದಿದೆ ಮತ್ತು ಕುಲಪತಿಯವರು, ಕುಲಾಧಿಪತಿಯವರಿಗೆ ಎರಡು ತಿಂಗಳ ಕಾಲ ಏತಕ್ಕೆ ಕಾಯಬೇಕು ಪತ್ರ ಕೊಟ್ಟಿರುವ ರಾಜೀನಾಮೆ ಎನ್ನುವಂಥ ಪ್ರಶ್ನೆಯನ್ನು ಕೇಳಿದ್ದಾರೆ. ಕೆಲವೊಂದು ಸಂದರ್ಭದಲ್ಲಿ ಆ ವಿಶ್ವವಿದ್ಯಾಲಯದಲ್ಲಿ ಈಗಿರುವ ಪರಿಸ್ಥಿತಿಯಲ್ಲಿ ಯಾವುದಾದರೂ ವಿಶ್ವವಿದ್ಯಾಲಯದಲ್ಲಿ ತಕ್ಷಣ ರಾಜೀನಾಮೆಯನ್ನು ಒಪ್ಪಿಕೊಂಡರೆ, ತಾವು ನೋಡುತ್ತಿದ್ದೀರಿ ಬಹಳಷ್ಟು ವಿಶ್ವವಿದ್ಯಾಲಯಗಳಲ್ಲಿ ಅವ್ಯವಹಾರಗಳು ಮತ್ತು ಅನಾನುಕೂಲ ಆಗುತ್ತಿದೆ. ಇವೆಲ್ಲವೂ ಆಗಬೇಕಾದರೆ ಸ್ವಲ್ಪ ದಿನ ಸ್ಕ್ರೂಟ್ನಿ ಮಾಡುವುದಕ್ಕೆ ಸಾಧ್ಯವಿದೆ ಎನ್ನುಂಥದ್ದನ್ನು ಗಮನದಲ್ಲಿಟ್ಟುಕೊಂಡು ಈ ಸದುದ್ದೇಶದಿಂದ ವಿಧೇಯಕವನ್ನು ತಂದಿದ್ದೇವೆ. ಇದು ಒಂದು ಸಣ್ಣ ತಿದ್ದುಪಡಿ ಆಗಿರುವುದರಿಂದ ದಯವಿಟ್ಟು ಇದಕ್ಕೆ ಒಪ್ಪಿಗೆ ಕೊಡಬೇಕೆಂದು ನಾನು ಸದನವನ್ನು ಕೋರುತ್ತೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

“ವಿಧಾನಸಭೆಯಿಂದ ತಿದ್ದುಪಡಿಗಳೊಂದಿಗೆ ಅಂಗೀಕೃತ ರೂಪದಲ್ಲಿರುವ 2017ರ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು.”

**<u>ಪ್ರಸ್ತಾವ ಅಂಗೀಕರಿಸಲ್ಪಟ್ಟಿತು</u>**

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು.**

**ಖಂಡ 2 ಮತ್ತು 3**

**ಸಭಾಪತಿಯವರು:–** ಖಂಡ 2 ಮತ್ತು 3 ವಿಧೇಯಕದ ಅಂಗವಾಗಿರುತ್ತದೆ.

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಖಂಡ 2 ಮತ್ತು 3 ವಿಧೇಯಕಕ್ಕೆ ಸೇರಿಸಲಾಯಿತು)**

**ಖಂಡ 1 ಇತರೆ**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕದ ಭಾಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.**

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಪ್ರಸ್ತಾವದ ಅಂಗೀಕಾರ**

**ಶ್ರೀ ಬಸವರಾಜ ರಾಯರೆಡ್ಡಿ (ಉನ್ನತ ಶಿಕ್ಷಣ ಸಚಿವರು):–** ಮಾನ್ಯ ಸಭಾಪತಿಯವರೇ, "ವಿಧಾನಸಭೆಯಿಂದ ತಿದ್ದುಪಡಿಗಳೊಂದಿಗೆ ಅಂಗೀಕೃತ ರೂಪದಲ್ಲಿರುವ 2017ರ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ."

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"ವಿಧಾನಸಭೆಯಿಂದ ತಿದ್ದುಪಡಿಗಳೊಂದಿಗೆ ಅಂಗೀಕೃತ ರೂಪದಲ್ಲಿರುವ 2017ರ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.**

(ಮುಂದು.)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(444) 24.3.2017 2.40 ಪಿಕೆ:ಬಿಎನ್ಎಸ್

**7. ಪ್ರಕಟಣೆ**

**ಸಭಾಪತಿಯವರು:-**ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 113(1)ರ ಮೇರೆಗೆ ವಿಧಾನಸಭೆಯು ದಿನಾಂಕ 23.3.2017ರಂದು ಕರ್ನಾಟಕ ವಿಧಾನಪರಿಷತ್ತಿನಿಂದ ತಿದ್ದುಪಡಿಗಳೊಂದಿಗೆ ಅಂಗೀಕಾರ ರೂಪದಲ್ಲಿರುವ 2017ನೇ ಸಾಲಿನ ಕರ್ನಾಟಕ ಶಿಕ್ಷಣ (ತಿದ್ದುಪಡಿ) ವಿಧೇಯಕವನ್ನು ಪುನರ್ಪರ್ಯಾಲೋಚಿಸಿ ಅಂಗೀಕರಿಸಿರುತ್ತದೆ ಎಂದು ಸದನದ ಗಮನಕ್ಕೆ ತರಲು ಮಾನ್ಯ ಸಭಾಧ್ಯಕ್ಷರು ನನಗೆ ಕಳುಹಿಸಿಕೊಟ್ಟಿದ್ದಾರೆ. ಇದನ್ನು ಸಭೆಯ ಗಮನಕ್ಕೆ ತರುತ್ತಿದ್ದೇನೆ.

ಈಗ ಸದನವನ್ನು ಸೋಮವಾರ ಬೆಳಿಗ್ಗೆ 11.00 ಗಂಟೆಯವರೆಗೆ ಮುಂದೂಡುತ್ತಿದ್ದೇನೆ.

**(ಸದನವು ಮಧ್ಯಾಹ್ನ 2 ಗಂಟೆ 41 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ 27ನೇ ಮಾರ್ಚ್ ಮಾಹೆ 2017ರ ಸೋಮವಾರ ಬೆಳಿಗ್ಗೆ 11.00 ಗಂಟೆಗೆ ಸೇರಲು ನಿಶ್ಚಯಿಸಿತು)**

*****

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"